ಲೇಸಿನ ಬಾಳು ಎಷ್ಟು ತಾಸು ನಡೆಸಿದರೇನು ಅದು ಭವಪಾಶ ಹರಿದು ಮುಕ್ತಿ ಪಥದತ್ತ ಒಯ್ಯುವುದು. ಲೇಸೆನಿಸಿ ಕೊಳ್ಳದ ಬಾಳು ಸಾವಿರ ವರ್ಷ ಬದುಕಿದರೂ ಸರಿಯೆ ಅದರಿಂದ ಯಾರಿಗೂ ಏನೂ ಹಿತಕರವಾಗಲಾರದು. ಲೇಸೆನಿಸಿ ಕೊಂಡು ಬದುಕುವುದೆ ಶರಣರ ಧ್ಯೇಯವಾಗಿತ್ತು, ಒಬ್ಬ ವ್ಯಕ್ತಿ ಎಷ್ಟು ವರ್ಷ ಬದುಕಿದನೆನ್ನುವುದು ಮುಖ್ಯವಲ್ಲ ಬದುಕಿನಲ್ಲಿ ಏನನ್ನು ಸಾಧಿಸಿದ ಎನ್ನುವುದು ಮುಖ್ಯ, ಹದ್ದು ಸಾವಿರ ವರ್ಷ ಬದುಕುತ್ತದೆ ಲಾಭವೇನು ? ಸ್ವಲ್ಪ ವಯಸ್ಸಿನಲ್ಲಿಯೇ ಮಹತ್ತರವಾದುದನ್ನು ಸಾಧಿಸುವುದೇ ಜೀವನದ ಗುರಿಯಾಗಿದೆ. ಕಿರಿದರಲ್ಲಿ ಹಿರಿತನವನ್ನು ಸಾಧಿಸುವುದು, ಅರಿಯದನ್ನು ಅರಿವಿಗೆ ತಂದು ಕೊಳ್ಳುವುದು ಸಾಮಾನ್ಯ ಕ್ರಿಯೆ ಯೇನಲ್ಲ, ಚಿಕ್ಕ ವಯಸ್ಸಿನಲ್ಲಿ ಚೊಕ್ಕ ಚಿನ್ನದಂಥ ಜ್ಞಾನ ಸಂಪಾದಿಸಿ ಮುಕ್ತಾತ್ಮ ರಾದವರೂ ಇದ್ದಾರೆ. ಚನ್ನಬಸವಣ್ಣ, ಶಂಕರಾಚಾರ್ಯ, ವಿವೇಕಾನಂದ, ಇವರೆಲ್ಲ ಚಿಕ್ಕವಯಸ್ಸಿನಲ್ಲಿ ಜ್ಞಾನದೆತ್ತರಕ್ಕೆ ಮೇಗ್‌ ಬಿತ್ತರಕ್ಕೆ ಮುಟ್ಟಿದವರು. ಇಂಥವರ ಸಂಖ್ಯೆ ಬಹುವಿರಳ ಈ ವಿರಳರಲ್ಲಿ ವಿರಳರಾಗಿ, ಚಿಕ್ಕ ಮೂರ್ತಿಯಾದರೂ ತನ್ನ ಕೀರ್ತಿ ದಶದಿಕ್ಕುಗಳತ್ತ ಚಾಚುತ್ತ, ಕಲ್ಲರಳಿಯಲ್ಲಿ ಹೂವಾಗಿ ಅರಳಿ, ತನ್ನ ಮಕರಂದವನ್ನು ಎಲ್ಲೆಡೆ ಚೆಲ್ಲಿ. ಎಲ್ಲರಿಗೆ ಬೇಕಾಗಿ ಬೆಳೆಯುತ್ತಿರುವ ಸುಫಲ ಮಠಾಧೀಶರಾದ ಶ್ರೀ ಷ. ಬ್ರ. ಮಹಾಂತ ಶಿವಾಚಾರ್ಯರು ಈ ಯುಗದ ಮಹತ್ವದ ಒಂದು ಆಶಾ ಕಿರಣವಾಗಿದ್ದಾರೆ. ಅವರಿನ್ನೂ ಚಿಕ್ಕವರು. ಆದರೂ ಪೀಠಕ್ಕೆ ಅಧಿಪತಿಯಾಗಿ ಆಗಲೆ ಹನ್ನೆರಡು ವರ್ಷಗಳು ಸಂದವು. ಒಳ್ಳೆಯ ದಿನಗಳು ಒಳ್ಳೆಯವರಿಗೆ ಬಹುಬೇಗ ಕಳೆದು ಹೋಗುತ್ತವೆ ಎಂಬುದಕ್ಕೆ ಇದೊಂದು ನಿದರ್ಶನ. ಪೂಜ್ಯರು ಸ್ವಲ್ಪ ಸಮಯದಲ್ಲಿಯೇ ಸಾಧಿಸಿದ ಜನಾನುರಾಗ, ಭಕ್ತರ ಪ್ರೀತಿ, ಒಲವು ವಿಶ್ವಾಸಗಳು ಎಂಥವವೆಂಬುದಕ್ಕೆ ಈ ದ್ವಾದಶ ಮಹೋತ್ಸವವೇ ನಿದರ್ಶನವಾಗಿದೆ,

ಒಟ್ಟಿನಲ್ಲಿ ಅವರು ಎಲ್ಲ ಭಕ್ತರ ನಡುವೆ ಲೇಸಿನ ಬಾಳು ಸಾಗಿಸುತ್ತಿದ್ದಾರೆ. ಲೇಸೆನಿಸಿಕೊಂಡು ಬದುಕುವುದು ಅವರ ಬದುಕಿನುಸಿರಾಗಿದೆ, ಅಣ್ಣನವರು ಹೇಳುವಂತೆ.

ಲೇಸೆನಿಸಿಕೊಂಡು ಐದು ದಿನ ಬದುಕಿದರೆ ಸಾಲದೆ ?
ಲೇಸೆನಿಸಿಕೊಂಡು ನಾಲ್ಕು ನಾಲ್ಕು ದಿನ ಬದುಕಿದರೆ ಸಾಲದೆ ?
ಲೇಸೆನಿಸಿಕೊಂಡು ಮೂರು ದಿನ ಬದುಕಿದರೆ ಸಾಲದೆ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೇಸೆನಿಸಿಕೊಂಡು ಎರಡು ದಿನ ಬದುಕಿದರೆ ಸಾಲದೆ ?
ಲೇಸೆನಿಸಿಕೊಂಡು ಕೂಡಲ ಸಂಗನ ಶರಣರ ನಡುವೆ
ಒಂದು ದಿನ ಬದುಕಿದರೆ ಸಾಲದೆ ?

ಎಂಬ ಮಾತನ್ನು ತಮ್ಮ ಬದುಕಿನಲ್ಲಿ ಉದ್ದಕ್ಕೂ ಅಳವಡಿಸಿಕೊಂಡು ನಡೆಯುತ್ತಿದ್ದಾರೆ, ಹೀಗಾಗಿ ಅವರ ಬದುಕು ಭವ್ಯತೆಯತ್ತ ಸಾಗಿದೆ, ಜೀವನದ ಗುರಿ ದಿವ್ಯತೆಯತ್ತ ಮುನ್ನಡೆದಿದೆ. ಭವ್ಯ – ದಿವ್ಯದ ಸಮಾಗಮವೇ ಜೀವನದ ಪರಮ ರಹಸ್ಯವಲ್ಲವೆ ? ಅದನ್ನು ಸಾಧಿಸುವುದೆ ಅವರ ಉದ್ದೇಶವಾಗಿದೆ. ಇಂಥ ಉದಾತ್ತ ಉದ್ದೇಶವಿರಿಸಿಕೊಂಡ ಪೂಜ್ಯರು, ಜಗತ್ತಿನ ಹಿತಾರ್ಥಕ್ಕಾಗಿ ತಮ್ಮ ಬಾಳನ್ನು ಸಾಗಿಸುತ್ತಿದ್ದಾರೆ. ಸಕಲ ಜೀವಾತ್ಮರ ಲೇಸಿಗಾಗಿ ತಮ್ಮ ಬದುಕು ಮುಡಿಪಾಗಿಟ್ಟಿದ್ದಾರೆ. ಸಂತರ ಬದುಕು ಸರ್ವರ ಉದ್ಧಾರಕ್ಕಾಗಿ ಮೀಸಲಾಗಿರುತ್ತದೆ ಎಂಬ ಮಾತು. ತಮ್ಮ ಬಾಳಿನಲ್ಲ ತೋರಿಸಿಕೊಡುತ್ತಿದ್ದಾರೆ.

ತಮ್ಮ ಉಪದೇಶದಲ್ಲಿ ಉದ್ದಕ್ಕೂ ಹೇಳುತ್ತಾರೆ. "ಮಾನವ ಜನ್ಮ ದೊಡ್ಡದು ಇದು ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ" ಎನ್ನುತ್ತಾ ಜನರನ್ನು ಎಚ್ಚರಿಸುತ್ತಿದ್ದಾರೆ. ನಿಜ! ಮನುಷ್ಯ ಜನ್ಮ ದೊಡ್ಡದು. ಮತ್ತೆ ಮತ್ತೆ ಹುಟ್ಟಿ ಬರಲು ಇವನೇನು ಹುಲ್ಲು ಕಡ್ಡಿಯೇ ? ಇಂಥ ಜನ್ಮ ಸಿಕ್ಕಿದ್ದೇ ದೊಡ್ಡದು. ಸಿಕ್ಕಾಗ ಇದರ ಲಾಭ ಪಡೆದು ಕೃತಾರ್ಥರಾಗಬೇಕು. ಒಮ್ಮೆ ಮಾನವ ಜನ್ಮಕ್ಕೆ ಬಂದ ಮೇಲೆ ಅದರ ಲಾಭ ಪಡೆದುಕೊಳ್ಳದೆ ಹೋದರೆ ಅದು ವ್ಯರ್ಥ ಬದುಕಾಗುತ್ತದೆ ಎಂಬ ಕಳಕಳಿಯೊಂದಿಗೆ "ಗಾಳಿ ಬಂದ ಕೈಯಲ್ಲಿ ತೂರಿಕೊಳ್ಳಿರೋ, ನಾಳೆ ಎನ್ನಬೇಡಿ ಇದೇ ವೇಳೆ ಬನ್ನಿರೋ" ಎಂದು ಜನತೆಗೆ ಕರೆ ಕೊಡುತ್ತಾರೆ.

ಉತ್ತಮ ಪುರಾಣಿಕರು, ಪ್ರವಚನ ಪಟುಗಳು ಆದ ಶ್ರೀಗಳು ತಮ್ಮ ಕಂಚಿನ ಕಂಠದಿಂದ ಮಲಗಿದ್ದ ಜನರನ್ನು ಎಚ್ಚರಿಸುತ್ತಿದ್ದಾರೆ. ತಪಸ್ಸಿನಿಂದ ಜ್ಞಾನದ ದೀವಿಗೆಯತ್ತ ಅವರನ್ನು ಕರೆದೊಯ್ಯುತ್ತಿದ್ದಾರೆ. ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿಯಂತೆ ಸಂಚಾರಗೈದು ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ. ಒಬ್ಬರ ಹಂಗಿನಲ್ಲಿರದೆ ಸರಳ ಸುಂದರವಾದ ಬದುಕನ್ನು ನಡೆಸುತ್ತ, ವಿರಾಗಿಯಾಗಿ "ನಾಳೆಗಿಡಸು ಸಾಲದೆನೆಸು" ಎಂಬ ಮಾತನ್ನು ತಮ್ಮ ಬದುಕಿನ ಉಸಿರಾಗಿ ಸಾರ್ಥಕವಾದಬಾಳನ್ನು ನಡೆಸುತ್ತಿದ್ದಾರೆ. ಸನ್ಯಾಸಿಗಳಿಗೇತಕ್ಕೆ ಬೇಕು ? ಸನ್ಯಾಸಿಗೆ ಕೊಟ್ಟಿದ್ದೆಲ್ಲವೂ ಮತ್ತೆ ಮರಳಿ ಸಮಾಜಕ್ಕೇ ತಲುಪುತ್ತದೆ. "ಕೆರೆಯ ನೀರು ಕೆರೆಗೆ ಚೆಲ್ಲಿ ವರವ ಪಡೆದಂತೆ ನಮ್ಮ ಬಾಳುವೆ" ಎಂದು ನಗುತ್ತಾ ಹೇಳುತ್ತಾರೆ, ಮತ್ತೆ ಗಂಭೀರತೆಯಿಂದ "ರಾಜ್ಯ ಭೋಗಗಳು ನನಗೆ ದೊರೆಯಬೇಕೆಂದು ಈಗ ನಾನು ಬೇಡಲಿಕ್ಕೆ ಬಂದಿಲ್ಲ. ಪ್ರತಿಯೊಬ್ಬರಿಗೂ ರಾಜ್ಯ ಭೋಗಗಳು ದೊರಕಿಸಿ, ದಿವ್ಯವಾದ ಯೋಗ ಜೀವನ ಕಲಿಸಲು ಬಂದಿರುವೆ ಎನ್ನುತ್ತಾರೆ.

ಆದರೆ ಸಾಮಾನ್ಯ ಜನರು ದಿವ್ಯ ಜೀವನದತ್ತ ಬರದೆ ಅಲ್ಪವಾದ ಕ್ಷಣಿಕ ಸುಖದಲ್ಲಿಯೇ ಮುಳ ಮುಳಗಿ ಸಂತೋಷ ಪಡುತ್ತಾರೆ, ದಾಸರ ಮಾತಿನಲ್ಲಿ ಹೇಳುವುದಾದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನೆಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ಧನದಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ವನಿತೆಯಿಂ ಸಂತೋಷ ಕೆಲವರಿಗೆ ಲೋಕದಲ್ಲಿ
ತನಯರಿಂ ಸಂತೋಷ ಕೆಲವರಿಗೆ ಲೋಕದಲ್ಲಿ
ಇನಿತು ಸಂತೋಷ ಅವರವರಿಗಾಗಲಿ ನಿನ್ನ
ನೆನವೂ ಸಂತೋಷ ಎನಗಾಗಲಿ ನಮ್ಮ ರಂಗ ವಿಠಲ

ಎನ್ನುವಂತೆ ಜನತೆ, ಮನೆ, ಧನ, ವನಿತೆ, ತನಯ, ಇನಿತು ಸುಖ ಸಾಧನಗಳ ಸಂಪಾದಿಸುವಲ್ಲಿ ನಿರತರಾಗಿದ್ದಾರೆ. ಇವರು ಒಂದು ಬಾರಿ ದಿವ್ಯ ಜೀವನದ ಮಾರ್ಗದತ್ತ ಬಂದರೆ ಇವು ತನ್ನಿಂದ ತಾನೇ ಬಿಡುತ್ತಾರೆ. ನಿರ್ಲಿಪ್ತರಾಗುತ್ತಾರೆಂಬುದು ಶ್ರೀಗಳ ಕಳಕಳಿಯಾಗಿದೆ. ಒಬ್ಬ ಆದರ್ಶ ಮಠಾಧಿಪತಿಯಾಗಿದ್ದಾರೆ. ಲಿಂಗಾಯತ ಮಠದ ಸ್ವಾಮಿಯಾಗಿದ್ದರೂ, ಎಲ್ಲರನ್ನು ತನ್ನವರನ್ನಾಗಿ ಮಾಡಿಕೊಳ್ಳುವ ವಿಶ್ವ ಕುಟುಂಬಿಯಾಗಿದ್ದಾರೆ. ಜಾತಿ, ಮತ, ಪಂಥಗಳೆಂಬ ಕ್ಷುಲ್ಲಕ ವಿಷಯಗಳು ಅವರ ಹತ್ತಿರಕ್ಕೆ ಸುಳಿಯುವು.

" ಆವ ಕುಲದವನಾದವರೇನು
ಆವನಾದರೇನು ಆತ್ಮ
ಭಾವವರಿತ ಮೇಲೆ

ಎಂಬುದು ಅವರ ನಿಲುವಾಗಿದೆ. " ಕೂಡಲ ಸಂಗನ ಶರಣರೆ ಕುಲಜರೆಂಬ ಅಣ್ಣನವರ ಅಭಿಪ್ರಾಯದಲ್ಲಿ ನಡೆದವರಾಗಿದ್ದಾರೆ. ನಾವಿಂದು ಕುಲದ ಮೇಲೆ ಹೋಗಬೇಕಾಗಿಲ್ಲ. ಕುಲವಿಲ್ಲ ಜ್ಞಾನಿಗಳಿಗೆ ಎಂದು ಘೋಷಿಸುತ್ತಿದ್ದಾರೆ. ಈ ರೀತಿ ವಿಶ್ವ ಕುಟುಂಬಿಯಾಗಿ ವಿಶ್ವಮಾನವತೆ ಬೆಳೆಸುವ ದಿಸೆಯಲ್ಲಿ ಮುನ್ನಡೆದವರಾಗಿದ್ದಾರೆ. ಪೂಜ್ಯರು ಪ್ರವಚನಕ್ಕೆ ತೊಡಗಿದರೆ ಅವರು ಹೇಳುವ ಮಾತುಗಳು ಪ್ರತಿಯೊಬ್ಬರೂ ಬರೆದಿಟ್ಟುಕೊಳ್ಳಬೇಕು. ಅಂಥ ಮಾತುಗಳವು.

" ಪ್ರತಿಯೊಬ್ಬರ ಮನವಲ್ಲಿ ದೃಢ ಭಕ್ತಿಯಿರಬೇಕು "
" ಕಾಮ, ಕ್ರೋಧ, ಹೇಮದಾಸೆ ಬಿಟ್ಟಿರಬೇಕು "
" ಮನದಲ್ಲಿನ ಕಾಮಿನಿಯರ ಹಂಬಲ ತೆಗೆದು ಹಾಕಬೇಕು "
" ಕನಕ ಕಾಂಚನದಾಸೆ ಸುಟ್ಟು ಹಾಕಬೇಕು "
" ನಿಂದಿಸಿದರೆ ಹಿಗ್ಗಬೇಕು, ಸ್ತುತಿಸಿದರೆ ಕುಗ್ಗಬೇಕು "
" ಕೋಪ ಬಂದಾಗ ಸಹನೆಯಿಂದಿರಬೇಕು "
" ಪಾಪ ಕಾರ್ಯಗಳೆಸಗದಂತಿರಬೇಕು "
" ನಾವು ಯಾವಾಗಲೂ ಜ್ಞಾನದ ದೀಪವ ಬೆಳಕಿನಲಿ
ಓಡ್ಯಾಡಬೇಕು "

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವೆಲ್ಲ ಮಾತುಗಳು ಮಾನವ ಅರಿತು ಅಳವಡಿಸಬೇಕು. ಯಾಕೆಂದರೆ ಆವನು ಮುಕ್ತಿ ಪಡೆಯಬೇಕಾದರೆ ಇವು ಅವನಿಗೆ ಬೇಕೇ ಬೇಕು, ಅಂಥ ಅನೇಕ ಮಾತುಗಳು ಅವರ ಪ್ರವಚನದುದ್ದಕ್ಕೂ ಬರುತ್ತವೆ, ಅವರ ವಾಗ್ ಝರಿಯಲ್ಲಿ ಅನೇಕ ಜಿಲೆ ಬಾಳುವ ಮಾತುಗಳು ಹರಿದು ಬರುತ್ತವೆ.

ಅವರು ಕೆಲವೊಂದು ವಿಷಯಗಳನ್ನು ತಿರಸ್ಕರಿಸಿ ಮಾತನಾಡುತ್ತಾರೆ. ಅವುಗಳು ಅವರಿಗೆ ಸೇರುವುದಿಲ್ಲ. ಬಹಿರಂಗವಾಗಿ ತಮ್ಮ ಪುರಾಣ–ಪ್ರವಚನದಲ್ಲಿ ಖಂಡು ತುಂಡಾಗಿ ಹೇಳಿ ಬಿಡುತ್ತಾರೆ, ಅವುಗಳೆಂದರೆ–

"ಗುರುಗಳು ಹೇಳಿದ ಶಾಸ್ತ್ರವನ್ನು ತಿಳಿದುಕೊಳ್ಳದವನ್ನು"
"ಯಾರಿಗೂ ದಾನ – ಧರ್ಮ ಮಾಡದ ಪಾಪಿಯನ್ನು"
"ಆಶೆಯಿಂದ ಬಹಳಷ್ಟು ದೋಷಗಳನ್ನು ಮಾಡುವವನನ್ನು"
"ಯಾವಾಗಲೂ ಹುಸಿಯನಾಡುತ್ತ, ಅಲೆದಾಡುವವನನ್ನು"
"ಉಂಡ ಮನೆಗೆರಡು ಬಗೆವನನ್ನು"
"ಗಂಡ ಹೆಂಡಿರ ನಡುವೆ ಭೇದವಿಕ್ಕುವವನನ್ನು"
"ಎಲ್ಲವನರಿತು ಆಚಾರದಲ್ಲಿ ತರದಿದ್ದವನನ್ನು"
"ಗುರು ಹಿರಿಯರನು ಕಂಡು ಗೌರವಿಸದಿದ್ದವನನ್ನು"

ಇವೆಲ್ಲವನ್ನು ಅಲ್ಲಗಳೆಯುತ್ತಾರೆ. ಸನ್ನಡತೆ, ಸದಾಚಾರ ಸಚ್ಚಾರಿತ್ರ್ಯ ಇವೆಲ್ಲ ಮಾನವನ ಬಾಳಿಗೆ ಬೆಳಕು ತಂದು ಕೊಡುವಂತಹವು. ಒಳ್ಳೆಯದನ್ನು ಯಾವಾಗಲೂ ಪ್ರಯತ್ನದಿಂದ ಸಾಧಿಸಬೇಕು, ಶರಣರ, ಸಂತರ, ಸತ್ಪುರುಷರ, ಸಂಗ ಮಾಡಬೇಕು ಎಂದು ಕಳಕಳಿಯಿಂದ ನುಡಿಯುತ್ತಾರೆ. ಅವರ ಸಂಗದಲ್ಲಿದ್ದರೆ ಅನೇಕ ಒಳ್ಳೆಯ ಮಾತುಗಳು ನಮ್ಮ ಕಿವಿಯ ಮೇಲೆ ಬೀಳುತ್ತವೆ "ಶ್ರವಣದಿಂದ ಬ್ರಹ್ಮ ಹತ್ಯಾ ಪಾಪವು ನಾಶವಾಗುತ್ತದೆ. ಸ್ಮರಣೆಯಿಂದ ಜನ್ಮ ಜನ್ಮಾಂತರದ ಪಾಪವೆಲ್ಲ ನಾಶವಾಗುತ್ತದೆ" ಆದಕ್ಕಾಗಿ ಶ್ರವಣ ಬಲ, ಸ್ಮರಣೆ ಬಲ, ಮಾನವನನ್ನು ಸದಾ ಕಾಪಾಡುತ್ತವೆ ಎನ್ನುತ್ತಾರೆ.

ಅವರ ಬದುಕಿಗೆ ಕೆಲವು ಧೋರಣೆಗಳಿವೆ. ಅದು ಅವರ ಮಾತಿನಲ್ಲಿ ವ್ಯಕ್ತವಾಗುವುದನ್ನು ಕಂಡುಕೊಂಡಿದ್ದೇನೆ, ಹಿರಿದು – ಕಿರಿದು ಎಂದು ಭೇಧ ಮಾಡುವುದು ಅಲ್ಪಬುದ್ಧಿಯಾಗಿದೆ. ಅದು ಸರಿಯಲ್ಲ, "ಬರುವುದೆಲ್ಲ ಬರಲಿಬಿಡು ಏಕೆ ಅದರ ಚಿಂತೆ" ಎನ್ನುತ್ತಾರೆ. ಒಟ್ಟಿನಲ್ಲಿ ಬರುವುದಕ್ಕೆ ಒಳಹೊರಗೂ ಸಿದ್ದವಿರು ಎಂಬುದು ಒಳ ದನಿಯಾಗಿದೆ. ಒಟ್ಟಿನಲ್ಲಿ ಕೂಡಿ ಬಾಳುತ ಕೂಡಿ ಬೆಳೆಯೋಣ, ಕಾಲಗತಿಯೊಡನೆ ಸಮರಸವಾಗಿ ಸಾಗುವುದೆ ಜೀವನ ಪ್ರವಾಹಕ್ಕೆ ದೊರೆತ ಗುರಿಯು ಎನ್ನುವ ಶ್ರೀಗಳು ಬದುಕು ಹಸನಾಗಿರಲಿ, ಬದುಕು ಮಡಿಯಾಗಿರಲಿ ಎಂದು ನುಡಿಯುತ್ತಾರೆ. "ನಮ್ಮಿಂದ ಯಾರಿಗೂ ಅಪಕಾರವಾಗಬಾರದು, ಅಪಕಾರವಾಗದಂತೆ ಬದುಕುವುದೂ ಒಂದು ಲೋಕಕ್ಕೆ ದೊಡ್ಡ ಉಪಕಾರವಾಗಿದೆ."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನ್ಯರಿಗೆ ನನ್ನಿಂದ ಅನ್ಯಾಯವಾಗುವೊಡೆ
ಅಗಲಿಸೆನ್ನನು ಅವರ ಸರಣಿಯಿಂದ

ಎಂದು ಹೇಳಿ. ಯಾರಿಗೂ ಯಾವ ಕಾರಣಕ್ಕೂ, ಯಾರ ಮನಸ್ಸಿಗೂ ನಮ್ಮಿಂದ ಹಿಂಸೆಯಾಗಬಾರದು ಎಂಬುದು ಅವರ ಇರುವಿಕೆಯ ಗುಣವಾಗಿದೆ. ಅವರು ಪ್ರವಚನ ದಲ್ಲಿ ಮಾತನಾಡುತ್ತಾರೆ, ನಂತರ ಹೆಚ್ಚು ಕಾಲ ಮೌನವಾಗಿರುತ್ತಾರೆ. "ಬ್ರಹ್ಮಜ್ಞಾನಿ ಸರ್ವದಾ ಮೌನಿ" "ಮೌನವಂ ಪಂಡಿತ ಲಕ್ಷಣಂ" ಎಂಬ ಮಾತುಗಳು ಇವರಿಗೆ ಹೆಚ್ಚು ಅನ್ವಯವಾಗುತ್ತವೆ. ಕರುಣಾ ಮಯಿಗಳಾದ ಗುರುಗಳು ಕರುಣೆಯೇ ದೇವರು ಕಣ್ಣಹನಿಯೆ ತೀರ್ಥವೆಂದರಿತವರು. ತಮ್ಮ ದಿನ ನಿತ್ಯದ ಜೀವನವೆಲ್ಲ ಶಿವಪೂಜೆಯೆಂದು, ನಿತ್ಯದ ಕರ್ಮವೆಲ್ಲ ಯೋಗವೆಂದರಿತು ಸಾಧನಾ ಮಾರ್ಗದಲ್ಲಿ ಮುನ್ನಡೆದವರು. ಪ್ರೇಮವೆ ಶಿವ, ಶಿವನೇ ಪ್ರೇಮ. ಪ್ರೀತಿಸುವುದೆ ಪ್ರಾಣದ ನೇಮವೆಂದು ಲೋಕವನ್ನೆ ಪ್ರೀತಿಸಲು ಹೊರಟವರು. ಲೋಕದಲ್ಲಿ ಪ್ರೇಮವಾದರೂ ಇರುವುದೇತಕ್ಕೆ ? ನೊಂದವೆದೆಗಳನ್ನು ಸಂತೈಸಲಿಲ್ಲವೆ ? ಜೀವನದ ಕೋಟಲೆಯ ಭಾರವನು ಪರಿಹರಿಸ ಲಿಲ್ಲವೆ ? ಎಂಬುದು ಅವರ ಉದಾತ್ತ ಬದುಕಿನ ಧೋರಣೆಯಾಗಿದೆ.

ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತ, ಮೊದಲು ವಿದ್ಯಾರ್ಥಿಗಳು ಶಿಕ್ಷಕರನ್ನು ಗೌರವಿಸಬೇಕು. ನಂತರ ಗುರು–ಹಿರಿಯರನ್ನು ಗೌರವಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿ ಒಬ್ಬ ಗೌರವಾನ್ವಿತ ತಪಸ್ವಿ. ಅವನು ತನ್ನ ವಿದ್ಯಾರ್ಥಿ ಜೀವನದಲ್ಲಿ ವಿದ್ಯೆಯನ್ನು ಚೆನ್ನಾಗಿ ಅರ್ಜಿಸಬೇಕು. ಅಂದರೇನೆ ವಿದ್ಯಾರ್ಜನೆಗೆ ಬೆಲೆಯುಂಟು. ಕೇವಲ ಅನ್ನ ಬಟ್ಟೆಗಳನ್ನು ಸಂಪಾದಿಸುವುದಕ್ಕೆ ಮಾತ್ರ ವಿದ್ಯೆಯು ಗುರಿಯಾಗಬಾರದು. ಅದರಾಚೆ ಅದರ ಗುರಿಯಿರಬೇಕು. ಲೌಕಿಕ ವಿದ್ಯೆ ನಮ್ಮನ್ನು ಲೌಕಿಕ ದಾಹದಿಂದ ಮುಕ್ತರನ್ನಾಗಿ ಮಾಡಿದರೆ ಅಧ್ಯಾತ್ಮಿಕ ವಿದ್ಯೆ ನಮ್ಮ ಆತ್ಮ ತೃಷೆಯನ್ನು ಹಿಂಗಿಸುತ್ತದೆ. ಆದ್ದರಿಂದ ಅಲೌಕಿಕ ವಿದ್ಯೆಯ ಅವಶ್ಯಕತೆಯೂ ನಮ್ಮ ವಿದ್ಯಾರ್ಥಿಗಳಿಗೆ ಇದೆ. ವಿದ್ಯೆ ಎನ್ನುವುದು ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದ ದೇವತ್ವಕ್ಕೆ ಎತ್ತುವ ಒಂದು ಸಾಧನ ಮತ್ತು ವಿಧಾನವಾಗಿದೆ. ಎಂಬ ಮಾತು ಶ್ರೀಗಳು ಮನಂಬುಗುವಂತೆ ಒತ್ತಿ ಒತ್ತಿ ಹೇಳುತ್ತಾರೆ. ಈಗಿನ ಕಾಲದ ಬದುಕಿಗೆ ಈ ಮಾತುಗಳು ಹೆಚ್ಚು ಪ್ರಸ್ತುತ ವೆನ್ನಿಸುತ್ತವೆ.

ಪ್ರವಚನದಲ್ಲಿ ಈಶ್ವರ ಭಕ್ತಿಯನ್ನು ಕುರಿತು ಅಧಿಕ ಪ್ರಮಾಣದಲ್ಲಿ ವಿವರಿಸುತ್ತಾರೆ. ಆತ ಜಗದೀಶ, ಜಗನ್ನಿಯಾಮಕ ಆತನ ಅಪ್ಪಣೆಯಿಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲುಗಾಡದು. ಅಂದಾಗ ಅಂತಹ ದಿವ್ಯ ಶಕ್ತಿಯ ಮೇಲೆ ನಮ್ಮ ಭಕ್ತಿಯಿರಬೇಕಾದುದು ಅತ್ಯವಶ್ಯ, ಈಶ್ವರಾನುಗ್ರಹ ಆದವನು ಈ ಜಗತ್ತಿನಲ್ಲಿ ಧನ್ಯ ಮತ್ತು ಮಾನ್ಯನಾಗುತ್ತಾನೆ, ಪ್ರತಿಯೊಂದು ಜೀವಿ ಈಶ್ವರಾನುಗ್ರಹಕ್ಕಾಗಿ ಹಂಬಲಿಸ ಬೇಕು. ಆತನ ಮೇಲೆ ಭಕ್ತಿಯಿಡಬೇಕು. ಈಶ್ವರನ ಭಕ್ತಿಯೆಂಬ ಬೆಂಕಿ ನಮ್ಮ ಹೃದಯದಲ್ಲಿ ಚೆಲ್ಲಿತೆಂದರೆ ಮೊದಲಿಗೆ ನಮ್ಮಲ್ಲಿರುವ ರಾಗ – ದ್ವೇಷಗಳನ್ನು ಸುಡುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮೇಲೆ ಅಹಂಕಾರವನ್ನು ದಹಿಸುತ್ತದೆ. ಕಡೆಗೆ ನಶ್ವರ ಶರೀರವನ್ನೆ ಭಸ್ಮ ಮಾಡಿ ಬಿಡುತ್ತದೆ. ಆದ್ದರಿಂದ ಈಶ್ವರ ಭಕ್ತಿ ಪ್ರತಿಯೊಬ್ಬ ಜೀವಿಯಲ್ಲುಂಟಾಗಬೇಕು. ಆತನ ದಯೆಯಿರಲು ಎಲ್ಲ ಮಂಗಳವಾಗುತ್ತದೆ. ಬರುವ ದುಃಖ ಮಾಲೆಗಳೆಲ್ಲ ಸುಖದ ಸೋಪಾನಗಳಾಗುತ್ತವೆ. ಆತನ ಕೃಪೆ ಪಡೆಯುವುದು ಬಹಳ ಮುಖ್ಯವಾಗಿದೆ, ಅದಕ್ಕೆ ನೂರು ಮಾರ್ಗಗಳಿವೆ, ನೂರು ವೇಷಗಳಿವೆ. ಅವರವರ ಭಾವ ಭಕ್ತಿಗನುಗುಣವಾಗಿ ಪೂಜಿಸಬೇಕು. ಎಲ್ಲಿ ಶಿವನ ಪೂಜೆ ನಡೆಯುತ್ತಿದೆಯೋ ಅದೆ ದೇಗುಲ. ಯಾರ ಹೃದಯದಲ್ಲಿ ಪ್ರಾರ್ಥನೆ ನಡೆದಿದೆಯೋ ಅದುವೆ ಗುರುಕುಲ ಎಂದು ಶ್ರೀಗಳು ತಮ್ಮ ಪ್ರವಚನದಲ್ಲಿ ದಿವ್ಯದ ವಿಚಾರವನ್ನು ಪ್ರತಿಪಾದಿಸುತ್ತಾರೆ. ಒಟ್ಟಿನಲ್ಲಿ ಸಾಧಕನಾದವನು ಪೂಜಿಸುತ್ತ ಸಿದ್ಧಿಯ ಮಾರ್ಗದತ್ತ ಮುನ್ನುಗ್ಗಿ ಕೊನೆಗೆ ತನ್ನ ತಾನು ಇಲ್ಲಗೈವುದೇ ಎಲ್ಲ ಸಾಧನೆಗೆ ಕೊನೆಯ ಗುರಿ ಎನ್ನುತ್ತಾರೆ, ಬಯಲಿನಲ್ಲಿ ಬಯಲಾಗುವಿಕೆ. ಶೂನ್ಯ ಸಂಪಾದನೆಗೈಯ್ಯುವದೇ ವೀರಶೈವ ಧರ್ಮದ ಮುಖ್ಯ ಗುರಿಯಾಗಿದೆ. ಯಾರೂ ತಾವು ಅಲ್ಪರೆಂದು ಭಾವಿಸಬಾರದು. ಪ್ರತಿಯೊಂದು ಅಲ್ಪ ಜೀವಿಯು ಮಹತ್ತಿನೊಂದಿಗೆ ಸೇರಿ ಮಹತ್ತಾಗುತ್ತಾನೆ. ರಾಷ್ಟ್ರ ಕವಿ ಕುವೆಂಪುರವರು ಹೇಳುವ ಹಾಗೆ,

ಅಲ್ಪ ನಾನು ಎಂದು ಕುಗ್ಗಿ
ಮುದುಡಬೇಡವೋ
ಓ – ಅಲ್ಪವೇ
ಅನಂತದಿಂದ ಗುಣಿಸಿಕೊ
ನೀನ್ ಅನಂತನಾಗುವೆ,

ಮಾನವ ಹುಟ್ಟುವಾಗ ಅಲ್ಪಾತ್ಮನಾಗಿರುತ್ತಾನೆ. ಹುಟ್ಟಿದ ನಂತರ ತನ್ನ ಬದುಕಿನುದ್ದಕ್ಕೂ ಸಾಧನೆಗೈದು ಮಹಾತ್ಮಾ ವಿಶ್ವಾತ್ಮನಾಗುತ್ತಾನೆ, ಪ್ರತಿಯೊಬ್ಬ ವ್ಯಕ್ತಿ ಅಂದರೆ ಅವನು ಭೋಗಿಯಿರಲಿ, ಅವನಿಗೆ ಧ್ಯಾನ, ಪೂಜೆ, ಜಪ ತಪಗಳಿರಬೇಕು ಅಂದರೆ ಅವನ ತೇಜಸ್ಸಿಗೆ ಬೆಲೆಯುಂಟು, ತಪಸ್ಸಿಲ್ಲದ ತೇಜಸ್ಸು ಪ್ರೇಮವಿಲ್ಲದ ಕಾಮದಂತೆ ತುಚ್ಛವಾದುದು. ಹೀಗೆ ಒಂದೆ ಎರಡೇ ನೂರಾರು ವಿಚಾರಗಳು ಅವರ ಪ್ರವಚನದಲ್ಲಿ ಹಾದು ಹೋಗುತ್ತವೆ. ಪೂಜ್ಯರು ಜ್ಞಾನದ ನಿಧಿಯಾಗಿ ಜ್ಞಾನ ದಾಸೋಹಗೈಯ್ಯುತ್ತ ಜೀವನ ಸವೆಸುತ್ತಲಿದ್ದಾರೆ. ಜ್ಞಾನ ದಾನಕ್ಕಿಂತ ಅಧೀಕ ದಾನವಾವುದಿಲ್ಲ,

ಜಾತಿ, ಮತ, ಪಂಥಗಳ ಗೊಡವೆಗೆ ಹೋಗದ ಶ್ರೀಗಳು "ಮಾನವ ಧರ್ಮ" ಪ್ರತಿಪಾದಿಸುತ್ತಾರೆ. ಮಾನವ ಧರ್ಮಕ್ಕೆ ಜಯವಾಗಲಿ ಎಂಬ ರಂಭಾಪುರಿ ಶ್ರೀಗಳ ಮಾರ್ಗದಲ್ಲಿ ಮುನ್ನಡೆದವರಾಗಿದ್ದಾರೆ. ಈಗ ನಾವೆಲ್ಲರು ಮನುಜರು ಮನುಜ ಮತ ಕಟ್ಟಬೇಕಾಗಿದೆ. ಮತೀಯ ಭಾವನೆ ಅಳಿಯಬೇಕಾಗಿದೆ. ಕುವೆಂಪುರವರು ಹೇಳುವಂತೆ "ಆ ಮತದ ಈ ಮತದ ಹಳೆಮತದ ಸಹವಾಸ ಸಾಕಿನ್ನು ಸೇರಿರೈ ಮನುಜ ಮತಕೆ ಓ ಬನ್ನಿ ಸೋದರರೆ, ವಿಶ್ವಪಥಕ್ಕೆ ಎಂದು ಕರೆಕೊಡುತ್ತಾರೆ.

ಅವರಿವರ ಮತವಿರಲಿ
ನನ್ನ ಪಥ ನನಗಿರಲಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬುದು ಅವರ ಧೋರಣೆಯಾಗಿದೆ. ಮಾನವ ಧರ್ಮಕ್ಕಿಂತ ಅಧಿಕವಾದ ಸಿರಿ ಇನ್ನೊಂದಿಲ್ಲ ವೆಂದು ಶ್ರೀಗಳು ಮುಕ್ತ ಕಂಠದಿಂದ ಸಾರುತ್ತಾರೆ. ಈಗ ಹಳೆಯ ಮತದ ಕೊಳಕೆಲ್ಲ ಹೊಸಮತದ ವಿಚಾರದಲ್ಲಿ ಕೊಚ್ಚಿ ಹೋಗಬೇಕೆಂಬುದೆ ನನ್ನವಿಚಾರ. ಅವರವರ ಧರ್ಮ, ವಿಚಾರ, ಆವರವರಿಗೆ ಬಿಟ್ಟದ್ದು, ನನ್ನ ಧರ್ಮ ನನಗೆ ಎಂದು ಮೌನವಾಗುತ್ತಾರೆ. ಭಗವಂತನ ಅನುಗ್ರಹಕ್ಕೆ ನೂರು ದಾರಿಗಳಿಲ್ಲವೆ ಎಂಬುದು ಅವರ ಧೋರಣೆ, ಯಾರಾದರೂ ಬಂದು ಕುಚೇಷ್ಟೆಗೆ ಪ್ರಶ್ನೆ ಕೇಳಿದರೆ ಶ್ರೀಗಳು ಮೌನದಾಗುತ್ತಾರೆ ಕಾರಣವಿಷ್ಟೆ,

ಅರ್ಥವಿಲ್ಲದ ಪ್ರಶ್ನೆಗೆ
ಸುಮ್ಮನಿರುವುದೆ ಉತ್ತರ.

ಇದು ಅವರ ಗಂಭೀರ ಪ್ರತಿಕ್ರಿಯೆಯಾಗಿದೆ, ಇದೆಲ್ಲವನ್ನು ಓದಿದ ಮೇಲೆ ಶ್ರೀಗಳ ವ್ಯಕ್ತಿಗತವಾದ ವಿಚಾರ ತಿಳಿದುಕೊಳ್ಳುವ ಕುತೂಹಲ ನಿಮಗಾಗಿರಬಹುದು, ವ್ಯಕ್ತಿಗಿಂತ ವಿಚಾರ ಮುಖ್ಯ. ಅವರ ವಿಚಾರಗಳು ಮೊದಲಿಗೆ ತಿಳಿಸಿ ನಂತರ ಅವರ ವ್ಯಕ್ತಿಗತ ಚಿತ್ರ ನೀಡುವುದು ನನ್ನ ಉದ್ದೇಶವಾಗಿತ್ತು.

ಇಂದಿಗೆ ಹನ್ನೆರಡು ವರ್ಷಗಳ ಹಿಂದೆ ಒಬ್ಬ ತೇಜಸ್ವಿ ಬಾಲಕ ಸನ್ಯಾಸ ದೀಕ್ಷೆ ಹೊಂದಿ, ಗುರುಪೀಠವನ್ನು ಅಲಂಕರಿಸಿ, ಧರ್ಮ ಪ್ರಚಾರಗೈಯುವುದಾಗಿ ತನ್ನ ಬದುಕು ಸಮಾಜ ಸೇವೆಗೆ, ಜನತಾ ಜನಾರ್ಧನನ ಸೇವೆಗೆ ಮೀಸಲಿಡುವುದಾಗಿ ಶಪಥಗೈದ. ಎಲ್ಲರಿಗೂ ಆಶ್ಚರ್ಯ. ಇದು ಇವನಿಂದ ಸಾಧ್ಯವೆ ? ಎಂದು ಅಂದು ಆಶ್ಚರ್ಯ ಪಟ್ಟವರೆಲ್ಲ ಇಂದು ಸರಳವಾಗಿ ನೋಡುತ್ತಿದ್ದಾರೆ, ಅಂದಿನ ಬಾಲಕ, ತೀವ್ರತರದ ಸಾಧಕನಾಗಿ, ಸಿದ್ಧಿಪುರುಷನಾಗಿ ಪ್ರಸಿದ್ಧಿಯನ್ನು ಪಡೆಯುತ್ತ ತನ್ನ ಮಠ, ಪೀಠ, ಧರ್ಮ ಪರಂಪರೆ ಬೆಳೆಸುತ್ತ ಜನಸಾಗರದಲ್ಲಿ ಮುಳುಗಿ ಮುನ್ನುಗ್ಗುತ್ತಿರುವ ದೃಶ್ಯ ಅಂದಿನ ಆ ದಿವ್ಯ ತೇಜಸ್ವಿ ಬಾಲಕನೆ ಇಂದಿನ ಸುಲಫಲ ಮಠಾಧೀಶರಾದ ಶ್ರೀ ಷ. ಬ್ರ. ಮಹಾಂತ ಶಿವಾಚಾರ್ಯರು. ಶ್ರೀಗಳು ಸದುವಿನಯಿಗಳು, ಸೌಮ್ಯ ಜೀವಿಗಳು, ಮೃದು ಭಾಷಿಗಳು, ಯಾರೇ ಹೋಗಲಿ ಅತ್ಯಂತ ಆತ್ಮೀಯತೆಯಿಂದ ಕಾಣುವ ಸ್ವಭಾವ ಅವರದು. ಮಾತೃ ಪ್ರೇಮ ಅವರಲ್ಲಿ ಕಾಣಬೇಕು. ಈ ಗುಣಗಳೆ ಅವರನ್ನು ಎತ್ತರೆತ್ತರಕ್ಕೆ ಕರೆದೊಯ್ಯುತ್ತಿವೆ. ಅತಿಥಿ ಸತ್ಕಾರ ಶ್ರೀ ಮಠದ ಭವ್ಯ ಪರಂಪರೆಯಾಗಿದೆ. ಬಂದವರನ್ನು ಆದಿಥಿಯನ್ನು ದೇವರಂತೆ ಕಾಣದೆ ಹೋದರೆ ಅಪಚಾರವಾದಿತೆಂದು ಭಾವಿಸುತ್ತಾರೆ,

ಏನು ಬಂದಿರಿ, ಹದುಳ ವಿದ್ದಿರೆ ? ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೆ ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೆ ?
ಒಡನೆ ನುಡಿದರೆ ಶಿರ–ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ
ಕೆಡುಹಿ ಮೂಗ ಕೊಯ್ಯದೆ ಮಾಣ್ಬನೆ.
ಕೂಡಲ ಸಂಗಮದೇವನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬ ವಚನಕ್ಕೆ ಬದ್ಧರಾಗಿದ್ದಾರೆ. "ಅತಿಥಿ ದೇವೋ ಭವ, ವೆಂಬ ಉಪನಿಷತ್ತಿನ ವಾಕ್ಯ ಅವರ ಉಸಿರಾಗಿದೆ.

ಶ್ರೀಗಳ ಎತ್ತರದ ನಿಲುವು, ಗಂಭೀರವಾದ ಮುಖ ಮುದ್ರೆ ಆಕರ್ಷಣೀಯ ವ್ಯಕ್ತಿತ್ವ. ಮುಖದಲ್ಲಿ ಮಂದಹಾಸದ ನಗು, ಆತ್ಮೀಯತೆಯ ಮಾತುಗಳು, ಅಂತಃ ಕರುಣೆಯ ನೋಟ ಪ್ರೀತಿಯ ಊಟ. ಇವೆಲ್ಲ ನಮ್ಮನ್ನು ದಂಗು ಬಡಿಸುತ್ತವೆ. ಮೃದುಗೊಳಿಸಿ ಮಣಿಯುವಂತೆ ಮಾಡುತ್ತವೆ. ಇವೆಲ್ಲ ಗುಣಗಳು ಅವರಿಗೆ ಸಹಜವಾಗಿ ಬಂದವುಗಳಾಗಿವೆ. ಕೃತಕತೆ ಕೆಲವು ದಿನಗಳವರೆಗೆ ಮಾತ್ರವಿರುತ್ತದೆ. ಬಹು ದಿನ ಉಳಿಯಲಾರದು, ರೇವಣ್ಣನೆಂಬ ವಚನಕಾರ ಹೇಳುವಂತೆ.

ದಾಕ್ಷಿಣ್ಯದ ಭಕ್ತಿ, ಕಲಿಕೆಯ ವಿರಕ್ತಿ, ಮಾತಿನ ಮಾಲೆಯ ಬೋಧೆ
ತೂತುಜ್ಞಾನಿಗಳ ಸಂಸರ್ಗ, ಜೀತ ಕುಂಭದಲ್ಲಿ ಅಮೃತವ ಹೊಯಿದಿರಿಸಲಿಕ್ಕೆ
ಅದು ಎಷ್ಟು ದಿವಸ ಇರಲಾವುದು ?
ಇಂತಿವ ಕಳಿದುಳಿದುನಡೆ-ನುಡಿ ಸಿದ್ಧಾಂತವಾಗಿ ಕೂಡಬೇಕು
ಸದ್ಯೋಜಾತ ಲಿಂಗವ.

ಎನ್ನುವಂತೆ, ಭಕ್ತಿ. ವಿರಕ್ತಿ ಕಲಿತರೆ ಬರುವಂತಹವಲ್ಲ, ಅವು ಸ್ವಲ್ಪ ಮೊದಲಿನಿಂದಲೂ ರಕ್ತದಲ್ಲಿ ಬೆರೆತು ಬಂದಿರಬೇಕು. ತಂದೆ, ತಾಯಿ, ಮನೆತನ ಪರಿಸರದ ಸಂಸ್ಕಾರದಿಂದ ಪ್ರಾಪ್ತವಾಗುತ್ತವೆ. ಇವೆಲ್ಲ ಅವರ ಬದುಕಿಗೆ ಹಿನ್ನೆಲೆಯಾಗಿರುವುದರಿಂದ ಸಂಸ್ಕಾರವಂತ ವ್ಯಕ್ತಿಯಾಗಿ ಬೆಳೆದಿರುವುದು ಸಹಜವಾಗಿದೆ. ಶ್ರೀಗಳ ತಾಯಿಯವರ ತವರೂರು ಕಲ್ಲರಳಿ, ಅದು ಜನಪದ ಮಾತಿನಲ್ಲಿ ಕಲ್ಲೋಳಿಯಾಗಿದೆ. ಅದಕ್ಕೊಂದು ರೈಲು ನಿಲ್ದಾಣವಿರುವುದರಿಂದ ಬ್ರಿಟಿಷರ ಕಾಲದಲ್ಲಿ ಕುಲಾಲಿಯೆಂದಾಗಿದೆ. ಈಗಲೂ ಕುಲಾಲಿ ಯೆಂದೆ ಪ್ರಸಿದ್ಧವಿರುವ ಈ ಹಳ್ಳಿ ಗುಲಬರ್ಗಾ ಜಿಲ್ಲೆಯ ಅಫಜಲಪೂರ ತಾಲ್ಲೂಕಿಗೆ ಸೇರಿದೆ. ಕುಲಾಲಿಯ ಹಿರೇಮಠದ ವೇ. ಮೂ. ವೀರಯ್ಯನವರೇ ಶ್ರೀಗಳ ತಾತನವರು. ಶ್ರೀ ವೀರಯ್ಯ ಸ್ವಾಮಿಗಳವರೆ ಹಿರೇಮಠದ ಮೇಲ್ವಿಚಾರಣೆ, ನೋಡಿಕೊಂಡು, ಊರ ಪರಭಾರೆ ಮಾಡುತ್ತ, ಶಾಸ್ತ್ರ. ಜೋತಿಷ್ಯ, ಪೂಜೆ, ಪಾಠಗಳು ನಡೆಸಿಕೊಂಡು ಹೋಗುತ್ತಿದ್ದರು. ಇವರ ಧರ್ಮಪತ್ನಿ ಈರಮ್ಮನವರು, ಊರ ಜನರೆಲ್ಲಾ ಇವರನ್ನು ಗುರುತಾಯಿ ಎಂದೇ ಕರೆಯುತ್ತಿದ್ದರು. ಈ ದಂಪತಿಗಳ ಉದರದಲ್ಲಿ ಜನಿಸಿದವರೇ ಪಾರ್ವತಿಬಾಯಿಯವರು. ಮೊದಲ ಸುಪುತ್ರಿ. ಪಾರ್ವತಿಬಾಯಿ ಬೆಳೆದು ದೊಡ್ಡವ ಳಾದ ಮೇಲೆ ಹತ್ತಿರದ ಸಂಬಂಧಿಕರಾದ ಹರವಾಳ ಗ್ರಾಮದ ವೇ. ಮೂ. ಶರಣ ಬಸವಯ್ಯನವರಿಗೆ ಮದುವೆ ಮಾಡಿಕೊಟ್ಟರು. ಕಾಲಾಂತರದಲ್ಲಿ ಆ ತಾಯಿಗೆ ಎರಡು ಗಂಡು ಮಕ್ಕಳು ಜನಿಸಿದವು. ಆ ಎರಡು ಮಕ್ಕಳಲ್ಲಿ ಎರಡನೆಯವರೆ ಪೂಜ್ಯ ಶ್ರೀಗಳು. ಇವರ ಪೂರ್ವಾಶ್ರಮದ ಹೆಸರು ಸೊನ್ನಲಗಿಯ ಸಿದ್ಧರಾಮನದಾಗಿದೆ. ಎಲ್ಲರೂ ಪ್ರೀತಿಯಿಂದ ಸಿದ್ಧರಾಮಯ್ಯ ಎಂದು ಕರೆಯುತ್ತಿದ್ದರು, ಮಠಕ್ಕೆ ಅಧಿಪತಿಯಾದ ಕೂಡಲೆ ಹೆಸರು ಬದಲಾಗುವುದು ಸಹಜ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವರ ತಾತನವರ ಸಹೋದರರ ಮಠಾಧಿಪತಿಯಾಗಿದ್ದರು. ಬಡದಾಳ ಗ್ರಾಮದ ಶ್ರೀ ಸುರಗಿ ಚನ್ನಮಲ್ಲೇಶ್ವರ ಸಂಸ್ಥಾನ ಮಠದ ಅಧಿಪತಿಗಳಾಗಿದ್ದರು, ಅವರ ನೆರಳಲ್ಲಿ ಪ್ರೀತಿಯಲ್ಲಿ ಬೆಳೆದ ಶ್ರೀಗಳು ಅವರ ಸರಳ ಸ್ವಭಾವ, ಉದಾರವಾದ ಗುಣಗಳು, ಜನೋಪಕಾರ ಅವರಿಂದ ಬಂದವುಗಳಾಗಿವೆ. ಕುಲಾಲಿ–ಬಡದಾಳ ಗ್ರಾಮಗಳ ಪರಿಸರದಲ್ಲಿ ಬೆಳೆದ ಶ್ರೀಗಳು ಸುಸಂಸ್ಕೃತರಾಗಿ ಬೆಳೆವುದು. ಸಹಜವಲ್ಲವೆ. ಯಾಕೆಂದರೆ ಆ ಪ್ರದೇಶವೇ ಪುಣ್ಯಮಯವಾಗಿದೆ. ಕವಿ ಚಾಮರಸ ಹೇಳುವಂತೆ,

ಸತ್ಯದಲ್ಲಿ, ಸದ್ಭಕ್ತಿಯಲಿ, ಸದ್ವೃತ್ತಿಯಲಿ, ಸಚ್ಚರಿತದಲಿ
ಸಂಪತ್ತಿನಲಿ ಸಲಿ ಸೊಗಸಿ ಜೆಳುವಲ ದೇಶಮೆ ದಿಪಃದು.

ಎನ್ನುವಂತೆ ಕುಲ್ಲಾಲಿ–ಬಡದಾಳ ಪ್ರದೇಶವೂ ಇಂತಹದ್ದಾಗಿದೆ. ಇಲ್ಲವಾದರೆ ಇಂತಹ ಮಹಾತ್ಮರ ಜನನವಾಗಲು ಸಾಧ್ಯವೆ ? ಎಂದು ವಿಚಾರ ಮಾಡಬೇಕಾಗುತ್ತದೆ,

ಪೂಜ್ಯರು ಕಲ್ಲರಳಿಯಲ್ಲಿ ಹೂವಾಗಿ ಅರಳಿ, ಕಲಬುರ್ಗಿಯಲ್ಲಿ ತಮ್ಮ ಸದ್ಗುಣದ ಮಕರಂದವನ್ನು ಸೂಸುತ್ತಿದ್ದಾರೆ. ಎಲ್ಲಿ ಯಾರ ಸೇವೆ ಅಗತ್ಯವಿದೆಯೋ ಅಲ್ಲಿಗೆ ಅವರನ್ನು ದೇವರು ನಿಯಮಿಸುತ್ತಾನೆ. ನೇಮಿಸಿದ ಕರ್ತವ್ಯ ನಿರ್ವಹಿಸುವುದೆ ಅವರ ಗುರಿಯಾಗಬೇಕು. ಮಹಾತ್ಮರ ಅವತಾರವಾಗುವುದೆ ಹೀಗೆ.

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಾಂ ಸೃಜಾಮ್ಯಹಮ್

ಕೃಷ್ಣ ಪರಮಾತ್ಮ ಹೇಳುವ ಹಾಗೆ ಜಗತ್ತಿನಲ್ಲಿ ಧರ್ಮಗ್ಲಾನಿಯಾದಾಗ ಭಗವಂತನೇ ಅವತರಿಸಿ ಧರ್ಮವನ್ನು ಉದ್ಧಾರ ಮಾಡುತ್ತಾನೆ. ಹಾಗೆಯೇ ಅಧರ್ಮ. ಅನ್ಯಾಯದ ಸುಳುಹುಗಳು ಬೆಳೆಯುವಲ್ಲಿ ಮಹಾತ್ಮರು ಅವತಾರ ತೆಗೆದುಕೊಳ್ಳುತ್ತಾರೆ. ಶರಣರ ಧೋರಣೆಯೂ ಇದೆ ಆಗಿದೆ. "ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗ ಬಾರದೆಂದು ಕರ್ತನಟ್ಟಿದನಯ್ಯ ಒಬ್ಬ ಶಿವಶರಣನು ಎನ್ನುವಂತೆ ಇದು ಮರ್ತ್ಯಲೋಕದ ಮಹಾಮನೆ. ಕರ್ತಾರನ ಕಮ್ಮಟವಾಗಿದೆ. ಇದರ ಯೋಗಕ್ಷೇಮ ಆತನಿಗೆ ಸೇರಿದ್ದು.

ಆದ್ದರಿಂದ ಅವನ ಅಪ್ಪಣೆ ಮೇರೆಗೆ ಶರಣರು, ಸಂತರು ಅವತರಿಸುತ್ತಾರೆ. ಹಾಗೆ ಶ್ರೀಗಳು ತಮ್ಮ ಜೀವನಾವತಾರ ನಿಮಿತ್ಯ ಮಾತ್ರದಲ್ಲಿ ಕುಲಾಲಿಯಲ್ಲಾದರೂ ಅವರ ಜೀವನದ ವಿವಿದ ಲೀಲೆಗಳು ಕಲಬುರ್ಗಿಯಲ್ಲಿ ಕಾಣಬಹುದಾಗಿದೆ, ಶ್ರೀಗಳು ಕಲಬುರ್ಗಿಯ ಶಹಾಬಜಾರದ ಸಂಸ್ಥಾನ ಮಠವಾದ ಸುಲಫಲ ಮಠಕ್ಕೆ ಅಧಿಪತಿಯಾಗಿ ಅಧಿಕಾರ ಸ್ವೀಕರಿಸಿ ಇಂದಿಗೆ ಹನ್ನೆರಡು ವರ್ಷಗಳು ಗತಿಸಿದವು. ಈ ಮಠಕ್ಕೆ ಒಂದು ಭವ್ಯ ಪರಂಪರೆಯಿದೆ. ದಿವ್ಯವಾದ ಇತಿಹಾಸವಿದೆ. ವಿಶಿಷ್ಟತೆಯಿಂದ ಕೂಡಿದ ಮಠ ವಾಗಿದೆ. ಮೂಲ ಪೀಠ ತಾಜಸುಲ್ತಾನಪೂರದಲ್ಲಿದೆ. ಗುಲಬರ್ಗಾದಿಂದ ೩ ಕಿ. ಮೀ. ದೂರದಲ್ಲಿ. ಈ ಗ್ರಾಮವಿದೆ. ಇಲ್ಲಿಯ ಮಠದ ಕಟ್ಟಡ ಐತಿಹಾಸಿಕವಾದುದಾಗಿದೆ. ಆ ಕಟ್ಟಡದ ಮಾದರಿ, ರೀತಿ, ಶೈಲಿ ನೋಡಿದರೆ ಬಹಮನಿ ಅರಸರ ಕಾಲದ್ದೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾರಾದರೂ ಹೇಳಬಹುದು. ಸುಮಾರು ಐದು ನೂರು ವರ್ಷಗಳ ಇತಿಹಾಸ ಹೊಂದಿರಲೇಬೇಕು. ಅಲ್ಲಿಂದ ಗುಲಬರ್ಗಾ ಶಹಾಬಜಾರದಲ್ಲಿ ಇನ್ನೊಂದು ರೀತಿಯ ವಿಶಿಷ್ಟವಾದ ಮಠವಿದೆ. ಇದಕ್ಕೆ ಕನಿಷ್ಟ ಪಕ್ಷ ಮೂರುನೂರು ವರ್ಷಗಳ ಇತಿಹಾಸ ವಿರಬೇಕು ಅನ್ನಿಸುತ್ತದೆ. ಅಲ್ಲದೆ ಶೇಖರೋಜಾ ಎಂಬಲ್ಲಿ ಮತ್ತೊಂದು ಮಠವಿದೆ. ಅಲ್ಲಿಯ ಭಾವಿ, ಮಠದ ಕಟ್ಟಡ ಅವೆಲ್ಲ 15ನೇ ಶತಮಾನಕ್ಕೆ ಸೇರಿದ್ದೆಂದು ಯಾರಾದರೂ ಹೇಳಬಹುದಾಗಿದೆ. ಇನ್ನೂ ಎರಡೂ ಮೂರು ಮಠಗಳು ಬೇರೆ ಬೇರೆ ಹಳ್ಳಿಗಳಲ್ಲಿ ಜೀರ್ಣಾವಸ್ಥೆಯಲ್ಲಿವೆ. ಶ್ರೀಗಳು ಅಧಿಕಾರಕ್ಕೆ ಬಂದ ಮೇಲೆ ತಾಜ ಸುಲ್ತಾನಪೂರ. ಗುಲಬರ್ಗಾ ಎರಡೂ ಮಠಗಳು ಪುನರ್‌ವೈಭವ ಪಡೆದುಕೊಂಡಿವೆ. ಉಳಿದ ಮಠಗಳು ಪುನರುಜ್ಜೀವನ ಸ್ಥಿತಿಯಲ್ಲಿವೆ. ಇವರು ಈ ಮಠದ ಎಷ್ಟನೆಯ ಉತ್ತರಾಧಿಕಾರಿಗ ಳೆಂದು ಖಚಿತವಾಗಿ ಹೇಳುವುದು ಕಷ್ಟ. ಆದರೆ ಇವರಿಗಿಂತ ಪೂರ್ವದಲ್ಲ ಕೆಲವು ಜನ ಸ್ವಾಮಿಗಳು ಮಠಾಧಿಪತಿಗಳಾಗಿ ಹೋಗಿದ್ದು, ಅವರ ಸಮಾಧಿಗಳಿರುವುದು ಗಮನಾರ್ಹ ವಾಗಿದೆ. ಈ ಮಠದ ಪರಂಪರೆಯಲ್ಲಿ ಬರುವ ಕೆಲವು ಜನ ಸ್ವಾಮಿಗಳ ಹೆಸರನ್ನು ಈ ರೀತಿ ನಮೂದಿಸಬಹುದಾಗಿದೆ.

1. ಶ್ರೀ ಷ.ಬ್ರ, ವೃಷಭಲಿಂಗ ಶಿವಾಚಾರ್ಯರು.
2. ಶ್ರಿ ಷ. ಬ್ರ. ಸುಲಫಲ ಶಿವಾಚಾರ್ಯರು.
3. ಶ್ರೀ ಷ. ಬ್ರ. ರುದ್ರಮುನಿ ಶಿವಾಚಾರ್ಯರು.
4. ಶ್ರೀ. ಷ. ಬ್ರ. ಮಹಾಂತ ಶಿವಾಚಾರ್ಯರು.
5. ಶ್ರೀ ಷ. ಬ್ರ. ಗುರುಲಿಂಗ ಶಿವಾಚಾರ್ಯರು.
6. ಶ್ರಿ. ಷ. ಬ್ರ. ಚನ್ನವೀರ ಶಿವಾಚಾರ್ಯರು.

ಹೀಗೆ ಕೆಲವು ಹೆಸರುಗಳು ನಮಗೆ ಅಧಿಕೃತವಾಗಿ ಸಿಗುತ್ತವೆ. ದೊರೆಯದೆ ಇತಿಹಾಸ ಪುಟಗಳಿಂದ ಎಷ್ಟೋ ಮರೆಯಾಗಿ ಹೋಗಿರುತ್ತವೆ. ದೊರೆತವುಗಳ ಮೇಲಿಂದ ಇತಿಹಾಸ ಬರೆಯಬೇಕಲ್ಲವೆ ? ತಮ್ಮ ಪೀಠದ ಕಳೆದುಹೋದ ಗತ ವೈಭವವನ್ನು ಪುನರ್ ಪ್ರತಿಷ್ಠಾಪಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಮಠದಲ್ಲಿ ನಿತ್ಯ ದಾಸೋಹ ಗೈಯುತ್ತಿರುವುದರೊಂದಿಗೆ, ಅನೇಕ ವಿದ್ಯಾರ್ಥಿಗಳಿಗೆ ನೆರಳು ಕೊಟ್ಟ ವಸತಿ ನಿಲಯ ವಾಗಿದೆ. ಶ್ರೀಗಳು ಶಿಕ್ಷಣ ಸಂಸ್ಥೆಯೊಂದು ಕಟ್ಟಿ ತನ್ಮೂಲಕ ಸಾಮಾಜಿಕ, ಶೈಕ್ಷಣಿಕ ಸೇವೆ ಸಲ್ಲಿಸಬೇಕೆಂಬ ಹಂಬಲವುಳ್ಳವರಾಗಿದ್ದಾರೆ. ಆ ಇಚ್ಛೆ ಭಗವಂ ಬೇಗ ಪೂರೈಸ ಲೆಂಬ ಆಸೆಯೂ ನಮಗಿದೆ. ನಾವು ಯಾವುದೇ ಕಾರ್ಯ ಮಾಡಲು ಹೊರಟಾಗ ಹಣ ಬಲವೊಂದಿದ್ದರೆ ಸಾಲದೆನ್ನುವ ಶ್ರೀಗಳು ಜೊತೆಗೆ ಶರೀರಬಲ, ಆತ್ಮ ಬಲ, ಮನೋಬಲ ಇವೆಲ್ಲ ಬಲಗಳಿದ್ದರೇನೆ ಹಿಡಿದ ಕಾರ್ಯ ಯಶಸ್ವಿಯಾಗುವುದು ಎನ್ನು ತ್ತಾರೆ. ಯಾಕೆಂದರೆ ಒಳ್ಳೆಯ ಕಾರ್ಯಗಳನ್ನು ಕೈಗೆತ್ತಿಕೊಂಡಾಗ ನಾವು ತೊಂದರೆ ಗಳನ್ನು ಅನುಭವಿಸುವುದೆ ಹೆಚ್ಚು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೇಯಾಂಸಿ ಬಹು ವಿಘ್ನಾನೀತ್ಯೇ
ತನ್ನಹ್ಯದುನಾಭವತ್

ಒಳ್ಳೆಯ ಕಾರ್ಯಗಳು ಸಾಕಷ್ಟು ವಿಘ್ನಗಳಿಂದ ಕೂಡಿರುತ್ತವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಹಾಗೆಂದು ಒಳ್ಳೆಯ ಕಾರ್ಯಗಳನ್ನು ಮಾಡದೆ ಇರಲಿಕ್ಕಾಗುತ್ತದೆಯೇ ? ಎನ್ನುವ ಶ್ರೀಗಳು ಸತ್ಕಾರ್ಯಕ್ಕೆ ಯಾವ ವಿಘ್ನ ಬಂದರೂ ಲೆಕ್ಕಿಸದೆ ಎದೆ ತಟ್ಟಿ ಕೆಲಸ ಮಾಡುತ್ತಾರೆ.

ಪೂಜ್ಯರು ಬಡವರ, ದೀನ ದಲಿತರ ಬಗ್ಗೆ ಅಪಾರವಾದ ಕಾಳಜಿ ಇಟ್ಟು ಕೊಂಡಿದ್ದಾರೆ. ಅವರು ಹೇಳುತ್ತಾರೆ. ಬಡವರ ನೋವಿನಲ್ಲಿ ನಾವು ಪಾಲುತೆಗೆದು ಕೊಳ್ಳುವುದರ ಜೊತೆಗೆ ನಮ್ಮ ಹೃದಯ ಕರಗಬೇಕು, ಅವರ ಒಳಿತಿಗಾಗಿ ನಮ್ಮೆದೆ ಕುದಿಯಬೇಕು. ಅಂದರೇನೆ ನಾವು ಸ್ವಾಮಿಗಳಾದದ್ದು ಸಾರ್ಥಕವೆನ್ನುತ್ತಾರೆ. ಕುವೆಂಪು ರವರು ಹೇಳುವ ಹಾಗೆ

ಬಡವ ?
ವಿಪರೀತನಾದಡೆ ವಡಬ
ಬಡವ
ತಿರುಗಿ ನಿಂತರೆ ವಡಬ

" ಬಡವರ ನೋವಿಗೆ ಯಾರೆದೆ ಕುದಿಯುತ್ತದೆಯೋ ಆತನೆ ಮಹಾತ್ಮನು : ಉಳಿದವರೆಲ್ಲ ದುರಾತ್ಮರು " ಎಂಬ ಮಾತು ನಾವು ಸ್ಮರಣೆಯಲ್ಲಿಟ್ಟುಕೊಳ್ಳಬೇಕು. ಎನ್ನುವ ಶ್ರೀಗಳು ನಿಜವಾಗಿ ಬಡಮಕ್ಕಳ ಒಳಿತಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳು ತ್ತಿದ್ದಾರೆ.

ಗೂರೂಜಿಯುವರು ತಮ್ಮ ಪ್ರವಚನದಲ್ಲಿ ಈ ವಚನ ಹೆಚ್ಚು ಬಳಸುತ್ತಾರೆ, ಇದು ತುಂಬಾ ಪ್ರೀಯವಾಗಿದೆ. ಅಲ್ಲದೆ ಮಹತ್ವಪೂರ್ಣವೂ ಆಗಿದೆ.

ಕಿವಿಗೆ ಗಾನವು ಲೇಸು, ಕವಿಗೆ ನವರಸಲೇಸು,
ಭವ ಬಂಧ ಕಳೆವ ಗುರುಲೇಸು, ಮುಕ್ತಿಗೆ
ಶಿವಮಂತ್ರಲೇಸು ಸರ್ವಜ್ಞ :

ಎನ್ನುವ ಸರ್ವಜ್ಞನ ಮಾತಿನಲ್ಲಿನ, ಗಾನ, ನವರಸ, ಗುರು, ಶಿವಮಂತ್ರ, ಇವು ಮಾನವ ಕಲ್ಯಾಣ ಬಯುಸುವ ಮುಖ್ಯ ವಿಷಯುಗಳಾಗಿವೆ ಎನ್ನುತ್ತಾರೆ. ಒಳ್ಳೆಯ ಗಾಯಕರು ಅತ್ಯುತ್ತಮ ಕವಿಗಳು, ಭವ ಬಂಧನದಿಂದ ಮುಕ್ತಮಾಡುವ ಸದ್ಗುರು, ಶಿವಮಂತ್ರ ಇವೆಲ್ಲ ದೊರೆತರೆ ಮಾನವ ಮಹಾದೇವನಾಗುವುದರಲ್ಲಿ ಸಂದೇಹವಿಲ್ಲ ವೆನ್ನುತ್ತಾರೆ. ವೈಚಾರಿಕ ಪ್ರಜ್ಞೆಯ ಶ್ರೀಗಳು, ಆಧುನಿಕ ಧೋರಣೆಗಳಿಗೆ ಹೆಚ್ಚು ಸ್ಪಂದಿಸುತ್ತಾರೆ, ಹೀಗಾಗಿ ಯುವ ಜನಾಂಗಕ್ಕೆ ಹೆಚ್ಚು ಪ್ರಿಯರಾಗಿದ್ದಾರೆ, ●

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨ " ಶೂನ್ಯ ಸಂಪಾದನೆಯಲ್ಲಿ ಅಲ್ಲಮ ಪ್ರಭು "

● ಡಾ. ಸಂಗಮೇಶ್ವರ, ಸವದತ್ತಿಮಠ.

" ಹಿಮಾಲಯದ ಉತ್ತುಂಗ ಶೃಂಗಗಳನ್ನೇರಲು ಹೊರಟ ಪರ್ವತಾರೋಹಿಗೆ ಶತಶೃಂಗ ಸಾಗುವಿನ ನಡುವೆ ಸವಾಲಾಗಿ ನಿಲ್ಲುವ ಎವೆರೆಸ್ಟನಂತೆ ಶೂನ್ಯಸಂಪಾದನೆಯ ಪ್ರವೇಶ ದ್ವಾರದಲ್ಲಿ ಭೂವ್ಯೋಮ ವ್ಯಾಪ್ತಿಯಾದ ಮಹಾನವ್ಯಕ್ತಿ ಅಲ್ಲಮನನ್ನು ಸಂದರ್ಶಿಸುತ್ತೇವೆ, ಅವನ ಅನ್ಯಾದೃಶ ವ್ಯಕ್ತಿತ್ವವನ್ನು ಬಣ್ಣಿಸಲು ಋತುಗಳು ಸೋತಾವು ಬೆಟ್ಟಗಳು ಬಳಲಿಯಾವು, ಮಾತು ಮನಂಗಳಿಗೆ ಮೀರದಂತಹ ಜ್ಯೋತಿ ಆತ, ಅವನುಜ್ಞಾನದ ಮೇರು, ವೈರಾಗ್ಯ ನಿಧಿ, ವ್ಯೋಮಮೂರುತಿ ಉರಿವ ಹರಿಯುವ ಜ್ವಾಲೆ, ಸುಳಿದಾಡುವ ಬೆಳಕು, ಈ ಜಂಗಮ ಜ್ಯೋತಿಯ ಭವ್ಯ ವ್ಯಕ್ತಿತ್ವ ಅಮೇಯ ಅಪ್ರಮೇಯ, ಅಧ್ಯಾತ್ಮವಲಯದಲ್ಲಿ ಅವನನ್ನು ಸರಿಗಟ್ಟುವ ಮತ್ತೊಬ್ಬ ವ್ಯಕ್ತಿ ಹಿಂವೆ ಬಂದಿಲ್ಲ ಮುಂದೆ ಬರುವನೆಂಬ ಭರವಸೆ ಇಲ್ಲ " ೧. ಎಂದು ಅಲ್ಲಮನ ಅಗಾಧ ವ್ಯಕ್ತಿತ್ತವನ್ನು ವರ್ಣಿಸಲಾಗಿದೆ. ಹನ್ನೆರಡನೆಯ ಶತಮಾನದಲ್ಲಿದ್ದ ಅಸಂಖ್ಯಾತ ಶರಣ ಸಂಮೋಹದಲ್ಲಿ ತನ್ನ ಉಪಮಾತೀತ ಅನುಭಾವದ ಮುದ್ರೆಯನ್ನು ಒತ್ತಿ ತನ್ನ ವಿಚಾರ ಧಾರೆಯನ್ನು ಶರಣರ ಮನದಲ್ಲಿ ಹರಿಸಿ ಅವರನ್ನು ಧನ್ಯರನ್ನಾಗಿಸಿ ಅವರ ವಿಚಾರ ಧಾರೆಯನ್ನು ತನ್ನ ವಿಚಾರಧಾರೆಗೆ ಸೇರಿಸಿಕೊಂಡು ಓತಪ್ರೋತವಾದ ಗಂಭೀರ ಅಧ್ಯಾತ್ಮದ ಮಹಾಪ್ರವಾಹವೇ ಆಗಿ ನಿಂತವನು ಈ ಅಲ್ಲಮ ಪ್ರಭು. ಎಲ್ಲ ನದಿಗಳು ಸಾಗರವನ್ನು ಸೇರಿ ಸಾಗರವೇ ಆಗಿ ಧನ್ಯತೆಯನ್ನು ಪಡೆಯುವಂತೆ ಎಲ್ಲ ಶರಣರ ವಿಚಾರ ವಿಮರ್ಶೆಗೆ ಅಲ್ಲಮನೆ ಕೇಂದ್ರ ವ್ಯಕ್ತಿಯಾಗಿ ನಿಲ್ಲುತ್ತಾನೆ, ಎಲ್ಲರ ಪ್ರಶ್ನೆಗೆ ತಾನೇ ಉತ್ತರವಾಗಿ, ಎಲ್ಲರ ಉತ್ತರಗಳಿಗೆ ತಾನೇ ಪ್ರಶ್ನೆಯಾಗಿ ಸರ್ವರಿಗೂ ಸಾಂತ್ವನದ ಮಡುವಾಗುತ್ತಾನೆ, ಅವನ ಜ್ಞಾನ ಕಾಯದಲ್ಲಿ ಮರೆವು ಎಂಬುದಿಲ್ಲ, ಅವನ ಭಾವ ಕಾಯದಲ್ಲಿ ಭ್ರಮೆಯ ಸುಳುಹು ಇಲ್ಲ. ಅವನು ಲೋಕ ಗುರು, ಆತ್ಮ ಗುರು, ಅಧ್ಯಾತ್ಮ ಗುರು, ಅಂತೆಯೇ ಇಂಥ ಗುರುವಿನ ಬರುವಿಗಾಗಿ ಬಸವಣ್ಣ ಹನ್ನೆರಡು ವರ್ಷ ಕಾಯ್ದನಂತೆ. ಬಸವಣ್ಣ ತಾನು ರಚಿಸಿದ ಅನುಭವ ಮಂಟಪದ ಶೂನ್ಯಪೀಠಕ್ಕೆ ಅಧ್ಯಕ್ಷರಾಗಬಲ್ಲ ಸೂಕ್ತ ವ್ಯಕ್ತಿಗಾಗಿ ತಡಕಾಡುತ್ತಿದ್ದಾಗ, ಅಲ್ಲಮನ ಹೊರತಾಗಿ ಬೇರಾರೂ ಅವನಿಗೆ ಸಮರ್ಥರಾಗಿ ಗೋಚರಿಸಲಿಲ್ಲ.

೧, ಶೂನ್ಯಸಂಪಾದನೆ ಒಂದು ಅಧ್ಯಯನ: (ಸಂ) ಡಾ, ಸಾ,ಶಿ, ಮರುಳಯ್ಯ ಪುಟ ೬೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೂನ್ಯ ಸಂಪಾದನೆಯಲ್ಲಿ ಇಂಥ ವ್ಯೋಮ ವ್ಯಕ್ತಿತ್ವದ ಅಲ್ಲಮನನ್ನು ನಾಯಕ ಪಾತ್ರದಲ್ಲಿ ನಿಲ್ಲಿಸಿದ್ದು ಸರ್ವಥಾ ಯೋಗ್ಯವೆನಿಸಿದೆ. ಶೂನ್ಯ ಸಂಪಾದನಕಾರ ಅಲ್ಲಮನನ್ನು ಕೇವಲ ತತ್ತ್ವ ಪ್ರತಿಪಾದನಾ ಕಾರ್ಯಕ್ಕೆ ಮಾತ್ರ ಮೀಸಲಾಗಿಟ್ಟಿಲ್ಲ. ತೋರಿಕೆಗೆ ಅಲ್ಲಮನು ವೀರಶೈವ ಧರ್ಮಾಚರಣೆಗಳ ಪ್ರತಿಷ್ಠಾನ ಅನುಷ್ಠಾನಾಚಾರ್ಯ ನೆನಿಸಿದರೂ ಶೂನ್ಯ ಸಂಪಾದನಕಾರನ ದೃಷ್ಟಿಯಲ್ಲಿ ಅಲ್ಲಮನು "ಪಂಚಾಚಾರ ಪ್ರತಿಷ್ಠಾಪನಾಚಾರ್ಯ", "ಷಟಸ್ಥಲ ಚಕ್ರವರ್ತಿ", "ಶ್ರೀ ವೀರಶೈವಾಚಾರ ಶಿರೋರತ್ನ" "ಶ್ರೀ ವೀರಶೈವಾಚಾರ ಪ್ರಮಥನಾಯಕ "ಶ್ರೀ ವೀರಶೈವಾಚಾರ ದೀಕ್ಷಾಚಾರ್ಯ" "ಮರ್ತ್ಯಲೋಕ ಪಾವನ ಕಾರಣಾವತಾರ", "ಅನಿಮಿಷ ಶ್ರೀ ಚರಣಾಂಭೋಜ ಕರ್ಣಿಕಾವಾಸ ಗೊಹೇಶ್ವರ ನಾಮಾಮೃತ ಸ್ವೀಕಾರ ಸಂತುಷ್ಟ ಶ್ರೀಮತ್ ಸಕಲ ಜಗದಾಚಾರ್ಯ", ಹೀಗೆ ಶೂನ್ಯ ಸಂಪಾದನೆಯು ಅಲ್ಲಮ ಪ್ರಭುವನ್ನು ಅವತಾರ ಪುರುಷ ವೀರಶೈವ ತತ್ತ್ವಾರ್ಥ ಪ್ರತಿಪಾದನಾಚಾರ್ಯನೆಂದು ಮುಂತಾಗಿ ಭಾವಿಸಿದರೂ ಅವನ ಮಾನವೀಯ ಗುಣಗಳನ್ನು ಎತ್ತಿ ಹಿಡಿಯುತ್ತವೆ. ಅಲ್ಲಮ ಪ್ರಭುವಿನ ಪಾತ್ರಚಿತ್ರಣ ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಹೆಚ್ಚು ಸ್ಫುಟ ವಾಗಿ ಮೂಡಿ ಬಂದಿದೆ. ಶೂನ್ಯ ಸಂಪಾದನೆಯಲ್ಲಿ ಬಹುಮಟ್ಟಿಗೆ ಪ್ರಭುವಿನ ಪಾತ್ರ ದೃಷ್ಟಿಯಿಂದ ಪ್ರಭುಲಿಂಗಲೀಲೆಯನ್ನು ಅನುಸರಿಸಿರುವುದೂ ಕಂಡು ಬರುತ್ತದೆ. ಮುಕ್ತಾಯಕ್ಕ, ಸಿದ್ಧರಾಮ, ಮಹಾದೇವಿಯಕ್ಕ ಈ ಪಾತ್ರಗಳೊಂದಿಗಿನ ಸನ್ನಿವೇಶಗಳಲ್ಲಿ ಪ್ರಭುಲಿಂಗಲೀಲೆಗಿಂತ ಶೂನ್ಯ ಸಂಪಾದನೆ ಪ್ರಭುವಿನ ಮಾನವೀಯ ಗುಣಗಳನ್ನು ಹೆಚ್ಚು ಹೆಚ್ಚಾಗಿ ನಿರೂಪಿಸಿದೆ. ಮುಕ್ತಾಯಕ್ಕ ಅಲ್ಲಮನನ್ನು ಜಡಿದು ಝಂಕಿಸಿ, ಅಲ್ಲಮನದೆಲ್ಲವೂ ಬರಿಯ ತೋರಿಕೆಯ ಜ್ಞಾನ ಎಂದು ಹಾಸ್ಯ ಮಾಡಿ, ಕೊನೆಗೆ ಅಲ್ಲಮನಿಗೆ ಶರಣಾಗುತ್ತಾಳೆ. ಸಿದ್ಧರಾಮನ ಲಿಂಗದೀಕ್ಷೆಯ ಪ್ರಶ್ನೆ ಉದ್ಭೂತವಾದಾಗ ಸ್ವಯಂ ಜ್ಞಾನಿಯಾದ ಸಿದ್ಧರಾಮನಿಗೇಕೆ ಲಿಂಗ ದೀಕ್ಷೆ ಎಂದು ಅಲ್ಲಮನು ಆಕ್ಷೇಪಿ ಸುತ್ತಾನೆ. ಆಗ ಉಳಿದೆಲ್ಲ ಶರಣ ಸಂದೋಹ ಒಕ್ಕೊರಲಿನಿಂದ ಅಲ್ಲಮನನ್ನು ವಿರೋಧಿಸುತ್ತಾರೆ. ಅಲ್ಲಮನು ಅವರ ಅಭಿಪ್ರಾಯವನ್ನು ತೆಪ್ಪಗೆ ಒಪ್ಪಿಕೊಳ್ಳಬೇ ಕಾಗುತ್ತದೆ.

ಶೂನ್ಯ ಸಂಪಾದನೆಯಲ್ಲಿ ಅಲ್ಲಮನ ಅನುಭಾವದ ನಿಕಷಕ್ಕೆ ಉಳಿದೆಲ್ಲ ಪಾತ್ರಗಳು ತಮ್ಮ ತಮ್ಮ ಅನುಭಾವದೊಡನೆ ಒಡ್ಡಿಕೊಂಡು ಕೊನೆಗೆ ತಾವೂ ಆ ಮಹೋನ್ನತಿಯ ನೆಲೆಯನ್ನು ಕಂಡುಕೊಳ್ಳುತ್ತವೆ. ಪ್ರತಿಯೊಂದು ಪಾತ್ರವೂ ಅಲ್ಲಮನ ನೇತೃತ್ವದಲ್ಲಿ ತಮ್ಮನ್ನು ತಾವು ಬಿಚ್ಚಿಕೊಳ್ಳುತ್ತ ಹೋಗುತ್ತವೆ. ಪ್ರಭು ಎಲ್ಲ ಪಾತ್ರಗಳಿಗೆ ಮೂಕ ಪ್ರೇಕ್ಷಕನಾಗದೆ, ಅನುಭವಿ ಚಾಣಕ್ಷ ನ್ಯಾಯಾಧೀಶನಂತೆ ಎಲ್ಲವನ್ನು ಪ್ರಶಾಂತ ಚಿತ್ತ ದಿಂದ ನಿರ್ಲಿಪ್ತತೆಯಿಂದ ಕೇಳಿ, ಒರೆಗೆ ಹಚ್ಚಿ ಎಲ್ಲರ ಅಭಿಪ್ರಾಯ ಕೇಳಿ ಪ್ರಜಾ ಪ್ರಭುತ್ವ ರೀತಿಯಲ್ಲಿ ತನ್ನ ನಿರ್ಣಯವನ್ನು ಮಂಡಿಸುತ್ತಾನೆ. ಅಲ್ಲಮ ತಾನು ಅಧ್ಯಕ್ಷನೆಂದು ತನ್ನ ಪ್ರಭುತ್ವವನ್ನು ಅಂದರೆ ವೈಚಾರಿಕ ಪ್ರಭುತ್ವವನ್ನು ಎಲ್ಲರ ಮೇಲೆ ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷಿಯಲ್ಲ, ಕಥಾನಾಯಕನಾದರೂ ಸೂತ್ರಧಾರಿ. ಸೂತ್ರಧಾರಿಯಾದರೂ ತಾನೂ ಪಾತ್ರಗಳಲ್ಲಿ ಪಾತ್ರವಾಗಿ ನಡೆದುಕೊಳ್ಳುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತೆಯೇ ಅಣ್ಣನಾದಿಯಾಗಿ ಎಲ್ಲರಿಗೂ "ನಮೋ ನಮೋ" ಎಂದು ಕಿಂಕರ ಭಾವವನ್ನು ವ್ಯಕ್ತಪಡಿಸುತ್ತಾನೆ. ಪ್ರತಿಯೊಂದು ಪಾತ್ರವೂ ಅಲ್ಲಮನ ಅನುಭಾವದ ಜಾಗೃತ್ಯಕ್ಕೆ ತಲೆ ಬಾಗುತ್ತದೆ. ಆಯಾಪಾತ್ರದ ಅರುವಿಗೆ ಅಲ್ಲಮನು ತಲೆವಾಗುತ್ತಾನೆ. ಪರಸ್ಪರರ ಹೊಗಳಿಕೆ ಅದರ ಸಂಧಾನದ ಶುಭಫಲವಾಗಿ ಹೊರಹೊಮ್ಮುತ್ತದೆ.

ಮರುಳ ಶಂಕರದೇವನ ಗುಪ್ತಭಕ್ತಿ ಅಲ್ಲಮನಿಂದ ವ್ಯಕ್ತವಾದಾಗ ಆ ಮಹದಾಕಾರದ ಮರೆಯಲಿರ್ದ ಲಿಂಗಜ್ಞಾನ ಜ್ಯೋತಿಯನ್ನು ಕಂಡು ಆಶ್ಚರ್ಯಚಕಿತರಾಗುತ್ತಾರೆ. ಅವನೊಬ್ಬ ಭೂಮಿಯ ಮರೆಯಲ್ಲಿದ್ದ ಆಧ್ಯಾತ್ಮದ ನಿಧಾನ. ಅವನ ನಿಲವನ್ನತ್ತಿ ತೋರಿದಾಗ "ಅರಿವಿಂಗಸಾಧ್ಯ" ಉಪಮೆಗೆ ಕಡೆ ಮುಟ್ಟದ್ದು. ನಿಜದಲ್ಲಿ ನಿರ್ಲೇಪ ಭಾವುಕರು ಕೂಡಲ ಸಂಗಮದೇವ ನಿಮ್ಮ ಶರಣ ನಿಲವನರಿವರೆ ನಾನೇತರವನಯ್ಯಾ" ಎಂದು ಬಸವಣ್ಣ ಉದ್ಗರಿಸುತ್ತಾನೆ.

ಶಿವಯೋಗಕ್ಕೆ ಇನ್ನೊಂದು ಹೆಸರು ಸಿದ್ಧರಾಮ. ಕರ್ಮಯೋಗಿಯಾಗಿದ್ದ ಇವನನ್ನು ಶಿವಯೋಗಿಯನ್ನಾಗಿಸಿ ಅವನ ಕೊರತೆಯನ್ನು ಎತ್ತಿ ತೋರಿದಾತ ಅಲ್ಲಮಪ್ರಭು. ಅಂಗದ ಮೇಲೆ ಲಾಂಛನರೂಪಿಯಾದ ಲಿಂಗವಿದ್ದರೂ ಸರಿ, ಇಲ್ಲದಿದ್ದರೂ ಸರಿ. ಆ ಸ್ವಯಂ ಲಿಂಗಜ್ಞಾನಿಯೇ ಆಗಿರುವ ಸಿದ್ಧರಾಮನನ್ನು ಅಂಗದ ಮೇಲೆ ಲಿಂಗವಿಹೀನನ್ನಾಗಿ ಸ್ವೀಕರಿಸುವ ಅಲ್ಲಮ ನಿಜವಾಗಿ ಮಾನವತಾವಾದಿ. ಆದರೇನು ? ಕೆರೆ, ಕಟ್ಟೆ, ಗುಡಿ, ಗೋಪುರಗಳನ್ನು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶಿವಲಿಂಗ ಶಿವಾಲಯಗಳನ್ನು ನಿರ್ಮಿಸಿರುವುದನ್ನು ನೋಡಿ ನಗುತ್ತಾನೆ. ಬಯಲೇ ಬತ್ತಲಾಗಿದೆಯೆಂದು ತಿಳಿದೂ ಅದಕ್ಕೆ ಬಟ್ಟೆಯನ್ನು ತೊಡಿಸಲು ಹೋಗುತ್ತಿರುವನಲ್ಲಾ ಈ ಸಿದ್ಧರಾಮನೆಂದು ಅವನ ಲೋಕೋಪಕಾರದ ವ್ಯಾಮೋಹಕ್ಕೆ ಮರಮರನೆ ಮರುಗುತ್ತಾನೆ. ಭ್ರಮೆಯ ಬೇತಾಳ ಹಿಡಿದು ಜ್ಞಾನವಿದ್ದು ಅಜ್ಞಾನಿಯಾಗಿರುವ ಸಿದ್ಧರಾಮನನ್ನು ಸ್ಥಾವರದಿಂದ ಜಂಗಮಕ್ಕೆ ಬಗ್ಗಿಸುತ್ತಾನೆ. ಅವನಿಗೆ "ಉರಿಯುಂಡ ಕರ್ಪೂರವಾಗುವ" ದಿವ್ಯ ಮಾರ್ಗವನ್ನು ಕಾಣಿಸುತ್ತಾನೆ. ಸಿದ್ಧರಾಮನ ಆ ಅತ್ಯುನ್ನತ ಶಿಖರವನ್ನು ತಲುಪಿದಾಗ ಅಲ್ಲಮನಿಗೆ ಅತ್ಯಾನಂದವಾಗುತ್ತದೆ. ಅವನನ್ನು ಮನಸಾರೆ ಹೊಗಳುತ್ತಾನೆ.

"ಕಾಮನ ಕೊಲ್ಲುವಲ್ಲಿ ಹೋಮವ ಸುಡುವಲ್ಲಿ
ತ್ರಿಪುರ ಸಂಹಾರದ ಕೀಲನರಿವಲ್ಲಿ...
ಆತನ ಯೋಗಿ ಎನಬೇಡ, ಆತನ ಭೋಗಿ ಎನಬೇಡ.
ಆತನೇ ಅಚ್ಚಲಿಂಗೈಕ್ಯನು ಹಸಿವ ಅಳಿದಲ್ಲಿ
ವ್ಯಸನವಳಿವಲ್ಲಿ ಗುಹೇಶ್ವರ ಲಿಂಗವು
ಸಿದ್ಧರಾಮಯ್ಯ ದೇವರು ತಾನೆ..."

ಹಾಗೆಯೆ ಶಿವಯೋಗಿ ಸಿದ್ಧರಾಮನೂ ಸಹ ಅಲ್ಲಮನನ್ನು ಹೃತ್ಪೂರ್ವಕ ವಂದಿಸುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಲಿಂಗಭಕ್ತಿ ಪ್ರಭುದೇವರು, ಜಂಗಮಭಕ್ತಿ ಬಸವಣ್ಣ,
ಗುರು ಮೊದಲಾದ ಪ್ರಸಾದ ಸರ್ವಕ್ಕೆ ಅನುಭಾವಿ
ಚನ್ನಬಸವಣ್ಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಇಂತಿವರ ಪಾದಕ್ಕೆ ನಮೋ ನಮೋ ಎಂಬೆನು "

ಶೂನ್ಯ ಸಂಪಾದನೆ ಬಸವಣ್ಣನ ಆಗಾಧ ವ್ಯಕ್ತಿತ್ವದ ಸರ್ವ ಮುಖಗಳೆಲ್ಲವನ್ನೂ ಪರಿಚಯಿಸುವುದಿಲ್ಲ. ಕೇವಲ ಆ ಪಾತ್ರದ " ಮನ–ಘನ–ಜ್ಞಾನಗಳೆಂಬ ಮೂರು ಮೌಲ್ಯಗಳನ್ನು ಮಾತ್ರ ಪ್ರಸ್ತಾಪಿಸುತ್ತದೆ. ಬಸವಣ್ಣನನ್ನು ಕುರಿತು ನೇರ ಪ್ರಶ್ನೆ ನೇರ ಉತ್ತರಗಳು ಅಲ್ಲಿವೆ. ಇನ್ನಿತರ ಶರಣರ ಸಂದರ್ಭಗಳಲ್ಲಿ ಬಸವಣ್ಣನನ್ನು ಅಲ್ಲಮ ಸಾಕ್ಷಿಯಾಗಿಸಿ ಇದು ಹೇಗೆ ? ಎನ್ನುತ್ತಾನೆ, ಇದರಿಂದ ಬೇರೆ ಬೇರೆ ಶರಣರ ಸಂಪಾದನೆಗಳಲ್ಲೂ ಬಸವಣ್ಣನ ಪಾತ್ರ ಮಿಂಚುತ್ತದೆ. ಚನ್ನಬಸವಣ್ಣನು ಸಿದ್ಧರಾಮನಿಗೆ ನೀಡುವ ಲಿಂಗದೀಕ್ಷೆ ಸನ್ನಿವೇಶ. ಮರುಳ ಶಂಕರ ದೇವ, ಮಡಿವಾಳ ಮಾಚಿದೇವ, ಆಯ್ದಕ್ಕಿ ಮಾರಯ್ಯ. ಮೋಳಿಗೆಯ ಮಾರಯ್ಯ. ನುಲಿಯ ಚಂದಯ್ಯ, ಘಟ್ಟಿವಾಳಯ್ಯ ಮಹಾದೇವಿಯಕ್ಕ. ಇವರೆಲ್ಲರ ಸನ್ನಿವೇಶಗಳಲ್ಲೂ ಬಸವಣ್ಣ ಬರುತ್ತಾನೆ. ಇಷ್ಟೇ ಅಲ್ಲ ಪ್ರಭುವು ದೇಶಾಂತರಕ್ಕೆ ಹೋದಾಗ–ಅವನಿಗಾಗಿ ತಾಯನುಳಿದ ಕರುವಿನಂತೆ ಹಂಬಲಿಸುವಲ್ಲಿ ಪ್ರಭುವು ಶೂನ್ಯ ಪೀಠವನ್ನೇರುವಲ್ಲಿ. ಶರಣರವಸಾನ ಸಂದರ್ಭದಲ್ಲಿ ಎಲ್ಲೆಡೆಗಳಲ್ಲಿ ಬಸವಣ್ಣ ತಾನೆ ತಾನಾಗಿ ಬೆಳಗಿದ್ದಾನೆ. ಶೂನ್ಯ ಸಂಪಾದನೆಯಲ್ಲಿ ಅಲ್ಲಮನಾದರೋ ನಾಯಕ ಸ್ಥಾನದಲ್ಲಿ ಶೋಭಿಸುತ್ತಾನೆ. ಬಸವಣ್ಣನಾದರೋ ಕೇಂದ್ರ ಬಿಂದುವಾಗಿ ಪ್ರಜ್ವಲಿಸಿದ್ದಾನೆ. ಬಸವಣ್ಣನನ್ನು ಅಲ್ಲಮ ಪ್ರಭು ಮೆಚ್ಚಿಕೊಂಡಾಡಿದ ರೀತಿ.

" ಮರ್ತ್ಯ ಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಕರ್ತನಟ್ಟಿದನಯ್ಯ ಒಬ್ಬ ಶರಣನ ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿ" ಮರ್ತ್ಯ ಲೋಕ ಶಿವಲೋಕವೆರಡಕ್ಕೆ ನಿಚ್ಚಣಿಗೆಯಾದನು–ಎನ್ನ ಮನವುಬ್ಬಿ ಕೊಬ್ಬಿ ಓಲಾಡುತ್ತಿರ್ದೆನಯ್ಯ. ನಮ್ಮ ಶರಣ, ಸಂಗನ ಬಸವಣ್ಣನ ದಾಸೋಹದ ಘನವನೇನೆಂಬೆ ನೋಡಾ ಸಿದ್ಧರಾಮಯ್ಯ "

ಇನ್ನೂ ಇಂತಹ ಹಲವಾರು ವಚನಗಳಲ್ಲಿ ಪ್ರಭು ಮುಕ್ತ ಕಂಠದಿಂದ ಬಸವಣ್ಣನನ್ನು ಹೊಗಳುತ್ತಾನೆ, ಶರಣ ಸಂಗನ ಬಸವಣ್ಣನ ಮೊರೆಯ ಹೊಕ್ಕು ನಾನು ಬದುಕಿದೆನು " ಗುಹೇಶ್ವರಾ ನಿಮ್ಮ ಶರಣ ಸಂಗನ ಬಸವಣ್ಣನಿಗೆ ನಮೋ ನಮೋ ಎಂಬೆನು " ಇಂಥ ಹಲವಾರು ಪದಗಳು ಬಸವಣ್ಣನ ಬಗೆಗೆ ಪ್ರಭು ಇಟ್ಟುಕೊಂಡ ಗೌರವ ಸೂಚನೆಗಳಾಗಿವೆ. ಪ್ರಭುದೇವರ ಆರೋಗಣೆ, ಪ್ರಭುದೇವರ ಶೂನ್ಯ ಪೀಠಾರೋಹಣದಂತಹ ಸನ್ನಿವೇಶಗಳಲ್ಲಿ ಪ್ರಭು–ಬಸವಣ್ಣ–ಬಸವಣ್ಣ–ಪ್ರಭು ಇವರ ಸಂಭಾಷಣೆಗಳು ಕಳೆಗಟ್ಟುತ್ತವೆ, ಚೆನ್ನಬಸವಣ್ಣನ ಪಾತ್ರ ಅರಿವಿನ ಆಗರ, ಗುರುಲಿಂಗ ಜಂಗಮ ತತ್ತ್ವದ ಖಣಿ, ಸುಜ್ಞಾನಿ ಚೆನ್ನಬಸವಣ್ಣ ವಯಸ್ಸಿನಲ್ಲಿ ಕಿರಿಯನಾದರೂ ಜ್ಞಾನದಲ್ಲಿ ಸಮಾನ, ಇದನ್ನು ಪ್ರಭು ಮೆಚ್ಚಿಕೊಳ್ಳುತ್ತಾನೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಕಿರಿಯರಾದಡೇನು ಹಿರಿಯರಾದಡೇನು ?
ಅರಿವಿಂಗೆ ಹಿರಿದು, ಕಿರಿದು ಉಂಟೆ ?
...ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ
ಎಂಬುದು ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣಾ"
ಎಂಬ ವಚನ ಇದಕ್ಕೆ ಸಾಕ್ಷಿಯಾಗಿದೆ,

ಹೀಗೆಯೆ ಪ್ರಸಾದ ಮಹಿಮಾಪುರುಷ ಮಾಚಿದೇವ, ಕಾಯಕ ನಿಷ್ಠರಾದ ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ, ಸಂಸಾರಯೋಗಿಗಳಾದ ಮೋಳಿಗೆ ಮಾರಯ್ಯ ಮಹಾದೇವಮ್ಮ ಜಂಗಮ ದಾಸೋಹಿ ಸುಲಿಯ ಚಂದಯ್ಯ, ಖಂಡಿತವಾದಿ ಘಟ್ಟಿವಾಳಯ್ಯ ವೈರಾಗ್ಯ ಮೂರ್ತಿ ಮಹಾದೇವಿಯಕ್ಕ ಇವರೆಲ್ಲರನ್ನು ಪ್ರಭು ತಿದ್ದುತ್ತಾನೆ, ತಿದ್ದಿ ಮೆಚ್ಚುತ್ತಾನೆ ಮೆಚ್ಚಿ ಹೊಗಳುತ್ತಾನೆ. ಅಕ್ಕ ಮಹಾದೇವಿ ವಯಸ್ಸಿನಿಂದ ತೀರ ಚಿಕ್ಕವಳು ಆದರೂ ಪ್ರಭು ಅವಳನ್ನು ಕುರಿತು ಶ್ಲಾಘಿಸಿದ ರೀತಿ ಅತ್ಯಂತ ಉನ್ನತವಾದುದು,

" ತನುವಿನೊಳಗಿದ್ದು ತನುವಗೆದ್ದಳು
ಮನದೊಳಗಿದ್ದು ಮನವ ಗೆದ್ದಳು
ಅಂಗಸಂಗವ ತೊರೆದು ಭವವ ಗೆದ್ದಳು" ಎಂದು

ಹಾಡಿದ ಬಸವಣ್ಣ ಅದಕ್ಕೂ ಒಂದು ಹೆಜ್ಜೆ ಮುಂದೆ ಸಾಗಿ ಪ್ರಭುವು

" ಆದಿಯಲ್ಲ ಅನಾದಿಯಲ್ಲ
ನಾಮವಿಲ್ಲದ ಸೀಮೆಯಿಲ್ಲದ
ನಿಜಶಕ್ತಿ ಚಿಚ್ಛಕ್ತಿಯಾಯಿತ್ತು ನೋಡಾ,
ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ
ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ
ಶ್ರೀಪಾದಕ್ಕೆ ನಮೋ ನಮೋ ಎಂಬೆನು, "

ಈ ರೀತಿ ಶೂನ್ಯ ಸಂಪಾದನೆಯಲ್ಲಿ ಬರುವ ಪಾತ್ರಗಳೆಲ್ಲವೂ ಪ್ರೌಢಮನದ ಪರಿಪಕ್ವ ಸ್ಥಿತಿಯ, ವೈಚಾರಿಕ ಚಿಂತನಶೀಲ ಮನದ ಅನುಭಾವಿಗಳಾಗಿ ಚಿತ್ರಿತವಾಗಿವೆ, ಎಲ್ಲ ಪಾತ್ರಗಳಲ್ಲಿ ಅರಿವು ಇದೆ. ತನ್ನ ಶಾಸರಿತ ಆ ಪಾತ್ರಗಳನ್ನು ಮತ್ತೆ ಪರೀಕ್ಷಿಸಿ, ಅವರ ವೈಶಿಷ್ಟ್ಯಗಳನ್ನು ಪ್ರಭು ಎತ್ತಿ ತೋರುತ್ತಾನೆ, ಮೆಚ್ಚಿಕೊಳ್ಳುತ್ತಾನೆ, ಪ್ರತಿಯಾಗಿ ಆ ಪಾತ್ರಗಳು ಅಲ್ಲಮ ಪ್ರಭುವನ್ನು ಮನಸಾರೆ ಹೊಗಳುತ್ತವೆ,

ಯುದ್ಧ ಮಾಡುವುದೇ ಆಗಲಿ, ಒಕ್ಕಲುತನ ಮಾಡುವುದೇ ಆಗಲಿ, ಭಿಕ್ಷೆ, ವ್ಯವಹಾರ, ಇದ್ದಲಿ ತಯಾರು ಮಾಡುವುದೇ ಆಗಲಿ ಕಾಯಕದಲ್ಲಿ ಮೋಸ ಇಲ್ಲದಿರಬೇಕು, ಅದೇ ದೇವರ ಸಾಕ್ಷಾತ್ಕಾರಕ್ಕೆ ದಾರಿ, ಯುದ್ಧ ಮಾಡುವ ಶೂರನಿದ್ದಾನೆಯೆಂದ ಮಾತ್ರಕ್ಕೆ ದೇವರು ಒಲಿಯುವುದಿಲ್ಲ, ಮಸಿ ಮಾಡುವ ಕಪ್ಪು ಬಟ್ಟೆಯ ವ್ಯಕ್ತಿ ಇದ್ದಾನೆಂದ ಮಾತ್ರಕ್ಕೆ ಒಲಿಯದಿರುವುದಿಲ್ಲ, ಆತ ನೋಡುವುದು ಜನೋಪಯೋಗಿ ನಿಷ್ಠೆಯನ್ನು ಸಮಾಜ ಕಳಕಳಿಯ ಸೇವೆಯನ್ನು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂದಿನ ಜಾತಿ ನಿರ್ಮೂಲನಕಾರರು ಅನುಭವ ಮಂಟಪದ ವಚನಕಾರರು ವಿಚಾರ ಮಾಡಿದಷ್ಟು ಆಳವಾಗಿ ಎಲ್ಲಿ ವಿಚಾರ ಮಾಡುತ್ತಿದ್ದಾರೆ ? ಇಂದಿನ ಸಮಾಜವಾದಿಗಳೂ, ಸರ್ವೋದಯ ಕಾರ್ಯಕರ್ತರೂ ಜಾತಿಯನ್ನು ಅಳಿಸಬೇಕೆನ್ನುತ್ತಿದ್ದಾರೆ, ಆದರೆ ಅವರು ಜಾತಿಯನ್ನು ಕೇವಲ ಬಾಯಿ ಪ್ರಚಾರದಿಂದ ಅಳಿಸಿದರೆ ಅಳಿಯಬಹುದೆ ? ಜಾತಿ ನಿರ್ಮಾಣಕ್ಕೆ ಕಾರಣವಾದ ಕಾರ್ಯಗಳನ್ನು ಉದಾತ್ತೀಕರಿಸಬೇಕಾಗಿದೆ, ಮೊಚ್ಚೆ ಹೊಲಿಯುವದು ಸಣ್ಣ ಕಲಸ ಎಂದು ಹೇಳುತ್ತ ಮಂತ್ರಪಠಿಸುವದು ಶ್ರೇಷ್ಠ ಕಾರ್ಯ ಎಂದು ಘೋಷಿಸುತ್ತ ನಾವು ಮಂತ್ರ ಪಠನಕಾರರನ್ನೂ ಮೊಚ್ಚೆ ಹೊಲಿಯುವವರನ್ನೂ ಹೇಗೆ ಸಮವೇದಿಕೆಯಲ್ಲಿ ತರಬಹುದು ? ನಿಜವಾಗಿಯೂ ಅನುಭವ ಮಂಟಪವು ಕಾಯಕದಲ್ಲ ಸಣ್ಣದು ದೊಡ್ಡದಿಲ್ಲ ಎಂದು ಹೇಳುವ ಮೂಲಕ ಶತಶತಮಾನಗಳವರೆಗೂ ನಿಲ್ಲಬಹುದುದಾದ ಸತ್ಯವನ್ನು ಸಾರಿದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ,

(2) ಇನ್ನು ಎರಡನೆಯದಾಗಿ ಅನುಭವ ಮಂಟಪವು ಸುಖದ ಸುಪ್ಪತ್ತಿಗೆಯ ಕಾಯಕ ಕಾಯಕವೇ ಅಲ್ಲವೆಂದು ಸಾರುವ ಮೂಲಕ ಆಳು ಅರಸರ ಮತ್ತು ಸೇವಕ ಮಾಲಿಕರ ಭೇದವನ್ನು ತೊಡೆದು ಹಾಕಿತು, ತನ್ನ ಹಣದ ಬಲದಿಂದ ಕಾರ್ಖಾನೆ ನಡೆಸಿ ಸೇವಕರ ಮೂಲಕ ವಸ್ತುಗಳನ್ನು ತಯಾರಿಸಿ, ಉದ್ಯೋಗ ಮಾಡುವ ವ್ಯಕ್ತಿ ಹಣ ಸಂಪಾದಿಸಬಹುದೇ ಹೊರತಾಗಿ ಪುಣ್ಯ ಸಂಪಾದನೆ ಮಾಡಲಾರ, ದೇವರ ಕೃಪೆ ಗಳಿಸಲಾರ, ಆತನ ಸಂಪಾದನೆಯೆಲ್ಲ ಹೆಂಡಿರು ಮಕ್ಕಳ ಸುಖಲೋಲುಪತೆಗಾಗಿ ಅಷ್ಟೆ,

ಹೀಗೆಂದ ಮಾತ್ರಕ್ಕೆ ಎಲ್ಲರೂ ಶ್ರಮಜೀವಿಯೇ ಆಗಬೇಕು, ಗುದ್ದಲಿ ಸಲಿಕೆಯೇ ಹಿಡಿಯಬೇಕು ಎಂಬುದೇನೂ ಇಲ್ಲ, ಬುದ್ಧಿವಂತರಾದವರು ತಮ್ಮಲ್ಲಿ ಹೇರಳವಾಗಿರುವ ಬುದ್ಧಿಯನ್ನಾದರೂ ಜನ ಸೇವೆಗಾಗಿ ಖರ್ಚು ಮಾಡಲೇಬೇಕು ಬೆವರು ಸುರಿಸುವುದಕ್ಕಾಗಿ ಆಳುಗಳನ್ನು ನೇಮಿಸಿಕೊಂಡು ಆ ಆಳುಗಳು ಬೆವರು ಸುರಿಸುತ್ತಾರೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಲು ಮತ್ತೊಬ್ಬ ಬುದ್ಧಿವಂತನನ್ನು ಇಟ್ಟುಕೊಂಡು ತಾನು ಸದಾ ಗಾದಿಯ ಮೇಲೆ ಗೊರಕೆ ಹೊಡೆಯುವದು ಕಾಯಕವೆನಿಸಲಾರದು,

ತನು ದುಡಿಯದಿದ್ದರೆ ಮನವಾದರೂ ಸಾಕಷ್ಟು ದುಡಿಯಬೇಕು. ಆದಕ್ಕಾಗಿ ಚೆನ್ನಬಸವಣ್ಣನವರು ಹೇಳುವುದೇನೆಂದರೆ

ಕೃಷಿ ಕೃತ್ಯ ಆವ ಕಾಯಕದಿಂದಾದಡೇನು ?
ತನುಮನ ಬಳಲಿಸಿ ಗಳಿಸಿ ತಂದು ಗುರುಲಿಂಗ
ಜಂಗಮಕ್ಕೆ ದಾಸೋಹ ಮಾಡುವ ಪರಮ
ಸದ್ಭಕ್ತನ ಪಾದವ ತೋರಯ್ಯಾ ಎನಗೆ
ಅದೆಂತೆಂದೊಡೆ, ಆತನ ತನು ಶುದ್ಧ
ಆತನ ಮನ ಶುದ್ಧ, ಆತನ ನಡೆ ಶುದ್ಧ,
ಆತನ ನುಡಿಯೆಲ್ಲ ಪಾವನವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನು ನೋಯಲಾರದೆ ಅರ್ಥ ಗಳಿಸುವವರು ವ್ಯರ್ಥಗಳಿಸಿದಂತೆ. ಅವರ ಗಳಿಕೆಯಿಲ್ಲ. ಭಿತ್ತಿಯ ಮೇಲಣ ರೂಹಿಸಂತೆ ಚಿತ್ರದೊಳಗಣ ಕಬ್ಬಿನಂತೆ. ಅಪ್ಪಿದರೆ ಸುಖವಿಲ್ಲ, ಮೆಲಿದರೆ ರುಚಿಯಿಲ್ಲ. ಅಂಥ ಗಳಿಕೆಯ ಅನ್ನ ಉಂಡರೆ ಮೈಗೆ ಹತ್ತಲಾರದು. ಕೇವಲ ಹೊಳ್ಳು ಕುಟ್ಟಿ ಮೈಯೆಲ್ಲ ತವಡಾದಂತಾಗುತ್ತದೆ.

ಅದಕ್ಕಾಗಿ ಶರಣರು ಹೇಳುವುದೇನೆಂದರೆ ನಮ್ಮ ಜೀವವನ್ನು ಅಪಾಯಕ್ಕೆ ಒಡ್ಡದೆ ಎಂದರೆ ಜೀವಕ್ಕೆ ಬರುವ ಸಂಕಷ್ಟಗಳನ್ನೆಲ್ಲ ದೂರವಿರಿಸಿ. ಮಾಡುವ ಕಾಯಕ ಕಾಯಕವೆನಿಸಲಾರದು.

ಕಾಯಕವೆಂದು ಕಾಯುವ ಬಳಲಿಸದೆ
ತನು ಕರಗಿಸದೆ ಮನ ನೋಯಿಸದೆ
ಬೇಡಿ ಕಾಡಿ ಮಾಡುವದು ದಾಸೋಹವೆ ?
ಆವ ಕಾಯಕವಾದರೂ ಪ್ರಾಣವೇ ಕಡೆಯಾಗಿ
ದ್ರವ್ಯವೇ ಕಡೆಯಾಗಿ, ಚಿತ್ತಶುದ್ಧದಲ್ಲಿ
ಬಂದುದಕ್ಕೆ ಸರಿಗಂಡುದು ಈಶಾನ್ಯ ಮೂರ್ತಿ
ಮಲ್ಲಿಕಾರ್ಜುನ ಲಿಂಗಕ್ಕೆ ತೃಪ್ತಿ.

ಎಂದು ಶರಣ ಶಿವಲೆಂಕ ಮಂಚಣ್ಣ ಸಾರಿದ್ದಾನೆ. ಕಾಯಕಕ್ಕೆ ಕಾರು ಅವಶ್ಯ ವಾದಲ್ಲಿ ಅದರಲ್ಲಿ ಹೋಗಬಹುದು. ಆದರೆ ಕಾಯ ಸುಖಕ್ಕಾಗಿ ಕಾರು ಪ್ರಯಾಣ ಮಾಡುವದು ಕಾಯಕವೂ ಅಲ್ಲ, ಗಳಿಕೆಯೂ ಅಲ್ಲ, ಅಂಥವರದು ಜೀವನವೂ ಅಲ್ಲ. ಎಂಬತ್ತು ಲಕ್ಷ ಜೀವರಾಶಿಗಳಂತೆ ಅದೂ ಹುಟ್ಟಿ, ಅದೂ ಬೆಳೆದು, ಅದೂ ಮಕ್ಕಳನ್ನು ಹಡೆದು ಅದೂ ಸಾಯುತ್ತದೆ ಅಷ್ಟೆ

(3) ಮೂರನೆಯದಾಗಿ ಕಾಯಕ ಸ್ವಾರ್ಥಕ್ಕಾಗಿ ಅಲ್ಲವೆಂದು ಸಾರುವ ಮೂಲಕ ಅನುಭವ ಮಂಟಪವು ಉನ್ನತ ಸಮಾಜವಾದವನ್ನು ಬಿತ್ತಿತು. ಸ್ವಾರ್ಥಕ್ಕಾಗಿ ಅಲ್ಲವೆಂದರೆ ಸ್ವಜನರಿಗಾಗಿಯೂ ಅಲ್ಲ, ಸ್ವಕುಟುಂಬದವರಿಗಾಗಿಯೂ ಅಲ್ಲ. ಆತನು ಗಳಿಸಿದುದು ಸಮಾಜಕ್ಕೆ, ದೇಶಕ್ಕೆ, ಅಶಕ್ತ ವರ್ಗಕ್ಕೆ, ನಿರ್ಗತಿಗ ಜನಾಂಗಕ್ಕೆ ಸಲ್ಲಲೇ ಬೇಕು. ಅಂದಾಗ ಮಾತ್ರ ಅದಕ್ಕೆ ಕಾಯಕದ ಪಾವಿತ್ರ್ಯ ಪುಣ್ಯಶೀಲ ಈ ತತ್ವ ಸರ್ವತ್ರವಾಗಿ ಅನುಷ್ಠಾನಕ್ಕೆ ಬಂದಾಗ ಆಸ್ತಿಯೇ ಆಗಲಿ, ಧನ ಧಾನ್ಯಗಳೇ ಆಗಲಿ ಕಡಿಮೆ ಬೀಳುವ ಸಂಭವ ಎಲ್ಲಿದೆ ?

ಇಂದು ನಾವು ಸಮಾಜವಾದವನ್ನು ತರಬಯಸುತ್ತೇವೆ, ಬಂಡವಾಳ ಶಾಹಿಯನ್ನು ಧಿಕ್ಕರಿಸುತ್ತಿದ್ದೇವೆ. ಬೇರೆಯವರಲ್ಲಿದ್ದುದನ್ನು ಕಸಿದುಕೊಳ್ಳಬೇಕೆನ್ನುತ್ತಿದ್ದೇವೆ. ವಿನಹ ಇದ್ದವರು ತಮ್ಮಲ್ಲಿದ್ದುದನ್ನು ಹಂಚುವ ಬುದ್ಧಿಯನ್ನು ಮಾತ್ರ ಕಲಿಸುತ್ತಿಲ್ಲ. ಕಸಿದುಕೊಳ್ಳಬೇಕೆಂಬಷ್ಟೇ ಇದ್ದದ್ದನ್ನು ಜೋಪಾನ ಮಾಡಿಕೊಳ್ಳುವದು ಸಹಜವಾಗಿದೆ. ಹೀಗಾಗಿ ಇದೊಂದು ಹೋರಾಟವಾಗಿದೆ ವಿನಹ ಪರಿಣಾಮ ಮಾತ್ರ ಶೂನ್ಯವಾಗಿದೆ. ಇದಕ್ಕೆ ಬದಲಾಗಿ ಹತ್ತು ರೊಟ್ಟಿ ಇದ್ದವರೂ ಹಂಚಿಕೊಂಡೇ ಉಣ್ಣುವದು. ಅರ್ಥ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೊಟ್ಟಿ ಇದ್ದವರೂ ಹಂಚಿಕೊಂಡೇ ಉಣ್ಣುವದು ಜೀವನ ವಿಧಾನವಾದರೆ ಸಮಾಜವಾದ ತನ್ನಿಂದ ತಾನೇ ಆಚರಣೆಗೊಂಡಿರುತ್ತದೆ.

ಬಸವಣ್ಣನವರು ಸಮಾಜವಾದವನ್ನು ಕಡೆದು ತೋರಿ ನಮಗೆ ಆದರ್ಶಪ್ರಾಯವಾಗಿದ್ದಾರೆ. ಅವರು ಪ್ರತಿಜ್ಞೆ ಮಾಡಿದುದೇನೆಂದರೆ :

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು?
ನಾನಾವ ಕರ್ಮಂಗಳ ಮಾಡಿದರೆಯೂ
ಆ ಕರ್ಮ ಫಲ ಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು,
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದ ಕ್ರಿಯೆಯ ಮಾಡೆನು
ನಿಮ್ಮ ಸೊಮ್ಮು ನಿಮಗೆ ಸಲಿಸುವೆನು
ನಿಮ್ಮಾಣೆ ಕೂಡಲ ಸಂಗಮದೇವಾ,

ಮೇಲಿನ ವಚನದ ಮೂಲಕ ಬಸವಣ್ಣನವರು ಕಾಯಕದಿಂದ ಬಂದ ಉತ್ಪತ್ತಿ ತಾನು ಗಳಿಸಿದುದು ಎಂದು ಭಾವಿಸದೆ ದೇವರು ದಯಪಾಲಿಸಿದುದು ಎಂಬ ದಿವ್ಯ ತತ್ವವನ್ನು ಹೇಳಿದ್ದಾರೆ, ನಮ್ಮಲ್ಲಿ ಬಹಳ ಜನರಿಗೆ ಅಹಂಕಾರವೇನೆಂದರೆ ನಾನು ದುಡಿದಿದ್ದೇನೆ, ನಾನು ಬೆವರು ಸುರಿಸಿದ್ದೇನೆ : ನಾನು ಗಳಿಸಿದ್ದೇನೆ ಎಂಬ ತಪ್ಪು ತಿಳುವಳಿಕೆ, ಅದರಲ್ಲಿ ದೇವರ ಪಾತ್ರವೂ ಇದೆಯೆಂಬುದನ್ನು ಇಂಥ ಅಹಂಕಾರಿಗಳು ಒಪ್ಪಲಿಕ್ಕೆ ಸಿದ್ಧವಿರುವದಿಲ್ಲ. ನೀನು ಬೆವರುಸುರಿಸಿ ರಂಟೆ ಹೊಡೆದಿರಬಹುದು: ನೀನು ಮೈ ಮುರಿದು ದುಡಿದು ಬೀಜ ಹಾಕಿರಬಹುದು. ಆದರೆ ಮೂಲವಾದ ಭೂಮಿ ಯಾರು ಕೊಟ್ಟರು ? ಮಳೆ ಗಾಳಿಯನ್ನು, ಬೆವರು ಸುರಿಸಿ ತರಬಹುದೆ ? ಅದಕ್ಕಾಗಿ ದೇವರ ದಾಸಿಮಯ್ಯನವರು ಹೇಳುವುದೇನೆಂದರೆ :

ಇಳೆ ನಿಮ್ಮ ದಾನ, ಮಳೆ ನಿಮ್ಮ ದಾನ
ಬೆಳೆ ನಿಮ್ಮ ದಾನ, ಸುಳಿದು ಸೂಸುವ ಗಾಳಿ ನಿಮ್ಮ ದಾನ
ನಿಮ್ಮ ದಾನವನ್ನುಂಡು ಅನ್ಯರನು ಹೊಗಳುವ
ಕುನ್ನಿಗಳನೇನೆಂಬೆ ರಾಮನಾಥ

ಎಲ್ಲಿಯವರೆಗೆ ಮನುಷ್ಯನಲ್ಲಿ ತಾನು ನಿಮಿತ್ತ ಮಾತ್ರ! ಗಳಿಕೆಯೆಲ್ಲ ದೇವರು ಕೊಟ್ಟುದು ಎಂಬ ಭಾವ ಬರುವುದಿಲ್ಲವೊ ಅಲ್ಲಿಯವರೆಗೆ ಅದನ್ನು ಹಂಚಲು ಮನಸ್ಸು ಬರುವುದಿಲ್ಲ, ದೇವರು ಕೊಟ್ಟುದು ದೇವರಿಗೆ ಹಂಚಲು ಯಾರದೇನು ಗಂಟು ಹೋಗುತ್ತದೆ ? ಅದಕ್ಕಾಗಿಯೇ ಬಸವಣ್ಣನವರು "ನಿಮ್ಮ ಸೊಮ್ಮು ನಿಮಗೆ ಸಲಿಸುವೆನು ಮತ್ತೊಂದು ಕ್ರಿಯೆ ಮಾಡೆನು" ಎಂದಿದ್ದಾನೆ, ದೇವರ ಕೃಪೆಯಿಂದ ಗಳಿಸಿದುದರಲ್ಲಿ ದೇವರ ಮಕ್ಕಳಾದ ಬಡ ಜನರಿಗೆ ನಿರ್ಗತಿಕರಿಗೆ ಹಂಚುವುದರಲ್ಲಿಯೇ ಕಾಯಕದ ಸಾರ್ಥಕ್ಯವಿದೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದೇ ಶ್ರೇಷ್ಠ ಸಮಾಜವಾದದ ಅಡಿಗಲ್ಲಾಗಿದೆ. ಷಣ್ಮುಖ ಶಿವಯೋಗಿಗಳು ಈ ಸಮಾಜವಾದವನ್ನು ಇನ್ನೂ ಸ್ಪಷ್ಟ ಮಾತುಗಳಿಂದ ವಿವರಿಸಿದ್ದಾರೆ.

ಎನ್ನ ತನು, ಎನ್ನ ಮನ, ಎನ್ನ ಧನ
ಎನ್ನ ಮನೆ, ಎನ್ನಸತಿ ಸುತರೆಂಬ
ಮನಕ್ಕೆ ಈಶ್ವರ ಭಕ್ತಿ ಭಿನ್ನವಾಯಿತ್ತು
ತನ್ನ ಮರೆದು ಇದಿರಸರಿದು
ಒಡವೆಯಾತಂಗೆ ಒಡವೆಯ ಒಪ್ಪಿಸಿದರೆ
ಕೂಡಿ ಕೊಂಡಿರ್ಪನು ಅಖಂಡೇಶ್ವರನು.

(4) ನಾಲ್ಕನೆಯದಾಗಿ ಕಾಯಕದಲ್ಲಿ ಅತ್ಯಾಸೆ ಅಥವಾ ದುರಾಶೆ ಸಲ್ಲದು. ಆಶೆಬುರುಕರ ಅಥವಾ ಲಾಭ ಬಡುಕರ ಉದ್ಯೋಗ ವ್ಯವಹಾರ ಕಾಯಕವೆನಿಸಲಾರದು. ನಮ್ಮ ಸಮಾಜದ ಇಂದಿನ ಸಿರಿತನ ಬಡತನಗಳಿಗೆ ಅಥವಾ ಏರು ಪೇರುಗಳಿಗೆ ಈ ದುರಾಶೆಯೇ ಮೂಲ ಕಾರಣವಾಗಿದೆ.ಇತರರಿಗಿಂತ ಹೆಚ್ಚು ಗಳಿಸಬೇಕೆಂಬ ಅತ್ಯಾಶೆಯೆ ಇನ್ನೊಬ್ಬರ ಉಣ್ಣುವ ಬಾಯಿಯನ್ನು ಬಡಿಯಲು ಹಚ್ಚಿದೆ. ಏನಾದರೂ ಆಗು ಕೊನೆಗೆ ಸಿರಿವಂತನಾಗು ಎಂಬ ಪೈಪೋಟಿ ಇಪ್ಪತ್ತನೆಯ ಶತಮಾನದ ನೈತಿಕ ಪತನಕ್ಕೆ ಮುಖ್ಯ ಕಾರಣವಾಗಿದೆ.

ಶಿವಶರಣರು ದುರಾಸೆಗೇನೇ ಕೊಡಲಿ ಪೆಟ್ಟು ಹಾಕಿ ಸಿರಿವಂತಿಕೆಗೆ ಹೊಸ ವ್ಯಾಖ್ಯೆಯನ್ನೇ ನೀಡಿದರು. ಹಣವುಳ್ಳವರು ಸಿರಿವಂತರಲ್ಲ : ಆಡಂಬರ ಉಳ್ಳವರು ಸಿರಿವಂತರಲ್ಲ : ಆಶೆ ಉಳ್ಳವರಂತೂ ಸಿರಿವಂತರಲ್ಲವೇ ಅಲ್ಲ. ಆಶೆ ಉಳ್ಳವರು ದಾಸರು: ಸೇವಕರು. ಇನ್ನೊಬ್ಬರ ಸಲುವಾಗಿ ಹಣ ಕೂಡಿಸಿ ತಿನ್ನಲಾರದೆ ಹೋಗುವವರು ಸಿರಿವಂತಿಕೆಯೆಂಬುದು ಹಣದಿಂದ ಬರದೆ ಮನೋ ವೈಶಾಲ್ಯದಿಂದ ಬರುತ್ತದೆ. ನಾಲ್ಕು ರೊಟ್ಟಿಯೂ ತನಗೇ ಇರಲೆಂದು ಭಾವಿಸುವವನು ಕಡು ಬಡವನೆನಿಸಿದರೆ ಇದ್ದ ಅರ್ಧ ರೊಟ್ಟಿಯಲ್ಲಿ ಗಿರ್ಧವನ್ನು ಮತ್ತೊಬ್ಬರಿಗೆ ಹಂಚುವವನು ಅಗರ್ಭ ಶ್ರೀಮಂತನೆನಿಸಿ ಕೊಳ್ಳುತ್ತಾನೆ. "ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು, ಧನ ನೋಡಾ ಬಡವರು, ಘನ ಮನ ಸಂಪನ್ನರು."

ಶ್ರೀಮಂತಿಕೆಯ ನಿಜವಾದ ಅರ್ಥವನ್ನು ತಿಳಿದುಕೊಂಡು ಅಂದಂದಿನದನ್ನು ಅಂದೇ ಸವೆಸಿದರೆ ಬಡತನ ಸಿರಿತನಗಳಿಗೆ ಆಸ್ಪದವೆಲ್ಲಿ ? ಮಾಲಿಕನೂ ಅಂದು ತನಗೆ ಬೇಕಾಗುವಷ್ಟೇ ಇರಿಸಿಕೊಂಡರೆ ನೌಕರನು ತನಗೆ ಬೇಕಾದಷ್ಟೇ ಕೂಲಿ ಒಯ್ದರೆ ಸಂಪತ್ತೆಂಬುದು ಕೇಳುವವರಿಲ್ಲದೆ ಕೊಳೆಯಲಾರದೆ ?

ಸೀರೆಯೊಳಗೊಂದೆಳೆಯ
ಅನ್ನದೊಳಗೊಂದಗುಳ
ಚಿನ್ನದೊಳಗೊಂದೊರೆಯ
ಇಂದಿಂಗೆ, ನಾಳಿಂಗೆ ಬೇಕೆಂದೆನಾದಡೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬ ಮಾತನ್ನು ಬಸವಣ್ಣನವರು ಮಾಲಿಕರಿಗೂ ಕಲಿಸಿದರು, ಸೇವಕರಿಗೂ ಕಲಿಸಿದರು,

(5) ಐದನೆಯದಾಗಿ ಕಾಯಕವು ಐಹಿಕವು ಮಾತ್ರವಲ್ಲ ಪಾರಮಾರ್ಥಕವೂ ಹೌದು, ಉದ್ಯೋಗ ಮತ್ತು ಕಾಯಕ ಒಂದೇ ಎಂದು ಹೇಳಲಾಗುವುದಿಲ್ಲ. ಉದ್ಯೋಗವು ಹೊಟ್ಟೆ ಉಪಜೀವನಕ್ಕೆ ಆದರೆ ಕಾಯಕವು ಆತ್ಮೋದ್ಧಾರಕ್ಕೆ ಮತ್ತು ಸಮಾಜೋದ್ಧಾರಕ್ಕೆ ಹಾಗೂ ರಾಷ್ಟ್ರೋದ್ಧಾರಕ್ಕೆ, ಕೇವಲ ಉದ್ಯೋಗ ಮಾಡಿದ ವ್ಯಕ್ತಿ ಮುಕ್ತಿ ಸಂಪಾದನೆಗಾಗಿ ಪೂಜೆ ಮಾಡಬೇಕಾಗುತ್ತದೆ, ತಪಸ್ಸು ಮಾಡಬೇಕಾಗುತ್ತದೆ; ಯಜ್ಞ ಯಾಗಾದಿಗಳನ್ನು ಕೈಕೊಳ್ಳಬೇಕಾಗುತ್ತದೆ, ಆದರೆ ಕಾಯಕದಲ್ಲಿ ನಿರತನಾದ ಮನುಷ್ಯನಿಗೆ ಇವ್ಯಾವುವೂ ಬೇಕಿಲ್ಲ ಸ್ವತಃ ಅವನ ಕಾಯಕ ನಿಷ್ಠೆಯೇ ಪೂಜೆ ವ್ರತವೆನಿಸಿಕೊಳುತ್ತದೆ. ನಿರ್ಮಲ ಮನಸ್ಸಿನಿಂದ ನಿಸ್ವಾರ್ಥ ಬುದ್ಧಿಯಿಂದ ಕೈಕೊಳ್ಳುವ ಕಾಯಕದೆದುರು ಪೂಜೆ ತಪಸ್ಸುಗಳೆಲ್ಲ ನಿಷ್ಕ್ರೀಯ,

ಕಾಯಕದಲ್ಲಿ ನಿರತನಾದರೆ
ಗುರು ದರುಶನವಾದರೂ ಮರೆಯಬೇಕು
ಲಿಂಗ ಪೂಜೆಯಾದರೂ ತೊರೆಯಬೇಕು.
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು,
ಕಾಯಕ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು,

ಯಜ್ಞಯಾಗಾದಿಗಳು ಮಾಡಿದರೆ ಕೈಲಾಸ ದೊರೆಯುತ್ತದೆ ಎಂಬ ಭ್ರಮೆ ಇರಬಹುದು. ಅವುಗಳಿಗೆ ಸಮಾನವಾಗಿ ಶಿವಶರಣರು ಕಾಯಕದಿಂದ ಕೈಲಾಸವೆಂದು ಹೇಳದೆ ಸ್ವತಃ ಕಾಯಕವೇ ಕೈಲಾಸವೆಂದು ಹೇಳಿದರು, ಕಾಯಕ ಮಾಡುವ ವ್ಯಕ್ತಿ ಕೈಲಾಸ ಹುಡುಕಿಕೊಂಡು ಹೋಗಬೇಕಾದುದಿಲ್ಲವೆಂದು ಸಾಧಿಸಿದರು, ●

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ಮೂರು ಚಿಂತನಗಳು :

● ಪ್ರೊ. ಕೆ. ಎಸ್. ನಾಯಕ

ಮೂಢನಂಬಿಕೆ :

ಮುಂಜಾವಿನಲ್ಲಿ ಯಾವುದೋ ಗುರುತರವಾದ ಕಾರ್ಯಕ್ಕೆ ಅವಸರ ಅವಸರ ಹೋಗುತ್ತಿದ್ದಾಗ, ಸಮ್ಮ ಮುಂದೆ ಬೆಕ್ಕು ಅಡ್ಡ ಹಾಯ್ದು ಹೋದರೆ, ಖಾಲಿ ಕೊಡ ಎದುರು ಬಂದರೆ, ವಿಧವೆಯ ದರ್ಶನವಾದರೆ, ಅಂದು ಕಾರ್ಯ ಕೈಗೂಡುವುದಿಲ್ಲ ಎಂಬ ಸಂಬಿಕೆ ಇಂದಿಗೂ ಎಲ್ಲರಲ್ಲಿ ಅಲ್ಲದಿದ್ದರೂ ಹಲವರಲ್ಲಾದರೂ ಮನೆಮಾಡಿ ಕೊಂಡಿದೆ. ಪರಂಪರೆಯಿಂದ ಬಂದ ಇಂಥ ಅಂಧ ಶ್ರದ್ಧೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕ ಕೆಲ ಸಮಯ ಸಾಧಕರು ಬೆಳೆಸಿಕೊಂಡು, ರೂಪಿಸಿಕೊಂಡು ಬಂದುದೂ ಉಂಟು. ಈ ಅನುಕೂಲ ಸಿಂಧು ಸಂಬಿಕೆಗಳಿಗೆ ಕೆಲವು ವೇಳೆ ಧಾರ್ಮಿಕ ಶ್ರದ್ಧೆಯ ಲೇಪನವನ್ನು ಕೊಟ್ಟು ಜನ ಬಲವಾಗಿ ಸಂಬುವಂತೆ ಮಾಡಿದ ಹುನಾರಗಳನ್ನು ಕಾಣಬಹುದಾಗಿದೆ. ಆದರೂ ಅಂತಹ ಘಟನೆ ಘಟಿಸಿದಾಗ ಮನ ಕ್ಷಣಕಾಲ ಅಳುಕಿ ಅ ಧೀ ರ ರನ್ನಾಗಿ ಮಾಡುತ್ತದೆ, ಸೂತ್ರವಲ್ಲ. ಇದರಿಂದ ಕೆಟ್ಟ ಪರಿಣಾಮವೇನೂ ಇಲ್ಲವೆ. ಎಂಬ ಸಂದೇಹ ಆಗಿಂದಾಗ ಬಾಧಿಸುವದುಂಟು.

ಮೂಢ ನಂಬಿಕೆಗಳಲ್ಲಿ ಸೀನು ಕೂಡ ಮಹತ್ವದ ಸ್ಥಾನಪಡೆದಿದೆ, ಯಾವುದೋ ಊರಿಗೆ ಹೊರಟು ನಿಂತಾಗ, ಅಥವಾ ಸಮಾಲೋಚನೆ ಮುಗಿಸಿ ಮನೆಗೆ ಹೋಗ ಬೇಕೆಂದು ಎದ್ದು ನಿಂತಾಗ ಅಥವಾ ಬೇಡವೆಂದು ಬಂಧುಗಳು ಹೇಳುತ್ತಿರುವಾಗಲೂ ಹೊರಡಲು ಅವಸರಿಸುತ್ತಿರುವಾಗ, ಒಮ್ಮೆಲೆ ಯಾರೋ ಸೀನುತ್ತಾರೆ. ಆ ವಾ ಗ ಸೀನನ್ನು ಅಲಕ್ಷಿಸಿ ಹಾಗೆ ಹೋಗದೆ ಸ್ವಲ್ಪ ವೇಳೆ ಕುಳಿತು ಹೋಗುವದನ್ನು ಇಂದಿಗೂ ಕೂಡ ವಿದ್ಯಾವಂತ ಜನರಲ್ಲಿಯೂ ಕಾಣುತ್ತೇವೆ.

ಅಂತೆಯೆ ಸರ್ವಜ್ಞ ಕವಿ ತನ್ನ ತ್ರಿಪದಿಯಲ್ಲಿ ಸೀನನ್ನು ಕುರಿತಾಗಿ :
ಏನು ಮನ್ನಿಸದಿರಲು ಸೀನು ಮನ್ನಿಸಬೇಕು,
ಸೀನು ಮನ್ನಿಸದೆ ಹೋಗಿಹರೆ ಹೋದಲ್ಲಿ
ಹಾನಿಯೇ ಬಕ್ಕು ಎಂದು ಹೇಳಿದ್ದಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಹುಶ : ಇದರಲ್ಲಿ ಸರ್ವಜ್ಞನ ಜೀವನಕ್ಕೆ ಸಂಬಂಧಿಸಿದಂತೆ ಏನೋ ಒಂದು ಮಧುರ ವೇದನೆಯಂತಹ ಅಂಶ ಅಡಗಿರಬೇಕು ಎಂದು ಅನಿಸುತ್ತದೆ. ಏಕೆಂದರೆ ಸರ್ವಜ್ಞನಂತಹ ಪ್ರಗತಿಶೀಲ ಕವಿಯೇ ಏಸು ಮನ್ನಿಸದಿರಲು ಸೀಸು ಮನ್ನಿಸಬೇಕು ಎಂದು ಹೇಳುತ್ತಿದ್ದಾನೆ ಅಲ್ಲವೆ ?

ಹೀಗೆ ದೊಡ್ಡವರ ಜೀವನದಲ್ಲಿ ಆಕಸ್ಮಿಕವಾಗಿಯೋ, ಕಾಕತಾಳೀಯ ವಾಗಿಯೋ ಯೋಗಾಯೋಗ ಸಂಭವದಿಂದಲೋ, ಆಗಿಹೋದ ಘಟನೆಗಳೇ ಸಾರ್ವತ್ರಿಕಗೊಂಡು ಮೂಢನಂಬಿಕೆಗಳಾಗಿ, ಅಂಧ ವಿಶ್ವಾಸಗಳಾಗಿ ಕಾಡುತ್ತಿರಬೇಕೆನ್ನಿಸುತ್ತದೆ. ಒಬ್ಬರ ಜೀವನದಲ್ಲಿ ಘಟಿಸಿದ್ದು ಮತ್ತೊಬ್ಬರ ಜೀವನದಲ್ಲಾಗುವದು ಸಾಧ್ಯವೇ ಇಲ್ಲ ಎಂಬುದನ್ನು ತಿಳಿದೂ ತಿಳಿದೂ ಇರುಳು ಕಂಡ ಭಾವಿಯಲ್ಲಿ ಹಗಲು ಬಿದ್ದರೆಂಬಂತೆ ಅನೇಕ ಅಂಧ ವಿಶ್ವಾಸಗಳಿಗೆ ಪಕ್ಕಾಗಿ ಜನ ತಮ್ಮ ಜೀವನದ ಅನೇಕ ರಸ ನಿಮಿಷಗಳನ್ನು ಶುಷ್ಕಗೊಳಿಸಿಕೊಳ್ಳುತ್ತಾರೆ,

ಅಜ್ಜ ನೆಟ್ಟ ಆಲದ ಮರಕ್ಕೆ ನಾವೇಕೆ ನೇಣು ಹಾಕಿಕೊಳ್ಳಬೇಕು ಎಂದು ಇಂದಿನ ವಿಜ್ಞಾನ ಯುಗದ ನವ ಪೀಳಿಗೆ ಅಂತಹ ಮೂಢ ನಂಬಿಕೆಗಳನ್ನು ತಳ್ಳಿಹಾಕಿ ಹೇಗೋ ಕಾಡು ಧೈರ್ಯ ಮಾಡಿ ಮುಂದುವರಿದುಹೋಗಿ ಕೆಲಸಕ್ಕೆ ತೊಡಗಿದಾಗ ಕಾಕತಾಳೀಯವೆಂಬಂತೆ ಅದರಲ್ಲಿ ಏನಾದರೂ ಕೆಡಕು ಸಂಭವಿಸಿದರೆ ಅದಕ್ಕೆ ಅಂದಿನ ಅಪಶಕುನವೆ ಕಾರಣವೆಂದು ಗಟ್ಟಿಯಾಗಿ ನಂಬುತ್ತಾರೆ, ಹೀಗೆ ಭಾರತೀಯರಲ್ಲಿ ರಕ್ತಗತವಾಗಿ ಬೆಳೆವ ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ಪರಿಸರವೇ ಈ ಮೂಢ ನಂಬಿಕೆ ಬೆಳೆದುಳಿಯಲು ಕಾರಣ, ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ ಜನ ಮೂಢ ನಂಬಿಕೆ ಬೆಳೆದುಳಿಯಲು ಕಾರಣ. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ ಜನ ಮೂಢ ನಂಬಿಕೆ ಎಂದು ಮನ ಹೇಳುತ್ತಿದ್ದರೂ ಅದನ್ನು ನಂಬುತ್ತಾರೆ.

ಅಷ್ಟೇ ಅಲ್ಲ ಆಗಾಗ ಮನುಷ್ಯನನ್ನು ಪೀಡಿಸುವ ರೋಗ ರುಜಿನಾದಿಗಳಿಗೂ ದೈವತ್ವವನ್ನು ಆರೋಪಿಸಿ ಅವುಗಳ ಪೂಜೆಯನ್ನು ಕೈಕೊಳ್ಳುವವರೆಗೂ ಜನರಲ್ಲಿ ಅಂಧ: ಸಂಪ್ರದಾಯ ಬೆಳೆದಿವೆ ಈ ಮನೋಧರ್ಮ ಬರುಬರುತ್ತಾ ಒಂದು ದೊಡ್ಡ ದೌರ್ಬಲ್ಯವೂ ಆಗಿ ಪರಿಣಮಿಸುತ್ತಿದೆ, ಜನ ಸಹನೆಗೆ ಮೀರಿದ ಕಷ್ಟಕ್ಕೆ ಸಿಕ್ಕಿದಾಗ ತಮ್ಮ ವಿಚಾರ ಶಕ್ತಿಯನ್ನು ಹೊರಪೂಡಿ ಎಂತಹ ಕುರುಡು ನಂಬಿಕೆಯಾದರೂ ಅದಕ್ಕೆ ಶರಣು ಹೋಗುತ್ತಾರೆ, ತಮ್ಮ ಕಂದನಿಗೆ ಕಾಯಿಲೆಯಾದಾಗ ಔಷಧಿಯಿಂದ ಗುಣ ಕಾಣದಿದ್ದರೆ, ಕಂಡ ಕಲ್ಲಿಗೆಲ್ಲಾ ಹರಕೆ ಹೊರುತ್ತಾರೆ: ತಮಗಾಗಿ ಅಲ್ಲದಿದ್ದರೂ ತಮ್ಮ ಮನೆಯವರಿಗಾಗಿಯಾದರೂ ಅಂಥ ಹರಕೆ ಸಲ್ಲಿಸುತ್ತಾರೆ,

ವೈಜ್ಞಾನಿಕ ದೃಷ್ಟಿಕೋನದಿಂದ ವಿಮರ್ಶಿಸತೊಡಗಿದರೆ ಇದರಲ್ಲಿಹುರುಳಿಲ್ಲವೆಂದು ಕಂಡರೂ ಇದರಿಂದ ಮಾನವನ ಜೀವನ ದುಸ್ಸಾಹಸವಾದೀತು ಎನಿಸುತ್ತದೆ, ಅದಕ್ಕೆ ಜನ ತಮ್ಮ ತಿಳುವಳಿಕೆ ಹುಚ್ಚೆಂದು ತೋರಿದರೂ ಇಂತಹ ನಂಬಿಕೆಗಳನ್ನು ಬಿಡಲಾರರು. ಮನಸ್ಸಿನ ಆಳದಲ್ಲಿ ಮನೆಮಾಡಿಕೊಂಡಿರುವ ಈ ನಂಬಿಕೆಗಳನ್ನು ಕಿತ್ತೆಸೆಯಲು ಆಗಿಲ್ಲ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಂಪರೆಯಿಂದ ಬಂದಿರುವ ಈ ಮೂಢನಂಬಿಕೆ ಕೇವಲ ಮೂಢರ ಸ್ವತ್ತು ಮಾತ್ರವಲ್ಲ ಒಂದಲ್ಲ ಒಂದು ರೀತಿಯಲ್ಲಿ ಜಾಣರೂ ಇದಕ್ಕೆ ಬಲಿಯಾಗುತ್ತಾರೆ.

ಪರಿಸ್ಥಿತಿ ಹೀಗಿರುವಾಗ ನಮ್ಮ ಧಾರ್ಮಿಕ ಹಾಗೂ ಸಾಮಾಜಿಕ ನಂಬಿಕೆಗಳು, ವಿಧಿಗಳು, ಆಚಾರಗಳು, ಸಂಪ್ರದಾಯಗಳು ಆ ವೈಜ್ಞಾನಿಕವೇ ? ಅರ್ಥಹೀನವಾದವುಗಳೇ ರೂಢಿ ಯೋಗ್ಯವಾದವುಗಳಲ್ಲವೆ ? ಎಂಬುದು ತಿಳಿದುಕೊಳ್ಳುವುದೆ ಈ ಚಿಂತನದ ಉದ್ದೇಶವಾಗಿದೆ,

ಉಪಕಾರ :

" ಪರೋಪಕಾರಂ ಇದಂಶರೀರಂ " ದುರ್ಗಸಿಂಹನ ಮಾತು.

" ಪರೋಪಕಾರಾಯ ಪುಣ್ಯಾಯ, ಪಾಪಾಯ ಪರಪೀಡನಂ " ಎಂಬ ಮಾತೂ ಇದೆ, ಉಪಕಾರ ಮಾಡಬೇಕು ? ಎಂಬ ಪ್ರಶ್ನೆ ಎದುರಾಗುತ್ತದೆ, ಈ ಪ್ರಶ್ನೆ ಮುಖ್ಯವಾದುದು ಕೂಡ, ಕೆಲವೊಂದು ಸಲ ಉಪಕಾರ ಮಾಡಲು ಹೋಗಿ ಕಷ್ಟದಲ್ಲಿ ಸಿಲುಕಿಕೊಳ್ಳಬೇಕಾದ ಪ್ರಸಂಗಗಳು ಬರುತ್ತವೆ, ಇದಕ್ಕೆ ಪಂಚತಂತ್ರದ ಶಿವಭೂತಿಯ ಕಥೆಯೇ ಸಾಕ್ಷಿಯಾಗಿದೆ, ಅದು ಹೀಗಿದೆ–ತೀರ್ಥಯಾತ್ರೆಗೆಂದು ಹೋಗುತ್ತಿದ್ದ ಬ್ರಾಹ್ಮಣ ಶಿವಭೂತಿಯು, ಹಾಳು ಭಾವಿಯಲ್ಲಿ ಬಿದ್ದಿರುವ ಹುಲಿ, ಹಾವು. ಮಂಗ, ಕಂಬಳಕನೆಂಬ ಚೇಡನನ್ನು ತೆಗೆದು ಪ್ರಾಣಾಪಾಯದಿಂದ ಉಳಿಸಿ ಉಪಕಾರ ಮಾಡುತ್ತಾನೆ. ಶಿವಭೂತಿ ಮಾಡಿದ ಉಪಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿ ಹೊರಟು ಹೋದ ಪ್ರಾಣಿಗಳು, ಮುಂದೆ ಶಿವಭೂತಿಗೆ ಪ್ರತಿ ಉಪಕಾರ ಮಾಡಿ ತಮ್ಮ ಋಣ ತಿರಿಸಿಕೊಳ್ಳುತ್ತವೆ, ಆದರೆ ಕಂಬಳಕ ಚೇಡನಿಂದ ಅಪಾಯಕ್ಕೆ ಒಳಗಾಗಿ ಕಾರಾಗೃಹವಾಸ ಅನುಭವಿಸಬೇಕಾದ ಪ್ರಸಂಗ ಬರುತ್ತದೆ,

ಪರೋಪಕಾರ ಎಂಬ ಮೌಲ್ಯವೇ ಸುಟ್ಟು ಕರಕಾದಾಗ ಮಾನವೀಯತೆಗೆಲ್ಲಿದೆ ಅರ್ಥ ? ಅದಕ್ಕಾಗಿಯೇ ಕವಿ ದುರ್ಗಸಿಂಹ ಎಸೆದ ಸವಾಲ್ ಇದು " ನೀಚಂಗೆನಿತುಪಕಾರಂ ಗೆಯ್ದೊಡಂ ಒಳ್ಳಿತುಗೆಯ್ವನಲ್ಲ " ಎಂದು ಹಾಗೆಯೇ ಒಂದು ಹೆಜ್ಜೆ ಮುಂದುವರಿದು ಲೋಕಾನುಭವಿ ಸರ್ವಜ್ಞ ಕವಿಯು ಎಚ್ಚರಿಕೆ ಕೊಟ್ಟಿದ್ದಾನೆ :

" ನೀಚರಾ ನೆರೆಯಿಂದ, ಈಚಲ ಮರಲೇಸು "
ಈಚಲೊಂದೆಡೆಗೆ ಉಪಕಾರಿ ನೀಚ ತಾ ಈಚಲಿಂ ಕಷ್ಟ –
ಎಂದಿದ್ದಾನೆ ಸರ್ವಜ್ಞ ಕವಿ.

ಅದು ಬೇವಿನ ಗಿಡಕ್ಕೆ ಬೆಲ್ಲದ ಕಟ್ಟೆಯ ಕಟ್ಟಿ ಹಾಲು ಎರೆದಂತೆ ವ್ಯರ್ಥವಾಗುತ್ತದೆ ಅಷ್ಟೆ, ಹಾಗಾದರೆ ನಾವು ಮಾಡಿದ ಉಪಕಾರ ಪ್ರಯೋಜನವಾಗಬೇಕಾದರೆ, ಅದರ ಸಾರ್ಥಕತೆ ಕುರಿತು ಸೋಮೇಶ್ವರ ಕವಿ ತನ್ನ ಶತಕಗಳಲ್ಲಿ ಹೇಳಿದ್ದೇನೆಂದರೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಕೊಡಬೇಕುತ್ತಮನಾದವಂಗೆ ಮಗಳಂ, ಸತ್ಪಾತ್ರದೋಳ್ ದಾನಮಂ " ಯಾವಾಗಲೂ ಯೋಗ್ಯ – ಅಯೋಗ್ಯರನ್ನು ನೋಡಿಯೇ ದಾನ ಮಾಡಬೇಕು, ಆಗ ಮಾತ್ರ ಅದರ ಸರಿಯಾದ ವಿನಿಯೋಗವಾದಂತಾಗುತ್ತದೆ. ಸೋಮೇಶ್ವರ ಕವಿ ತನಗೆ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಉಪಕಾರ ಮಾಡದಿದ್ದರೂ ಸರಿಯೇ. ಉಪಕಾರವನ್ನು ಸ್ಮರಿಸುವಂತಹ ಗುಣವಾದರೂ ಇರಬೇಕು, ಇಂತಹ ಸುಜನರಿಗೆ ಮಾಡಿದ ಉಪಕಾರವು ಸುವರ್ಣಕ್ಕೆ ಸುವಾಸನೆ ಕೊಟ್ಟಂತೆ ಆಗುವದು. ಕೆಲ ಕಿಡಗೇಡಿಗಳಿಗೆ ಮಾಡಿದ ಉಪಕಾರವು ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತೆ ವ್ಯರ್ಥವಾಗಿ ಹೋಗುವದು,

ಉಪಕಾರ ಮಾಡುವಲ್ಲಿ ಧರ್ಮಪಾಲಿಸುವಲ್ಲಿ ನಿಷ್ಣಾತರಾದ ಸಜ್ಜನರೂ ಈ ಲೋಕದಲ್ಲಿ ಇದ್ದಾರೆ, ತಾವು ಹಾಳಾದರೂ ಪರವಾಯಿಲ್ಲ, ತಾವು ಹಾನಿಗೊಳಗಾದರೂ ಚಿಂತೆಯಿಲ್ಲ. ಉಪಕಾರ ಮಾಡುವದನ್ನು ಬಿಡಬಾರದೆನ್ನುವವರೂ ಇದ್ದಾರೆ. ಒಂದು ಕಥೆ ಹೀಗಿದೆ – ಒಬ್ಬ ಸಾಧು ನದಿಯನ್ನು ದಾಟುತ್ತಿದ್ದನಂತೆ, ನದಿಯಲ್ಲಿ ಒಂದು ಚೇಳು ಹರಿದು ಹೋಗುತ್ತಿರುವದನ್ನು ಕಂಡ ಅವನು ಅದನ್ನು ನೀರಿನಿಂದ ಪಾರು ಮಾಡಿ ಜೀವ ಉಳಿಸಬೇಕೆಂದು ತನ್ನ ಕೈಯನ್ನು ಚೇಳಿನ ಕಡೆಗೆ ಚಾಚಿದನು, ಚೇಳು ಕೈಮೇಲೆ ಬಂತೋ ಇಲ್ಲವೋ ಟಕ್ ಎಂದು ತನ್ನ ಕೊಂಡಿಯಿಂದ ಸಾಧುಗೆ ಘಾರಿಸಿತು. ಕಡಿತದ ನೋವು ತಾಳಲಾರದೆ ಸಾಧು ಕೈಜಾಡಿಸಿದನು. ಅದು ಮತ್ತೆ ನೀರಿಗೆ ಬಿದ್ದು ಹರಿದು ಹೋಗುತ್ತಿರಲು ಸಾಧುಗೆ ಮತ್ತೆ ಕರುಣೆ ಬಂದು, ಮತ್ತೆ ನೀರಿಗೆ ಬಿದ್ದು ಹರಿದು ಹೋಗುತ್ತಿರಲು ಸಾಧುಗೆ ಮತ್ತೆ ಕರುಣೆ ಬಂದು, ಮತ್ತೆ ಕೈಚಾಚಿದನು ಅದು ಕೈ ಮೇಲೆ ಏರಿ ಮತ್ತೆ ಕಡಿಯಿತು. ಹೀಗೆಯೇ ಹಲವು ಸಲದ ಕಡಿತದ ನೋವಿನಲ್ಲಿಯೂ ಅದನ್ನು ಪ್ರಾಣಾಪಾಯದಿಂದ ಪಾರು ಮಾಡುವ ಹಟ ಹಿಡಿದಿರುವ ಸಾಧುವಿಗೆ ನದಿಯ ದಂಡೆಯ ಮೇಲಿದ್ದ ಒಬ್ಬ ವ್ಯಕ್ತಿ – " ಸ್ವಾಮಿ ಆ ಉಪಕಾರಗೇಡಿ ಚೇಳಿಗೆ ಯಾಕೆ ರಕ್ಷಿಸುತ್ತೀರಿ " ಪಾಪಿ ಹರಿದು ಹೋಗಲಿ ಬಿಡ್ರಿ " ಎಂದನಂತೆ,

ಮನುಷ್ಯ ಬದುಕಬೇಕು, ಬಾಳಬೇಕು ನಿಜ, ಹೇಗಾದರೂ ಬಾಳಿದರೆ ಆಯಿತೆ ? ಕಂಡವರ ರಕ್ತ ಹೀರಿ ಬದುಕುವುದು ಒಂದು ಬದುಕೇ ? ಪರರ ಬಾಳನ್ನು ಮೆಟ್ಟಿ ಬಾಳುವುದು ಒಂದು ಬಾಳೇ.

ಆಗ ಸಾಧು ಹೇಳಿದನಂತೆ ಚೇಳು, ಕಡಿಯುವ ತನ್ನ ಗುಣಧರ್ಮವನ್ನು ಬಿಡಲೊಲ್ಲದು ಎಂದ ಬಳಿಕ ನಾನು ರಕ್ಷಿಸುವ ನನ್ನ ಗುಣಧರ್ಮವನ್ನು ಯಾಕೆ ಬಿಡಲಿ ಎಷ್ಟು ಸಲ ಕಡಿಯುವದೋ ಕಡಿಯಲಿ ಎಂದನಂತೆ – ಇಂಥ ಉಪಕಾರ ಗುಣಧರ್ಮ ನಿಜವಾಗಿಯೂ ಹಾನಿಕಾರಕವಲ್ಲವೇ ? ಅದಕ್ಕಾಗಿಯೇ ಲೋಕಾನುಭವಿ ಕವಿ ಸರ್ವಜ್ಞ

" ಹೊತ್ತು ಮೀರಿದ ಲಾಭ, ಒತ್ತಿ ಮಾಡಿದ ಹಣ್ಣು,
ಸತ್ತವರಿಗೆ ಮಾಡಿದ ಉಪಕಾರ ಈ ಮೂರು ವ್ಯರ್ಥ " ಎಂದು
ಲೋಕಕ್ಕೆ ಸಾರಿ ಹೇಳಿದ್ದಾನೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಪಂಚದಲ್ಲಿ ಒಳ್ಳೆಯವರು ಪರರ ಉಪಕಾರವನ್ನು ಬೇಡ ಎನ್ನುತ್ತಾರೆ. ದುಷ್ಟರು ಉಪಕಾರ ಮಾಡಿಸಿಕೊಂಡು ದ್ರೋಹ ಬಗೆಯುತ್ತಾರೆ. ಹೀಗಿರುವಾಗ ಉಪಕಾರಕ್ಕೆ ಏನು ಬೆಲೆ ? ಹಾಗೆಂದು ಉಪಕಾರ ಮಾಡದೆ ಇರಲಾದಿತೆ? ಉಪಕಾರ ಮಾಡುವುದು ಸಜ್ಜನರ ಧರ್ಮವಾಗಿದೆ.

ಸೇವೆ :

" ಜಂತೂನಾಂ ನರಜನ್ಮ ದುರ್ಲಭಂ " ಎಂಬ ಶಂಕರಾಚಾರ್ಯರ ಹೇಳಿಕೆಯನ್ನು ಅವಗಾನಿಸಿ ಹೇಳುವದಾದರೆ, ಜೀವಿಗಳಲ್ಲಿ ಮನುಷ್ಯ ಜನ್ಮ ದುರ್ಲಭವಾದುದು. ಮನುಷ್ಯನಾಗಿ ಹುಟ್ಟುವುದು ಒಂದು ಅದೃಷ್ಟ. ಪೂರ್ವಜನ್ಮಕೃತ ಪುಣ್ಯಂ. ಜಗತ್ತಿನಲಿ ಇತರ ಪ್ರಾಣಿಗಳಿಗಿಂತ ವಿಶಿಷ್ಟವಾದ ಬುದ್ಧಿ ಶಕ್ತಿಯನ್ನು ವಿವೇಚನಾ ಶಕ್ತಿಯನ್ನು ದೇವರು ಮಾನವನಿಗೆ ದಯಪಾಲಿಸಿದ್ದಾನೆ. ಅದಕ್ಕಾಗಿಯೇ ನಿಜಗುಣ ಶಿವಯೋಗಿಗಳು " ನರಜನ್ಮದಿಂದಿಹದೊಳು ಮಿಗಿಲುಂಟೆ ? " ಎಂದು ಪ್ರಶ್ನೆ ಮಾಡಿದ್ದಾರೆ. ಇಂತಹ ಶ್ರೇಷ್ಠ ವ್ಯಕ್ತಿತ್ವವನ್ನು ಹೊಂದಿದ ಮನುಷ್ಯ ಪ್ರತಿಯೊಂದನ್ನು ವಿಚಾರ ಮಾಡಿ. ತನ್ನ ವಿಚಾರವನ್ನು ಕೃತಿಗಿಳಿಸುವ ಸಾಮರ್ಥ್ಯ ಪಡೆದಿದ್ದಾನೆ. ಮನುಷ್ಯ ಮನಸ್ಸು ಮಾಡಿದರೆ ಸ್ವಹಿತ ಪರಹಿತ ಎರಡನ್ನೂ ಒಟ್ಟಿಗೆ ಸಾಧಿಸಬಲ್ಲ. ಪರಿಸ್ಥಿತಿ ಹೀಗಿರುವಾಗ ಮನುಷ್ಯ ಜನ್ಮ ಪಡೆದವನು ಹೇಗೆ ಜೀವಿಸಬೇಕು ? ಏನು ಮಾಡಬೇಕು ? ಎಂಬ ಪ್ರಶ್ನೆಗಳು ಏಳುವುದು ಸಹಜ ಅಲ್ಲವೆ ?

ಮನುಷ್ಯ ಜನ್ಮಕ್ಕೆ ಚತುರ ಪುರುಷಾರ್ಥಗಳನ್ನು ಹೇಳಲಾಗುತ್ತದೆ. ಧರ್ಮ. ಅರ್ಥ, ಕಾಮ, ಮೋಕ್ಷ, ಈ ನಾಲ್ಕರಲ್ಲಿ ಮನುಷ್ಯ ಮೊದಲು ಸಾಧಿಸಿಕೊಳ್ಳಬೇಕಾದುದು. " ಧರ್ಮವನ್ನು. ಧರ್ಮ ಎಂದರೆ ಯಾವದು ? ವಿವೇಕಾನಂದರ ಮಾತಿನಲ್ಲಿ ಸೇವೆಗೆ ಮಿಗಿಲಾದ ಧರ್ಮ ಮತ್ತೊಂದಿಲ್ಲ. (ನಮ್ಮ ಜೀವನ ಧನ್ಯಮಾಡಿಕೊಳ್ಳಬೇಕಾದರೆ, ಸಾರ್ಥಕ್ಯ ಮಾಡಿಕೊಳ್ಳಬೇಕಾದರೆ, " ಪರೋಪಕಾರಾರ್ಥ ಇದಂ ಶರೀರಂ " ಎಂದು ಭಾವಿಸಿ, ಸಮಾಜ ಸೇವೆಯೇ ಸರ್ವೇಶನ ಸೇವೆ, ದೇಶ ಸೇವೆಯೇ ಈಶನ ಸೇವೆ, ಜನಸೇವೆಯೇ ಜನಾರ್ಧನನ ಸೇವೆ. ಎಂದು ತಿಳಿದು ಸೇವೆಯಲ್ಲಿ ನಿರತನಾಗಿ ಜೀವನ ಸಾರ್ಥಕ್ಯ ಮಾಡಿಕೊಳ್ಳಬೇಕು,

ಒಮ್ಮೆ ಒಬ್ಬ ತರುಣ ಸ್ವಾಮೀಜಿಯ ಹತ್ತಿರ ಬಂದು ತನಗೆ ಧ್ಯಾನದಲ್ಲಿ ಪ್ರಗತಿ ಆಗುತ್ತಿಲ್ಲ. ಕೊಠಡಿಯ ಬಾಗಿಲು. ಕಿಟಕಿಗಳನ್ನೆಲ್ಲ ಮುಚ್ಚಿ ಧ್ಯಾನಕ್ಕೆ ಕೂರುತ್ತೇನೆ. ಎಷ್ಟು ಹೊತ್ತು ಸಾಧ್ಯವೋ ಅಷ್ಟು ಹೊತ್ತು ಕಣ್ಣು ಮುಚ್ಚಿ ಕುಳಿತಿರುತ್ತೇನೆ. ಆದರೂ ನನಗೆ ಶಾಂತಿ ಸಿಕ್ಕಿಲ್ಲ – ಎಂದು ಹೇಳಿದನಂತೆ ಆಗ ಸ್ವಾಮೀಜಿ ಆ ತರುಣನಿಗೆ ಮೊದಲು ನಿನ್ನ ಕೊಠಡಿಯ ಕಿಟಕಿ ಬಾಗಿಲುಗಳನ್ನು ತೆರೆ. ಸುತ್ತ ನೋಡು. ನೂರಾರು ಜನ ಬಡವರು, ಅಸಹಾಯಕರು ನಿನ್ನ ನೆರೆ ಹೊರೆಯಲ್ಲಿ ಇದ್ದಾರೆ. ಅವರಿಗೆ ನೆರವು ನೀಡಲು ಶಕ್ತಿಮೀರಿ ಶ್ರಮಿಸು, ರೋಗಿಗಳಿಗೆ ಅನ್ನ ಔಷಧಗಳನ್ನು ದೊರಕಿಸಿ ಅವರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೇವೆ ಮಾಡು. ನಿನಗೆ ಮನಃಶಾಂತಿ ಬೇಕಾದರೆ ಇತರರಿಗೆ ಸೇವೆ ಸಲ್ಲಿಸಲು ನೀನು ಶಕ್ತಿಮೀರಿ ದುಡಿಯಬೇಕು, ಎಂದರಂತೆ,

"ಸೇವೆ" ಇದು ಪದ ಎರಡಕ್ಷರದ್ದು. ಆದರೆ ಇದಕ್ಕೆ ವಿಶಾಲ ಅರ್ಥವಿದೆ, ಬರೀ ಸೇವೆ ಸೇವೆ ಎಂದು ಬಾಯಿ ಮಾತಿನಿಂದ ಡಂಗುರ ಸಾರಿದರೆ ಸಾಲದು. ಸೇವೆ ಕರ್ತವ್ಯದಲ್ಲಿ ವ್ಯಕ್ತವಾಗಿರಬೇಕು, ಎಷ್ಟೇ ಪುಸ್ತಕ ಓದಿರಲಿ, ವೇದಶಾಸ್ತ್ರ ಪುರಾಣ ಪಠಿಸಿರಲಿ ಅದರಿಂದ ಇತರರಿಗೆ ಪ್ರಯೋಜನವಾಗುವಂತಿದ್ದರೆ ಮಾತ್ರ ಸಾರ್ಥಕ ವಾಗುವದು, ಬಾಹ್ಯಾಡಂಬರ ಸೇವೆ ಮಾನವನ ಪತನಕ್ಕೆ ಕಾರಣವಾಗಬಹುದು, ಕಾಯಕದಲ್ಲಿ ನಿರತನಾದಾಗ ಗುರು, ಲಿಂಗ, ಜಂಗಮವನ್ನು ಮರೆಯುವಂತೆ, ಸೇವೆ ಯಲ್ಲಿ ತೊಡಗಿದಾಗ ಯಾವ ಆಮಿಶಕ್ಕೂ ಸಿಲುಕಿಕೊಳ್ಳದೆ ನಿಷ್ಠೆಯಿಂದ ಸೇವೆ ಮಾಡಬೇಕು, ಸೇವೆ ಕೇವಲ ಸೇವೆಗಾಗಿ ಅಲ್ಲ, ಸೇವೆ ಸಂಸ್ಕಾರಕ್ಕಾಗಿ, ಸಂಸ್ಕಾರ ಆಚರಣೆಗಾಗಿ, ಆಚರಣೆ ಸಮಾಜಕ್ಕಾಗಿ ಆಗಬೇಕು,

"ಲೋಕಾ : ಸಮಸ್ತಾ : ಸುಖಿನೋಭವಂತು"
ಎಂಬ ವಿಶಾಲ ಮನೋಭಾವನೆಯಿಂದ ನೋಡಿದರೆ, ಸಮಾಜದ
ಕ್ಷೇಮದಲ್ಲಿ ನಮ್ಮ ಕ್ಷೇಮವಡಗಿದೆ.
ಸಂತಕವಿ ಪುರಂದರ ದಾಸರು ಈ ಕಾರಣಗಳಿಂದಲೇ
"ಮಾನವ ಜನ್ಮ ದೊಡ್ಡದು
ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ" ಎಂದು ಸಾರಿದ್ದಾರೆ;
ಕಾಯ ಹೋಗುತ್ತಿದೆ ವ್ಯರ್ಥ
ಇದರೊಳು ತುಂಬಿದೆ ಮಹದರ್ಥ
ಇದನ್ನು ತಿಳಿದವನೆ ಸಮರ್ಥ

— ಕವಿ ಕಡಕೊಳ ಮಡಿವಾಳಪ್ಪನವರ

ಹೇಳಿಕೆಗಳು ಹೀಗಿರುವಾಗ ಮಾನವ ಜನ್ಮವನ್ನು ವ್ಯರ್ಥವಾಗಿ ಪೋಲು ಮಾಡದೆ ಅದರ ಸ್ವಾರ್ಥಕತೆಯನ್ನು ನಾವು ಸೇವೆಯಲ್ಲಿ ತೊಡಗುವವರಲ್ಲಿ ಕಾಣಬೇಕು,

ಸೇವೆ ಸರ್ವೇಶ್ವರನ ಸಾಕ್ಷಾತ್ಕಾರದ ಸಾಧನ ಎಂಬ ಮಾತನ್ನು ಅಣ್ಣ ಬಸವಣ್ಣ ನವರೂ ನಂಬಿದ್ದರು, ಅವರು ತಮ್ಮೊಂದು ವಚನದಲ್ಲಿ ಹೀಗೆ ನುಡಿದಿದ್ದಾರೆ,

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯ ಜಂಗಮ ದಾಸೋಹಕ್ಕೆಂದು
—ಹೀಗೆ ಸೇವೆಯಲ್ಲಿ ಪರಮಾತ್ಮನ ಅಂಶವನ್ನು ದರ್ಶಿಸಿದವರು
ಬಸವಣ್ಣನವರು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪ ಶೋಪನ್‌ಹಾರ್ ಹಾಗೂ ಕಲೆ :

(1788 – 1860)

● ಪ್ರೊ. ಎಸ್. ಎಸ್. ಪಾಟೀಲ,

ಶೋಪನ್‌ಹಾರ್ ಹೆಗಲ್‌ನ ಸಮಕಾಲೀನ ಮತ್ತು ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಅವರ ಸಹೋದ್ಯೋಗಿ, ಹೆಗಲ್‌ನ್ ತತ್ತ್ವಶಾಸ್ತ್ರವು ಪಾಶ್ಚಾತ್ಯ ಚಿಂತನೆಯ ಚರಮಸೀಮೆ ಎಂಬ ಅಭಿಪ್ರಾಯವನ್ನು ನಿರಾಕರಿಸುತ್ತಾನೆ, ಸ್ತ್ರೀದ್ವೇಷಿ, ಆದರೆ ನೋವಿನಿಂದ ಬಳಲುತ್ತಿರುವ ಜೀವಿಗಳ ಬಗ್ಗೆ ಗಾಢವಾದ ಅನುಕಂಪ. ತತ್ತ್ವಶಾಸ್ತ್ರದಲ್ಲಿ ಅವನದು ಎಲ್ಲಿಲ್ಲದ ಅಭಿಮಾನ, ಅವರ ತಾತ್ತ್ವಿಕ ಚಿಂತನೆ ಸಂಕಲ್ಪವಾದ, ಭಾವವಾದ ಮತ್ತು ನಿರಾಶವಾದಗಳ ಸಂಕೀರ್ಣ, ಶೋಪನ್‌ಹಾರ್.

ಗ್ರಂಥಗಳಲ್ಲಿ ತನ್ನ ತಾತ್ತ್ವಿಕ ವಿಚಾರಗಳನ್ನು ಸಮರ್ಥವಾಗಿ ಮಂಡಿಸಿದ್ದಾನೆ, ಈ ಗ್ರಂಥದ ಮೊದಲನೆ ಮತ್ತು ಎರಡನೆ ಸಂಪುಟಗಳಲ್ಲಿ ಜ್ಞಾನ ಮತ್ತು ಶಾಸ್ತ್ರೀಯ ವಿಚಾರಗಳನ್ನು, ಮತ್ತು ಮೂರನೆ ಮತ್ತು ನಾಲ್ಕನೆ ಸಂಪುಟದಲ್ಲಿ " ಸೌಂದರ್ಯ " ವನ್ನು ಕುರಿತು ಚರ್ಚಿಸಿದ್ದಾನೆ,

ಶೋಪನ್‌ಹಾರನು, ಹೆಗಲ್ ಮತ್ತು ಫಿಷೆರ ಹಾಗೆ, "ಪರಮಚೈತನ್ಯ " ವು ವಿಶ್ವ ಸೃಷ್ಟಿಯ ಮೂಲ ತತ್ವವೆಂದು ಘೋಷಿಸುತ್ತಾರೆ, " ಪರಮಚೈತನ್ಯ " ವನ್ನು ಶೋಪನ್‌ಹಾರ್‌ನು " ಪರಮ ಸಂಕಲ್ಪಶಕ್ತಿ " ಎಂದು ಕರೆಯುತ್ತಾನೆ, " ಪರಮ ಸಂಕಲ್ಪಶಕ್ತಿ " ಯು ಸ್ವಯಂಭು ಮತ್ತು ಸ್ವಯಂಕೃತ, ಅದು ದೇಶ ಕಾಲ ಮತ್ತು ಕಾರಣತ್ವಗಳಿಂದ ಅತೀತ. ಆದರೆ, ಅದು ವಿಶ್ವಗತಿಯಲ್ಲಿ ತನ್ನನ್ನು ತಾನೇ ಮೂರ್ತಿಕರಿಸಿಕೊಂಡು ಉಪಾಧಿಗಳಿಗೆ ಒಳಪಡುತ್ತದೆ. ಅನುಭವ ಬುದ್ಧಿಗಳು ಸಂಕಲ್ಪದ ಅಭಿವ್ಯಕ್ತಿಗಳು, ಬುದ್ಧಿಯು ವಿಶ್ವಗತಿಯಲ್ಲಿ ಆಗುಂತಕವಾಗಿದ್ದು "ಪರಮ ಸಂಕಲ್ಪಶಕ್ತಿ" ಯ ಸಾಧನ ವಾಗಿರುತ್ತದೆ. " ಪರಮ ಸಂಕಲ್ಪಶಕ್ತಿ " ಯು ಸಾಮಾನ್ಯ ಭಾವಗಳನ್ನು ಸೃಷ್ಟಿಸಿ. ಅವುಗಳ ಮೂಲಕ ತನ್ನನ್ನು ತಾನು ವಿಶ್ವದಲ್ಲಿ ನೆಲೆಗೊಳಿಸಿಕೊಳ್ಳುತ್ತದೆ, ಸಾಮಾನ್ಯ ಭಾವಗಳು ಉಪಾದಿಗಳಿಂದ ಅತೀತ, ಭೌತ ವಸ್ತುಗಳು ಸಾಮಾನ್ಯ ಭಾವಗಳ ನಕಲುಗಳು, ಈ ಪ್ರಪಂಚವು ಮೂಲಶಕ್ತಿಯ ಹೊರಮೈ ಎಂದು ಶೋಪನ್ ಹಾರ್‌ನ ಅಭಿಮತ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂಲ ಸಂಕಲ್ಪ ಶಕ್ತಿಯು, ನೀತಿ, ಪರಿಜ್ಞಾನ ಮತ್ತು ಗುರಿ ಇಲ್ಲದ ಸ್ವೇಚ್ಛಾವೃತ್ತಿಯ ಅಂಧಶಕ್ತಿ, ಅಂಧ, ಅಸಂಗತ ವ್ಯಸನಗಳ ಸಂಕಲ್ಪ ಶಕ್ತಿಯಿಂದ ಅವಿರ್ಭವಿಸಿದ ವಿಶ್ವವು ಒಂದು ಮಹಾ ಕೆಡಕು, ಈ ವಿಶ್ವವು ಘರ್ಷಣೆ, ಆಕ್ರಮಣ, ಸ್ವರಕ್ಷಣೆ, ಸ್ವಾರ್ಥ ನೋವುಗಳ ಬೀಡು, ಈ ವಿಶ್ವವು ಒಂದು ಮೋಸಚಾದ ಆಲಗ ಮತ್ತು ಇಕ್ಕಳವೆಂದು ಶೋಪನ್‌ಹಾರ್ ಕರೆಯುತ್ತಾನೆ. ಇಂಥಹ ವಿಶ್ವದಿಂದ ವಿಮೋಚನೆ ಸಾಧ್ಯವೆ ?

ಮೇಲಿನ ಪ್ರಶ್ನೆಗೆ ಪರಿಹಾರ ಹುಡುಕಲು ಪಾಶ್ಚಾತ್ಯ ನೀತಿಶಾಸ್ತ್ರ ಧರ್ಮ ಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳನ್ನು ಕೂಲಂಕುಷವಾಗಿ ಶೋಪನ್‌ಹಾರ್ ಪರಿಶೀಲಿಸುತ್ತಾನೆ, ಆದರೆ ಅವನಿಗೆ ಸರಿಯಾದ ಉತ್ತರ ಸಿಕ್ಕುವದಿಲ್ಲ. ಏಕೆಂದರೆ ಪಾಶ್ಚಾತ ನಾಗರಿಕತೆಯು ಅಂಧಶಕ್ತಿಯನ್ನು ದೈವತ್ವಕ್ಕೆ ಏರಿಸಿ ಆರಾಧಿಸುವಲ್ಲಿ ಮತ್ತು ಕ್ರಿಯಾಶೀಲ ಸ್ವಾರ್ಥ ಬದುಕಿನ ಮೂಲಕ ತೃಪ್ತಿಯನ್ನು ಸಂಪಾದಿಸುವದರಲ್ಲಿ ಮಗ್ನರಾದದ್ದು, ಶೋಪನ್‌ಹಾರ್‌ನು ಗಮನಿಸುತ್ತಾನೆ, ವಿಮೋಚನೆ ಆತ್ಮಹತ್ಯೆಯಿಂದಲೂ ಸಾಧ್ಯವಿಲ್ಲ ಎಂಬುದು ಅವನು ಅರಿತುಕೊಳ್ಳುತ್ತಾನೆ, "ಪರಮ ಸಂಕಲ್ಪ"ದ ಗತಿ ಶೀಲಕ್ಕೆ ಪೂರ್ಣವಿರಾಮ ಕೊಡುವದರಿಂದ ನಿರ್ವಾಣ ಸಾಧ್ಯವೆಂದು ಅವನು ಮನಗಾಣುತ್ತಾನೆ. ಆದರೆ ಅನಂತ ಸ್ವೇಚ್ಛಾಪರ ಅಂಧ "ಸಂಕಲ್ಪ ಶಕ್ತಿ"ಯ ಗತಿಗೆ ಪೂರ್ಣ ವಿರಾಮ ಕೊಡುವ ಮಾರ್ಗವಾವುದು ? ಶೋಪನ್‌ಹಾರ್‌ನ ಉತ್ತರ ಕಲೆ,

ಶೋಪನ್‌ಹಾರ್‌ನ ಪ್ರಕಾರ ಸಾಮಾನ್ಯಭಾವಗಳು ಶಾಶ್ವತ ನಿತ್ಯ ಸತ್ಯಗಳು. ಸಾಮಾನ್ಯಭಾವಗಳು ಮೂಲಸಂಕಲ್ಪ. ಮತ್ತು ಪರಿವರ್ತನಶೀಲ ಪ್ರಕೃತಿಗಳ ಮಧ್ಯ ನೆಲೆಸಿರುತ್ತವೆ, ನಮ್ಮ ತಿಳಿವು ಪರಮಸಂಕಲ್ಪದ ನಿಯಮಕ್ಕನುಗುಣವಾಗಿ ಅದಕ್ಕೆ ಅಧೀನವಾಗಿರುತ್ತದೆ, ಏಕೆಂದರೆ ಸಂಕಲ್ಪದಿಂದ ಪ್ರವರ್ತಿಸುವ ಆಪೇಕ್ಷೆಗಳನ್ನು ಸಾಧಿಸುವದು ಮತ್ತು ತಿಳಿವಿನ ಕೆಲಸ, ಪ್ರಾಣಿಗಳ ಅಧೀನತೆಯು ಸ್ಥಿರ. ಆದರೆ ಮಾನವನು ಪ್ರಜ್ಞಾಶಾಲಿಯಾದುದರಿಂದ ಅವನು ಅಲ್ಪಕಾಲಿಕವಾದರೂ ಸಹಾನುಭೂತಿಯಲ್ಲಿ ಸಂಕಲ್ಪದ ಪ್ರಭುತ್ವವನ್ನು ಅಳಿಸಿ, ನೇರವಾಗಿ ತನ್ನ ಚಿಂತನೆಯನ್ನು ಸಾಮಾನ್ಯ ಭಾವಗಳಲ್ಲಿ ನೆಲೆಗೊಳಿಸಬಹುದು. ಯಾವಾಗ ಅವನು ತನ್ನ ರಾಗರಹಿತ ಚಿಂತನೆಯನ್ನು ನಿತ್ಯ ಸತ್ಯಗಳಾದ ಸಾಮಾನ್ಯ ಭಾವಗಳಲ್ಲಿ ನೆಲೆಗೊಳಿಸುತ್ತಾನೋ, ಆಗ ಜ್ಞಾತೃ (ಅವನು) ಮತ್ತು ಜ್ಞೇಯ (ವಸ್ತು) ಗಳ ಮಧ್ಯ ಇರುವ ವಿಶೇಷತೆ ಮಾಯವಾಗುತ್ತದೆ. ಪ್ರಜ್ಞಾಶೀಲ ಮಾನವನು ಸಂಕಲ್ಪದಿಂದ ಬಿಡಿಸಿಕೊಂಡು ಪರಿವರ್ತನಾಶೀಲ ಘಟನೆಗಳಿಗೆ ಆಧಾರಭೂತವಾದ ಶಾಶ್ವತ ತತ್ತ್ವಗಳನ್ನು ಗ್ರಹಿಸುತ್ತಾನೆ. ಇಂಥ ಶಾಶ್ವತ ಸತ್ಯಗಳ ಗ್ರಹಿಕೆಯೇ ಕಲೆ ಎಂದು ಶೋಪನ್‌ಹಾರ್ ಕರೆಯುತ್ತಾನೆ,

ಶೋಪಾನ್‌ಹಾರ್‌ನ ದೃಷ್ಟಿಯಲ್ಲಿ ಎಲ್ಲಾ ನಿರೂಪಣೆಯು ಸಂತೃಪ್ತಿ ಕಾರಣ ನಿಯಮಕ್ಕೆ ಒಳಪಡಿಸುತ್ತದೆ, ಆದರೆ ಕಲಾ ನಿರೂಪಣೆಯು ಸ್ವತಂತ್ರವಾದ ಶುದ್ಧ ಚಿಂತನೆಯೇ ಪರಿಣಾಮ. ಸ್ವತಂತ್ರ ಶುದ್ಧ ಚಿಂತನೆಯೇ ಸೌಂದರ್ಯಾನುಭೂತಿ, ರಸಜೀವನದ ಸತ್ವ, ಸಂಕಲ್ಪದ ಉಪಜೀವಿಯಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಕೈಗೊಂಬೆಯಾದ ಬುದ್ಧಿ ಅನಗ್ರಹಿತ ವ್ಯಕ್ತಿಗಳಲ್ಲಿ ತನ್ನ ಗುಲಾಮಗಿರಿಯನ್ನು ತೊರೆದು ಅನಾಸಕ್ತ ಚಿಂತನೆಯ ಸುಖಾನುಭವ ಸ್ಥಿತಿಗೆ ಆರೋಹಿಸುತ್ತದೆ, ಶುದ್ಧ ಚಿಂತನೆಯು ಅಂಶಿಕ ಮತ್ತು ಅಪೂರ್ಣವನ್ನು ಉದಾತ್ತೀಕರಣಗೊಳಿಸುತ್ತದೆ. ಮತ್ತು ಸಂಕಲ್ಪದ ಮತ್ತು ವ್ಯವಹಾರಿಕ ಪ್ರವೃತ್ತಿಗಳನ್ನು ನಿಶ್ಶಬ್ದಗೊಳಿಸಿ ಅಭಾವಕರಿಸುತ್ತದೆ, ಇದನ್ನು ಸಾಧಿಸುವುದು ದುರ್ಲಭ, ಇಂತಹ ಸ್ಥಿತಿಯನ್ನು ಸಾಧಿಸುವದು. ಅಸಾಧಾರಣ ಪ್ರತಿಭಾಶಾಲಿಗೆ ಸಾಧ್ಯ, ಯಾವನು ಕಲಾಕೃತಿಗಳಲ್ಲಿ ಸಾಮಾನ್ಯ ಭಾವಗಳನ್ನು ಪ್ರದರ್ಶಿಸುವನೋ. ಯಾವನು ಕಲಾಕೃತಿಗಳಲ್ಲಿ ಸಾಮಾನ್ಯ ಭಾವಗಳನ್ನು ಗ್ರಹಿಸುವನೋ ಅವನು ಪ್ರತಿಭಾಶಾಲಿ, ಕಲಾಕೃತಿಗಳು ಸಾಮಾನ್ಯ ಭಾವಗಳ ಅಪರಿಪೂರ್ಣ ನಕಲುಗಳು ಆದರೆ ಅವುಗಳಲ್ಲಿ ನಿರೂಪಿಸಿದ ಸಾಮಾನ್ಯ ಭಾವವನ್ನು ಗ್ರಹಿಸಲು ಪ್ರತಿಭಾ ಶಾಲಿಗೆ ಮಾತ್ರ ಸಾಧ್ಯ. ಪ್ರತಿಭಾಶಾಲಿಯು ಅಪ್ರತಿಭಾಶಾಲಿಗಳಿಗೆ ಉನ್ಮತ್ತನಂತೆ ಕಾಣುತ್ತಾನೆ, ಆದರೆ ಅವನು ಒಬ್ಬ ಕ್ರಾಂತಾದರ್ಶಿ ಅಂದರೆ ಸಾಮಾನ್ಯ ಜನರು ಚರ್ವಿತ ಚರ್ವಣ ವಸ್ತುಗಳನ್ನು ಕಂಡರೆ, ಪ್ರತಿಭಾಶಾಲಿಯು ಅವುಗಳಲ್ಲಿ ಸಾಮಾನ್ಯ ಭಾವವನ್ನು ಗ್ರಹಿಸುತ್ತಾನೆ ಎಂದು ಶೋಪಾನ್‌ಹಾರ್‌ಸು ಉದ್ಘೋಷಿಸುತ್ತಾನೆ, ಎಲ್ಲಾ ಜನರು ಪ್ರತಿಭಾಶಾಲಿಗಳಿಲ್ಲದ್ದು ಸತ್ಯ, ಆದಾಗ್ಯೂ ರಸಾಭಿಜ್ಞತೆ ಉಳ್ಳವರು ಬಾಹ್ಯ ವಸ್ತುಗಳಿಗೆ ಮೂಲಭೂತ ಮತ್ತು ಕಲಾಕೃತಿಗಳಲ್ಲಿ ಪುನರ್ನಿಮಿತ ಸಾಮಾನ್ಯ ಭಾವಗಳನ್ನು ಗುರುತಿಸಬಹುದು,

ಈಗ ಶೋಪಾನ್‌ಹಾರ್‌ಸು ವಿವಿಧ ಕಲೆಗಳನ್ನು ಆರೋಹಣಕ್ರಮದಲ್ಲಿ ಏರ್ಪಡಿಸಿ, ಅವುಗಳ ನೆಲೆ ಮತ್ತು ಬೆಲೆಯನ್ನು ನಿಶ್ಚಯಿಸುತ್ತಾನೆ, ಕಲೆಗಳ ಆರೋಹಣ ಕ್ರಮವು "ಪರಮಸಂಕಲ್ಪ"ದ ಮೂರ್ತೀಕರಣದ ಕ್ರಮವನ್ನು ಅವಲಂಬಿಸಿದೆ. ಶೋಪಾನ್‌ಹಾರ್‌ಸು ತಾನು ಕಲ್ಪಿಸಿದ ಕ್ರಮದಲ್ಲಿ ವಿವಿಧ ಕಲೆಗಳನ್ನು ಕೆಳಗಿನಂತೆ ವಿವರಿಸುತ್ತಾನೆ,

(1) ವಾಸ್ತುಶಿಲ್ಪ : "ಪರಮ ಸಂಕಲ್ಪ"ದ ಅಭಿವ್ಯಕ್ತಿಯ ಶ್ರೇಣಿಯ ಅತ್ಯಂತ ಕೆಳಮಟ್ಟದ ಸ್ಥಾನದಲ್ಲಿ ಇರುವ ವಸ್ತುಗಳು ನಿಸರ್ಗದ ಅಂಧ ಮತ್ತು ಯಾಂತ್ರಿಕ ಶಕ್ತಿಗಳು, ವಾಸ್ತುಶಿಲ್ಪವು ಒಂದು ಕಲೆ, ವಾಸ್ತುಶಿಲ್ಪವು ಜಡ ವಿಶ್ವದಲ್ಲಿ ಅಭಿವ್ಯಕ್ತಗೊಂಡ ಸಾಮಾನ್ಯ ಭಾವಗಳನ್ನು ಸ್ವಾಧೀನಪಡಿಸಿಕೊಂಡು ಅಂದಗೊಳಿಸುತ್ತದೆ, ಭೌತ ವಸ್ತುವಿನ ಧರ್ಮಗಳಾದ ಸಂಬಂಧತೆ, ಗುರುತ್ವ, ಗಡುಸುತನ, ಸ್ರಾವ, ಮತ್ತು ಬೆಳಕಿನ ಪ್ರತಿಫಲಗಳನ್ನು ಅರಿಯುತ್ತದೆ, ವಾಸ್ತವ ಕಲೆಯು ಆದು ಭೌತ ಶಕ್ತಿಗಳನ್ನು ಮತ್ತು ಧರ್ಮಗಳನ್ನು ಪರಿಪೂರ್ಣ ಸಂಗತ ಮತ್ತು ಸಮತೋಲದಲ್ಲಿ ಪ್ರಕಟಿಸುವ ಸಫಲತೆಗೆ ಅನುಸಾರವಾಗಿ ಸೌಂದರ್ಯವನ್ನು ನಿರ್ಮಿಸುತ್ತದೆ. ವಾಸ್ತುಶಿಲ್ಪದ ಸೌಂದರ್ಯದ ರಹಸ್ಯ ವಸ್ತುಗಳ ಸಮಸ್ಥಿತಿ.

ವಾಸ್ತುಶಿಲ್ಪಕ್ಕೆ ಒಂದು ಹೆಜ್ಜೆ ಮೇಲೆ ಇರುವುದು ಭೂದೃಶ್ಯ ಚಿತ್ರಕಲೆ. ಇದು ಕೂಡ ಜಡ ಜಗತ್ತಿನ ಹಿನ್ನೆಲೆ ಇರುವ ರೂಪಗಳನ್ನು ಮತ್ತು ತತ್ತ್ವಗಳನ್ನು ಪ್ರಕಾಶಪಡಿಸುತ್ತದೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(2) **ವರ್ಣಚಿತ್ರ ಮತ್ತು ಶಿಲ್ಪಕಲೆ :** ವರ್ಣಚಿತ್ರ ಮತ್ತು ಶಿಲ್ಪ ಉನ್ನತ ದರ್ಜೆಯ ಕಲೆಗಳು, ಪ್ರಾಣಿಗಳ ವರ್ಣಚಿತ್ರ ಮತ್ತು ಶಿಲ್ಪ ಚಿತ್ರಗಳು ಸಂಕಲ್ಪವನ್ನು ಅದರ ವಿಶಿಷ್ಟ ಮತ್ತು ತೀವ್ರ ಲಕ್ಷಣಗಳ ಮುಖೇನ ನಿರ್ಬಂಧ ಮತ್ತು ಆಕೃತಿಯ ರೀತಿಯಲ್ಲಿ ಪ್ರಕಾಶ ಪಡಿಸುತ್ತವೆ, ಈ ಕಲೆಗಳು ವೈಯಕ್ತಿಕವಲ್ಲದ ಪ್ರಾಣಿವರ್ಗವ ಸಾಮಾನ್ಯ ಲಕ್ಷಣಗಳನು ಪ್ರದರ್ಶಿಸುತ್ತವೆ, ಆದರೆ ಐತಿಹಾಸಿಕ ವರ್ಣ ಚಿತ್ರ ಮತ್ತು ಚಿತ್ರಗಳು ವ್ಯಕ್ತಿಗಳ ವಿಶೇಷಶೀಲ ಮತ್ತು ವರ್ಗ ಲಕ್ಷಣಗಳನ್ನು ಎರಡೂ ಬಯಲುಗೊಳಿಸುತ್ತವೆ, ಶಿಲ್ಪಕಲೆ ಮಾನವನ ಬಾಹ್ಯ ಸೌಂದರ್ಯ ಮತ್ತು ಲಾವಣ್ಯಗಳನ್ನು ಹಿಡಿಯಬಲ್ಲದು, ಆಂತರಿಕ ಸತ್ವ ಮತ್ತು ಶೀಲಗಳನ್ನು ತೃಪ್ತಿದಾಯಕವಾಗಿ ಚಿತ್ರಿಸಲಾರದು, ವರ್ಣಕಲೆ ಭಾವಚಿತ್ರದ ಮೂಲಕ ವ್ಯಕ್ತಿಯ ವಿಶಿಷ್ಟ ಶೀಲ ಮತ್ತು ಸಾಮಾನ್ಯ ತತ್ತ್ವಗಳನ್ನು ತನ್ನ ಇತಿಮಿತಿಗಳಲ್ಲಿ ಚಿತ್ರಿಸಬಲ್ಲದು,

(3) **ಕಾವ್ಯ ಮತ್ತು ಸಂಗೀತ :** ಕಾವ್ಯವು ಮಾನವನ ಸಾಮಾನ್ಯ ಭಾವವನ್ನು ಅದರ ಎಲ್ಲಾ ಅಂಗಗಳಲ್ಲಿ ಬಿಂಬಿಸುತ್ತದೆ. ಮತ್ತು ಅದು ತನ್ನ ನಿರೂಪಣೆಗಳಲ್ಲಿ ಮಿಕ್ಕ ಸಾಮಾನ್ಯಗಳನ್ನು ಕೂಡ ರೂಪಿಸುತ್ತದೆ. ದುರಂತ ಕಾವ್ಯವು ಉತ್ಕೃಷ್ಟವಾದದ್ದು, ರುದ್ರಕಾವ್ಯದಿಂದ ನಾವು ನಿಕಟವಾಗಿ ಮತ್ತು ನೇರವಾಗಿ ಸಂಕಲ್ಪದ ಅಂಧತ್ವವನ್ನು ಅನುಭವಿಸುತ್ತೇವೆ,

ಸಂಗೀತವು ಶೋಪನ್‌ಹಾರನ ಅಭಿಮತದಲ್ಲಿ ಅಸದೃಶ್ಯ ಮತ್ತು ಅಪೂರ್ವ ಕಲೆ ಮಿಕ್ಕ ಕಲೆಗಳು ಸಾಮಾನ್ಯ ಭಾವಗಳನ್ನು ಬಿಂಬಿಸಿದರೆ, ಸಂಗೀತವು ಸಾಮಾನ್ಯ ಭಾವಗಳನ್ನು ಭೇದಿಸಿಕೊಂಡು ಹೋಗಿ ನೇರವಾಗಿ " ಪರಮ ಸಂಕಲ್ಪ " ದ ಸ್ವರೂಪವನ್ನು ನಿರುಪಿಸುತ್ತದೆ. ಮಿಕ್ಕ ಕಲೆಗಳು ಅನುಕರಣಗಳ ಅನುಕರಣಗಳಾದರೆ, ಸಂಗೀತವು ಸಂಕಲ್ಪದ ನೇರ ಅನುಕರಣ ಏಕೆಂದರೆ, ಸಂಗೀತ ಕಲೆ ಒಂದೆ ಮಾತ್ರ, ಸಂಕಲ್ಪದೊಂದಿಗೆ ನೇರ, ನಿಕಟ ಮತ್ತು ವಿಶೇಷ ಸಂಬಂಧವನ್ನು ಹೊಂದಿರುತ್ತದೆ, ಆದ್ದರಿಂದ ಅನೇಕ ಸಂಗೀತಕಾರರು ಶೋಪನ್‌ಹಾರನ ಅನುಯಾಯಿಗಳಾದರು,

ವಿಶ್ವವು, ಅಂಧಸಂಕಲ್ಪ ಶಕ್ತಿಯ ಅನುಕರಣೆಯಾಗಿದ್ದು, ಅತ್ಯಂತ ನಿಕೃಷ್ಟವಾಗಿರುತ್ತದೆ. ಅದು ಕಲಹ, ದ್ವೇಷಸ್ವಾರ್ಥತೆ, ದುಃಖ ನೋವುಗಳ ಒಂದು ತಾಣ. ಮಾನವನ ಬಾಳು ಒಂದು ಗೋಳು, ಬಾಳು ನಲಿವುಗಿಂತಲೂ ಹೆಚ್ಚು ನೋವನ್ನು ಹೊಂದಿದೆ. ಅದು ಅವಶ್ಯಕತೆ ಮತ್ತು ಹೆಣಗಾಟಗಳ ಮಧ್ಯ ಹೊಯ್ದಾಡುತ್ತಿರುತ್ತದೆ. ಆದರೆ ಅದು ಎಂದಿಗೂ ಪರಿಪೂರ್ಣ ನೆಮ್ಮದಿಯನ್ನು ಪಡೆಯಲಾರದು. ಕಲೆಯು ಮಾತ್ರ ಮಾನವನನ್ನು ಮುಕ್ತಗೊಳಿಸಿ ವಿಶ್ರಾಂತಿ ಒದಗಿಸುತ್ತದೆ, ಅದು ಅಲ್ಪಕಾಲಿಕ ಮತ್ತೇ ಅವಶ್ಯಕತೆಗಳಿಂದ ತುಡಿತ ಮತ್ತು ನೋವು ಹೀಗೆ ಈ ಕ್ರಿಯೆ ನಿರಂತರವಾಗಿ ಮುಂದುವರಿಯುವದು, ಹಳೆ ನೋವುಗಳು ಮಾಯವಾಗಿ ಹೊಸ ನೋವು ಆಗಮಿಸುವವು ಆದ್ದರಿಂದ ಅನಸ್ತಿತ್ವ ಅಸ್ತಿತ್ವಕ್ಕಿಂತ ಶ್ರೇಷ್ಟ " ಎಂಬ ಹಳೆಯಗಾದೆ ಮಾತು ಶೋಪನ್‌ಹಾರನಿಗೆ ಸತ್ಯವೆನಿಸುತ್ತದೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೌಂದರ್ಯ ಮತ್ತು ಭವ್ಯತೆ :

ಸೌಂದರ್ಯ ಮತ್ತು ಭವ್ಯತೆಗಳಲ್ಲಿರುವ ಮೂಲ ವ್ಯತ್ಯಾಸಗಳನ್ನು ಶೋಪನ್ ಹಾರ್‌ಸು ಸೋದಾಹರಣವಾಗಿ ವಿವರಿಸುತ್ತಾನೆ, ನಮಗೆ ಹಿತಕರ ಮತ್ತು ಅನುಕೂಲವಾದ ಇಂದ್ರಿಯಗೋಚರ ವಿಷಯಗಳ ಚಿಂತನೆಗೆ ಸಂಬಂಧಿಸಿದ್ದೇ ಸೌಂದರ್ಯ ಪರಿಜ್ಞಾನ, ಅವುಗಳ ಸಾನಿಧ್ಯದಲ್ಲಿ ಯಾವ ಪ್ರಯತ್ನವಿಲ್ಲದೆ ಅನೈಚ್ಛಿಕವಾಗಿ ಚಿಂತನೆಯ ವಸ್ತುವಿನಲ್ಲಿ ನಾವು ಮಗ್ನರಾಗಿ ಬಿಡುತ್ತೇವೆ. ಉದಾಹರಣೆಗಾಗಿ ಒಂದು ನಿರ್ಜೀವ ವಸ್ತು ವಸ್ತು ಚಿತ್ರಣವು ಅಸಾಧಾರಣವಲ್ಲದ ವಸ್ತುಗಳನ್ನು ನಿರೂಪಿಸುತ್ತದೆ, ಪ್ರೇಕ್ಷಕನು ಕಲಾಕಾರನ ಹಾಗೆ ತನ್ನ ಸಂಕಲ್ಪ, ಬಯಕೆ ಮತ್ತು ಸ್ವಯತೆಗಳಿಂದ ಮುಕ್ತನಾಗಿ ಶಾಂತ ಚಿತ್ತತೆಯಲ್ಲಿ ಆ ಚಿತ್ರಗಳನ್ನು ಅವಲೋಕಿಸುತ್ತಾನೆ, ಹಾಗೆಯೇ ಭೂದೃಶ್ಯ ವರ್ಣಚಿತ್ರಗಳು ಸಾಮಾನ್ಯ ದೃಶ್ಯಗಳನ್ನು ನಿರೂಪಿಸಿದರು, ಪ್ರೇಕ್ಷಕನನ್ನು ಎಲ್ಲಾ ಬಂಧನಗಳಿಂದ ಮುಕ್ತಗೊಳಿಸುತ್ತವೆ. ಪ್ರೇಕ್ಷಕನು ಸಂಕಲ್ಪದೊಂದಿಗೆ ಹೋರಾಟದ ಅನಿಸಿಕೆ ಇಲ್ಲದೆ ಅವುಗಳನ್ನು ಅವಲೋಕಿಸಿ ಆನಂದಿಸುತ್ತಾನೆ, ಆದರೆ, ಭವ್ಯಾನುಭವವು ಐಚ್ಛಿಕ ಪ್ರಜ್ಞಾಪೂರ್ವಕ ಹೋರಾಟವನ್ನು ಅವಲಂಬಿಸಿದೆ, ಶುದ್ಧ ಧ್ಯಾನ ಸ್ಥಿತಿಯನ್ನು ಪಡೆಯಬೇಕಾದರೆ ನಮಗೆ ಪ್ರತಿಕೂಲವಿರುವ ಇಂದ್ರಿಯಗೋಚರ ವಿಷಯಗಳೊಡನೆ ಅಚಲ ಹೋರಾಟ ಮಾಡಿ ಅವುಗಳನ್ನು ಪರಾಭವಗೊಳಿಸಬೇಕಾಗುತ್ತದೆ, ಅವುಗಳ ಪರಾನುಭವದಿಂದ ನಾವು ಭವ್ಯತೆಯನ್ನು ಅನುಭವಿಸುತ್ತೇವೆ, ಉತ್ತರ ಅಮೇರಿಕದ ಮೌನವಾಗಿ ಹರಡಿದ ವಿಸ್ತಾರವಾದ ಹುಲ್ಲುಗಾವಲುಗಳನ್ನು ಅವಲೋಕಿಸಿದಾಗ ನಮಗೆ ಒಂದು ಮೆದುವಾದ ಭವ್ಯತೆಯ ಅನುಭವವಾಗುತ್ತದೆ. ಚಿತ್ತಲೆ ಬಂಡೆಗಳಿಂದ ತುಂಬಿದ ನಿರ್ಜೀವ ಮರಳುಗಾಡನ್ನು ಆಲೋಚಿಸಿದಾಗ ಭವ್ಯವು ಬಲವತ್ತರವಾಗಿ ತೋರುತ್ತದೆ, ಸಂಕಲ್ಪಶಕ್ತಿಯ ಆತಂಕ ಮತ್ತು ಬಯಕೆಗಳನ್ನು ಉಪೇಕ್ಷಿಸಿ, ಶಾಶ್ವತ ಭಾವಗಳ ಹಿನ್ನೆಲೆಯಲ್ಲಿ ಕಡ ಮಧ್ಯದಲ್ಲಿಯ ರಭಸವಾದ ಚಂಡಮಾರುತವನ್ನು ಧ್ಯಾನಿಸಿದಾಗ ನಮಗೆ ಗಾಢತರ ಭವ್ಯತೆಯ ಅನುಭವವಾಗುತ್ತದೆ, ಈ ಅನಂತ ವಿಶ್ವವನ್ನು ಕೇವಲ ನಮ್ಮ ಒಂದು ಕಲ್ಪನೆಯೆಂದು ಭಾವಿಸಿದಾಗ ಸಂಕಲ್ಪದ ಪ್ರವೃತ್ತಿಗಳ ಅಲ್ಪತೆಯಿಂದ ಕಲಕದೆ ನಾವು ಭವ್ಯವನ್ನು ಅನುಭವಿಸುತ್ತೇವೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೫ ಮಾನವಜನ್ಮ ಶ್ರೇಷ್ಠ :

● ಪ್ರೊ. ಪಿ. ಎಂ. ಸಿದ್ದಯ್ಯ.

ಸೃಷ್ಟಿಯ ಎಲ್ಲಾ ಜೀವರಾಶಿಗಳಲ್ಲಿ ಮಾನವ ಜನ್ಮ ಅತಿಶ್ರೇಷ್ಠವಾದುದು, ಅತಿ ಅಮೂಲ್ಯವಾದುದು. ಏಕೆ ? ಈ ಕೆಳಗಿನಂತೆ ಕಾರಣಗಳನ್ನು ನಾವು ತಿಳಿಯ ಬಹುದು,

1) ಮಾನವದೇಹ ಅತಿಸುಂದರ ಹಾಗೂ ಪರಿಪೂರ್ಣವಾದುದು :

ಮಾನವ ದೇಹವು (ರಚನಾತ್ಮಕ ದೃಷ್ಟಿಯಿಂದ) ಸೃಷ್ಟಿಯ ಉಳಿದೆಲ್ಲ ಜೀವರಾಶಿಗಳಿಗಿಂತ ಅತಿ ಸುಂದರ ಹಾಗೂ ಕಲಾತ್ಮಕವಾದುದು. ಅದರ ರುಂಡ ಭಾಗದಲ್ಲಿ : ಕಲಾತ್ಮಕವಾದ ಹಣೆ, ಕಣ್ಣು, ಕಿವಿ, ಮೂಗು, ಬಾಯಿ ದಂತಪಕ್ತಿ, ತುಟಿ, ಗಲ್ಲ, ಕೆನ್ನೆಗಳುಂಟು. ಚೆಲುವಿನ ಕೇಶರಾಶಿವುಂಟು. ಆದರ ಮುಂಡ ಭಾಗದಲ್ಲಿ : ಮೋಹಕವಾದ ಎದೆ, (ಕುಚ), ಹೊಟ್ಟೆ, ಬೆನ್ನು, ಸೊಂಟಗಳುಂಟು, ನಯವಾದ ಚರ್ಮದ ಹೊದಿಕೆವುಂಟು, ಅದರ ಕೈಕಾಲು ಭಾಗದಲ್ಲಿ : ಸುಂದರ ಹಾಗು ಬೆಡಗಿನ ಮಡಿಕೆಗಳುಳ್ಳ ಮುಂಗೈ, ಅಂಗೈ, ತೋಳು, ತೊಡೆ ಕೈಬೆರಳು, ಕಾಲ್ಬೆರಳು ಮೊಣಕೈ, ಮೊಣಕಾಲಗಳುಂಟು.

ಬಳಿಕ, ಮಾನವನು ಬೆಡಗಿನಿಂದ ತಿನ್ನುವ, ಕುಡಿವ, ಉಡುವ, ಸಿಂಗರಿಸಿ ಕೊಳ್ಳುವ ಅಳುವ, ನಗುವ, ಪ್ರೀತಿಸುವ, ಓದುವ, ಬರೆವ, ಓಡಾಡುವ, ಕೂಡ್ರುವ, ನಿಲ್ಲುವ, ಬಗ್ಗುವ, ಮಲಗುವ, ಏಳುವ, ಜಿಗಿದಾಡುವ, ನಾನಾತರದ ಆಟವಾಡುವ, ವ್ಯವಹಟಿಸುವ, ನಟಿಸುವ, ಹಾಡುವ, ಸಂಗೀತವಾದ್ಯಗಳನ್ನು ಬಾರಿಸುವ, ನರ್ತಿಸುವ, ಯೋಗಾಸನ ಮತ್ತು ಮುದ್ರೆಗಳನ್ನು ಹಾಕುವ, ದೈವವನ್ನು ಭಜಿಸುವ ಶೈಲಿಗಳು ಅತಿ ಸುಂದರ. ಈ ಸೊಗಸು ಅನ್ಯ ಜೀವರಾಶಿಗಳಿಗಿಲ್ಲ,

2. ಮಾನವನಿಗೆ ಮಾತನಾಡುವ ಶಕ್ತಿವುಂಟು :

ಸೃಷ್ಟಿಯ ಅನ್ಯ ಯಾವ ಜೀವರಾಶಿಗಳಿಗೂ (ಕ್ರಿಮಿ, ಕೀಟ, ಪಶು, ಪಕ್ಷಿ, ಪ್ರಾಣಿಗಳಿಗೆ) ಮಾತನಾಡುವ ಶಕ್ತಿಯಿಲ್ಲ. ಅವುಗಳಲ್ಲಿ ಕೆಲವು ಮೂಕ ಜೀವಿಗಳು, ಮೌನವಾಗಿಯೇ ಜೀವಿಸಿ ಸಾಯುತ್ತವೆ. ಮತ್ತೆಕೆಲವು ಸ್ವಲ್ಪ ಕೂಗಿ ಒದರಿ, ಶಬ್ದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಬಲ್ಲವು, ಆದರೆ ಮಾತನಾಡಲಾರವು. ಮನುಷ್ಯ ಮಾತ್ರ ಮಾತನಾಡುವ ಪ್ರಾಣಿ, ಸಂಸ್ಕೃತ, ಕನ್ನಡ, ಹಿಂದಿ, ತಮಿಳು, ತೆಲಗು, ಉರ್ದು, ಪಾರ್ಸಿ, ಮರಾಠಿ, ಇಂಗ್ಲಿಷ ಫ್ರೆಂಚ್, ಡಚ್, ಚೀನಿ, ಇತ್ಯಾದಿ ಸಹಸ್ರಾರು ಭಾಷೆಗಳಿಂದ ಮಾತನಾಡುತ್ತಾನೆ, ಅವನ ಭಾಷಾ ವೈಖರಿ ಅಮೋಘವಾದುದು, ಈ ಶಕ್ತಿ ಅನ್ಯ ಜೀವರಾಶಿಗಳಿಗಿಲ್ಲ.

3. ಮಾನವನಿಗೆ ಬರೆಯುವ ಶಕ್ತಿವುಂಟು :

ಸೃಷ್ಟಿಯ ಯಾವ ಜೀವರಾಶಿಗೂ ಬರೆಯುವ ಯೋಗ್ಯತೆಯಿಲ್ಲ, ಆದರೆ ಮಾನವ ಮಾತ್ರ ಬರೆಯುವ ಪ್ರಾಣಿ, ಸಂಸ್ಕೃತ, ಕನ್ನಡ, ಹಿಂದಿ, ಉರ್ದು, ತಮಿಳು, ತೆಲಗು, ಮರಾಠಿ, ಇಂಗ್ಲೀಷ, ಡಚ್, ಫ್ರೆಂಚ್, ಚೀನಿ ಇತ್ಯಾದಿ ಸಹಸ್ರಾರು ಭಾಷೆಗಳ ಲಿಪಿಯಿಂದ ಬರೆಯುತ್ತಾನೆ. ಈ ಮಾತುಗಾರಿಕೆ ಹಾಗೂ ಲೇಖನ ಶಕ್ತಿಯಿಂದ ತನ್ನ ಸುಖ-ದುಃಖಾದಿ ಅನುಭವಗಳನ್ನು ಹೇಳುತ್ತಾ ಬರೆಯುತ್ತಾ ಅನ್ಯರಿಗೆ ತಿಳಿಸಬಲ್ಲ, ಈ ಲೇಖನ ಅಥವಾ ಬರೆಯುವ ಶಕ್ತಿಯಿಂದ ಜಗತ್ತಿನಲ್ಲಿ ಅಪಾರವಾದ ವೈವಿಧ್ಯಮಯ ಗ್ರಂಥರಾಶಿ ನಿರ್ಮಾಣಗೊಂಡಿರುತ್ತದೆ. ಆದರಿಂದ ಜ್ಞಾನ ಪ್ರಸಾರವಾಗುತ್ತದೆ, ಈ ಶಕ್ತಿ ಅನ್ಯ ಜೀವರಾಶಿಗಳಿಗಿಲ್ಲ,

4. ಮಾನವನಿಗೆ ಅಪಾರ ಬುದ್ಧಿಶಕ್ತಿವುಂಟು :

ಮಾನವನಿಗೆ ಯಾವ ಜೀವರಾಶಿಗಳಿಗೆ ಇರದ ಅಪಾರ ಬುದ್ಧಿಶಕ್ತಿವುಂಟು. ಆ ಬುದ್ಧಿಶಕ್ತಿ ಬಲದಿಂದ ಅವನು ಭವ್ಯವಾದ ನಾಗರೀಕತೆ ಹಾಗೂ ಸಂಸ್ಕೃತಿಯನ್ನು ನಿರ್ಮಾಣ ಮಾಡಿಕೊಂಡಿರುತ್ತಾನೆ, ಉದಾಹರಣೆಗಾಗಿ : 1) ವೈವಿಧ್ಯಮಯ ಆಹಾರ, ಪಾನೀಯ, ವಸತಿ, ವಸ್ತ್ರಾಲಂಕಾರ, ಆಟಪಾಠ, ಉದ್ಯೋಗ ವ್ಯವಹಾರ, ಆಚಾರ ವಿಚಾರಗಳನ್ನು ಹೊಂದಿರುತ್ತಾನೆ, 2) ಸಾಹಿತ್ಯ, ಸಂಗೀತ ಶಿಲ್ಪ, ನೃತ್ಯ, ಚಿತ್ರಕಲೆ, ಜ್ಯೋತಿಷ್ಯ, ಗಣಿತ, ಕೃಷಿ, ವಾಣಿಜ್ಯ ಇತ್ಯಾದಿ ರಂಗಗಳಲ್ಲಿ ಅಪೂರ್ವ ಜ್ಞಾನಾರ್ಜನೆ ಪಡೆದಿರುತ್ತಾನೆ, 3) ಇಂದು ನಮ್ಮ ಮುಂದೆ ಪ್ರತ್ಯಕ್ಷವಾಗಿ ಕಾಣುವ ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನದ ಪ್ರಗತಿಯಂತು ಅತ್ಯದ್ಭುತವಾದುದು. ರೇಡಿಯೋ, ಟೆಲಿವಿಷನ್ ವಿದ್ಯುಚ್ಛಕ್ತಿ, ತಂತಿ, ಟೆಲಿಫೋನ, ಫ್ರಿಜ್, ಫ್ಯಾನು, ರೈಲು, ಮೋಟಾರು, ವಿಮಾನ ರಾಕೆಟ ರಾಡರ್. ವೈದ್ಯಕೀಯ ಔಷಧಿ ಹಾಗೂ ಸಲಕರಣೆಗಳು ನಾನತರದ ಫ್ಯಾಕ್ಟರಿ ಯಂತ್ರಗಳು, ಕಂಪ್ಯೂಟರ್ ಯಂತ್ರ ಇತ್ಯಾದಿಗಳು ಮಾನವನ ಬುದ್ಧಿಶಕ್ತಿಗೆ ಸಾಕ್ಷಿಯಾಗಿ ನಿಂತಿವೆ. ಈ ಶಕ್ತಿ ಅನ್ಯ ಜೀವರಾಶಿಗಳಿಗಿಲ್ಲ,

5. ಮಾನವನಿಗೆ ವಿಶೇಷ ಸಂಕಲ್ಪಶಕ್ತಿ ಮತ್ತು ಸಾಧನ ಶಕ್ತಿವುಂಟು :

ಮಾನವನಿಗೆ ವಿಶೇಷತರದ ಸಂಕಲ್ಪಶಕ್ತಿ ಹಾಗೂ ಸಾಧನಾ ಶಕ್ತಿವುಂಟು. ಅವುಗಳ ಬಲದಿಂದ ಅವನು ಲೌಕಿಕಮತ್ತು ಪಾರಮಾರ್ಥಿಕ ರಂಗಗಳಲ್ಲಿ ಪ್ರಯತ್ನ ಶೀಲನಾಗಿ ತನ್ನ ಇಷ್ಟಾರ್ಥಗಳನ್ನು ಪಡೆದುಕೊಳ್ಳಬಲ್ಲ, ಜೀವನ ಗುರಿಯನ್ನು ತಲುಪ ಬಲ್ಲ, ಉದಾಹರಣೆಗೆ : ಕೃಷಿ ಸಾಧನೆಯಿಂದ ಕೃಷಿಕನಾಗಬಲ್ಲ. ವಾಣಿಜ್ಯ ಸಾಧನೆಯಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ಯಾಪಾರಿಯಾಗಬಲ್ಲ. ವಿಜ್ಞಾನ ಸಾಧನೆಯಿಂದ ವಿಜ್ಞಾನಿಯಾಗಬಲ್ಲ, ಧರ್ಮ ಸಾಧನೆಯಿಂದ ಧರ್ಮವಂತನಾಗಬಲ್ಲ (ಇತ್ಯಾದಿ), ಈ ಶಕ್ತಿ ಅನ್ಯ ಜೀವರಾಶಿಗಳಿಗಿಲ್ಲ,

6. ಮಾನವ ಕರ್ಮ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ :

ಮಾನವನಿಗೆ ಕರ್ಮಾಧಿಕಾರ (ಕರ್ಮಸ್ವಾತಂತ್ರ್ಯ) ಉಂಟು, ಅಂದರೆ ಉತ್ತಮ ಕರ್ಮಗಳನ್ನು ಮಾಡಿ ಉನ್ನತಸ್ಥಾನ ಪಡೆಯಬಲ್ಲ ಮತ್ತು ನೀಚ ಕರ್ಮಗಳನ್ನು ಮಾಡಿ ಅಧೋಗತಿಗೆ ಪಾಲಾಗಬಲ್ಲ, ಈ ಕರ್ಮಸ್ವಾತಂತ್ರ್ಯತೆ ಬೇರಾವ ಜೀವರಾಶಿಗಳಿಗೆ ಇರುವುದಿಲ್ಲ,

7. ಮಾನವನಿಗೆ ಅವಸ್ಥಾತ್ರಯಗಳ ಅನುಭವವುಂಟು :

ದೇವತೆಗಳಿಗೆ ಕೇವಲ ಜಾಗ್ರಾವಸ್ಥೆ ಒಂದೇ ಉಂಟು, ಸ್ಥಾವರ ಜೀವರಾಶಿಗಳಿಗೆ ಕೇವಲ ಸುಷುಪ್ತಾವಸ್ಥೆ ಒಂದೇ ಉಂಟು, ಪಶುಜೀವರಾಶಿಗೆ ವಿಶೇಷರೂಪದ ಸ್ವಪ್ನಾವಸ್ಥೆಯುಂಟು, (ಸಾಮಾನ್ಯಜಾಗ್ರ) ಆದರೆ ಮಾನವನಿಗೆ ಮಾತ್ರ ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿಗಳೆ ಮೂರು ಅವಸ್ಥೆಗಳ ಅನುಭವವುಂಟು, ಇದರಿಂದ ಆತ್ಮನು ಅವಸ್ಥಾತ್ರಯ ಸಾಕ್ಷಿಯೆಂದು ತಿಳಿಯಲು ಬರುತ್ತದೆ,

8. ಮಾನವನಿಗೆ ಯೋಗಸಮಾಧಿ ಅನುಭವಿಸುವ ಶಕ್ತಿವುಂಟು.

ಮಾನವನಿಗೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಮತ್ತು ಸಮಾಧಿಗಳೆಂಬ ಅಷ್ಟಾಂಗ ಯೋಗಸಾಧನೆಯಿಂದ ಯೋಗಯೆನಿಸಿ ಅಪೂರ್ವವಾದ ಸಮಾಧಿಸುಖವನ್ನು ಅನುಭವಿಸುವ ಶಕ್ತಿವುಂಟು, ಈ ಶಕ್ತಿ ಅನ್ಯ ಜೀವರಾಶಿಗಳಿಗಿಲ್ಲ,

9. ಮಾನವನಿಗೆ ಸಿದ್ಧಿಗಳನ್ನು ಪಡೆದುಕೊಳ್ಳುವ ಶಕ್ತಿವುಂಟು :

ಮಾನವನಿಗೆ ಮಂತ್ರ, ಜಪತಪಾದಿಗಳ ಸಾಧನಾಬಲದಿಂದ ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವಗಳೆಂಬ ಅಷ್ಟ ಮಹಾಸಿದ್ಧಿಗಳನ್ನು ಪಡೆದುಕೊಂಡು "ಸಿದ್ಧಿಪುರುಷ" ನೆನಿಸಿಕೊಳ್ಳುವ ಶಕ್ತಿವುಂಟು, ಈ ಶಕ್ತಿ ಅನ್ಯ ಜೀವರಾಶಿಗಳಿಗಿಲ್ಲ,

10. ಮಾನವನಿಗೆ ಕುಂಡಲಿನಿ ಶಕ್ತಿಯನ್ನು ಜಯಿಸುವ ಶಕ್ತಿವುಂಟು :

ಮಾನವನಿಗೆ ತನ್ನ ದೇಹದಲ್ಲಿರುವ ಮೂಲಾಧಾರ, ಸ್ವಾಧಿಷ್ಠಾನ ಮಣಿಪೂರಕ, ಅನಾಹತ, ವಿಶುದ್ಧಿ, ಆಗ್ನೇಯವೆಂಬ ಷಟಚಕ್ರಗಳ ಆರೋಹಣ ಸಾಧನೆಯಿಂದ "ಕುಂಡಲಿನಿಶಕ್ತಿ" ಯನ್ನು ಜಯಿಸುವ ಶಕ್ತಿವುಂಟು, ಈ ಶಕ್ತಿ ಅನ್ಯ ಜೀವರಾಶಿಗಳಿಗಿಲ್ಲ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

11. ಮಾನವನಿಗೆ ಲೋಕಾಂತರ ಗಮನಮಾಡುವ ಶಕ್ತಿವುಂಟು :

ಮಾನವನಿಗೆ ಯಜ್ಞ ಯಾಗಾದಿ ಸತ್ಕರ್ಮಗಳ ಆಚರಣೆಯಿಂದ ಅಥವಾ ಆಧುನಿಕ ವಿಜ್ಞಾನ ಶಕ್ತಿಯಿಂದ ಲೋಕಾಂತರ ಗಮನಮಾಡುವ ಶಕ್ತಿವುಂಟು. ಈ ಶಕ್ತಿ ಅನ್ಯ ಜೀವರಾಶಿಗಳಿಗಿಲ್ಲ.

12. ಮಾನವನಿಗೆ ಮೋಕ್ಷಪಡೆವ ಶಕ್ತಿವುಂಟು :

ಮಾನವನಿಗೆ ಭಕ್ತಿ–ಜ್ಞಾನ–ವೈರಾಗ್ಯ ಸಾಧನೆಯಿಂದ ಶಿವಕೃಪೆ ಹಾಗೂ ಗುರುಕೃಪೆಯನ್ನು ಪಡೆದುಕೊಂಡು ಪರಮಪುರುಷಾರ್ಥವೆನಿಸಿದ "ಮೋಕ್ಷ" ವನ್ನು ಪಡೆಯುವ ದಿವ್ಯಶಕ್ತಿವುಂಟು, ಅಂದರೆ ದುಸ್ತರವಾದ ಜನನ–ಮರಣ ಸಂಸಾರ ಬಂಧನದಿಂದ "ಬಿಡುಗಡೆ" ಹೊಂದುವ ಸಾಮರ್ಥ್ಯವುಂಟು. ಈ ಸಾಮರ್ಥ್ಯ ಅನ್ಯ ಜೀವರಾಶಿಗಳಿಗಿಲ್ಲ.

ಈ ಕಾರಣಗಳಿಂದ ಮಾನವ ಜನ್ಮ ಎಲ್ಲಾ ಜೀವರಾಶಿಗಳಲ್ಲಿ ಮಿಗಿಲಾದುದು, ಆದ್ದರಿಂದಲೇ ವೇದೋಪನಿಷತ್ತುಗಳು, ಋಷಿ–ಮುನಿಗಳು ಮಾನವ ಜನ್ಮವನ್ನು ಕೊಂಡಾಡಿರುತ್ತಾರೆ.

1) ಇದಂ ಶರೀರಂ ಕಾಂತೇಯ ಕ್ಷೇತ್ರಮಿತ್ಯಭಿಧೀಯತೆ (ಗೀತೆ)
2) ದುರ್ಲಭೋ ಮಾನುಷೋ ದೇಹೋ ದೇಹಿನಾಂ (ಭಾಗವತ)
3) ಅಶ್ರುಫುಲ್ ಮಖ್ಲುಖಾತ್ (ಕೊರಾನ್)
4) ಜಂತೂನಾಂ ನರಜನ್ಮ ದುರ್ಲಭಂ (ಶಂಕರಾಚಾರ್ಯ)
5) ನರಜನ್ಮದಿಂದದೊಳು ಮಿಗಿಲುಂಟೆ (ನಿಜಗುಣಶಿವಯೋಗಿ)
6) ಕೂಡಲಸಂಗಮದೇವ ನೊಲಿಸಲು ಬರ ಪ್ರಸಾದಕಾಯ (ಬಸವಣ್ಣ)
7) ಮಾನವಜನ್ಮ ದೊಡ್ಡದು : ಇದನು ಹಾನಿಮಾಡಲುಬೇಡಿ ಹುಚ್ಚಪ್ಪಗಳಿರಾ (ಪುರಂದರದಾಸ)

ಮಾನವ ಜನ್ಮದ ಗುರಿ

ಜಗತ್ತಿನ ಪ್ರಾಪಂಚಿಕ ಜನರನ್ನು ಕುರಿತು "ಮನುಷ್ಯನಾಗಿ ಹುಟ್ಟಿದಮೇಲೆ ಅವನು ಏನನ್ನು ಮುಖ್ಯವಾಗಿ ಸಾಧಿಸಬೇಕು ? ಮಾನವಜನ್ಮದ ಮುಖ್ಯ ಗುರಿಯೇನು"? ಎಂಬುದಾಗಿ ಪ್ರಶ್ನೆಮಾಡಿದರೆ ಅವರು ಸಹಜವಾಗಿ ಉತ್ತರಿಸುವುದೇನೆಂದರೆ ಮನುಷ್ಯನು ಬಾಲ್ಯದಲ್ಲಿ ಆಟಪಾಟಗಳೊಂದಿಗೆ ವಿದ್ಯಾ ಸಂಪಾದನೆಮಾಡಬೇಕು, ಯೌವ್ವನದಲ್ಲಿ ಉದ್ಯೋಗ ವ್ಯವಹಾರಗಳಿಂದ ಅನ್ನ, ವಸ್ತ್ರಗಳನ್ನು ಸಂಪಾದಿಸಬೇಕು. ಅಧಿಕಾರ ಕೀರ್ತಿಗಳನ್ನು ಸಂಪಾದನೆ ಮಾಡಬೇಕು. ಲಗ್ನವಾಗಿ ಸತಿಸುತರಾದಿಗಳೊಂದಿಗೆ, ಬಂಧು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಿತ್ರರೊಂದಿಗೆ ಸುಖವಾಗಿ ಬಾಳಬೇಕು. ವೃದ್ಧಾಪ್ಯದಲ್ಲಿ ಮರಣಬಂದಾಗ ಸಾಯಬೇಕು. ಒಟ್ಟಾರೆ ಮನುಷ್ಯ ವಿಷಯಭೋಗದಿಂದ ಸುಖವಾಗಿ ಬಾಳಿ ಸಾಯಬೇಕು. ಇದೇ ಮಾನವನ ಗುರಿ ಅಥವಾ ಕರ್ತವ್ಯವಾಗಿರುತ್ತದೆ ".

ಆದರೆ ಪರಮಾರ್ಥ ದೃಷ್ಟಿಯಿಂದ ನೋಡಿದಾಗ ಈ ಉತ್ತರ ಅಯೋಗ್ಯವಾಗಿರುತ್ತವೆ. ಅಕ್ಷಮ್ಯ ಅಪರಾಧವಾಗಿರುತ್ತದೆ, ಏಕೆಂದರೆ ಅಮೂಲ್ಯವಾದ ಮಾನವ ಜನ್ಮವನ್ನು ಕೇವಲ ಅನ್ನ ವಸ್ತ್ರಾದಿ ವಿಷಯುಗಳ ಪ್ರಾಪ್ತಿಗಾಗಿ ಉಪಯೋಗಿಸಿ ವ್ಯರ್ಥ ಕಳೆಯುವುದಾದರೆ ಉಳಿದ ಕ್ರಿಮಿ, ಕೀಟ, ಪಶು, ಪ್ರಾಣಿಗಳಿಗೂ ಮತ್ತು ಮನುಷ್ಯನಿಗೂ ಏನು ವ್ಯತ್ಯಾಸ ? ಅವು ಭೂಮಿಯ ಮೇಲೆ ಹುಟ್ಟಿ, ಬೆಳೆದು, ತಿರುಗಾಡಿ ಹೊಟ್ಟೆ ತುಂಬಿಕೊಂಡು, ಗಂಡು ಹೆಣ್ಣುಕೂಡಿ ಮಕ್ಕಳನ್ನು ಪಡೆದು, ಸುಖ–ದುಃಖವನ್ನು ಅನುಭವಿಸುತ್ತಾ ಒಂದುದಿನ ಸತ್ತುಹೋಗುತ್ತದೆ. ಮನುಷ್ಯನೂ ಸಹ ಭೂಮಿಯ ಮೇಲೆ ಹುಟ್ಟಿ, ಬೆಳೆದು, ಯಾವುದೋ ಉದ್ಯೋಗದಿಂದ ಹೊಟ್ಟೆತುಂಬಿಕೊಂಡು, ಗಂಡು ಹೆಣ್ಣು ಕೂಡಿ ಮಕ್ಕಳನ್ನು ಪಡೆದು ಸುಖ ದುಃಖಗಳನ್ನು, ತಾಪತ್ರಯಗಳನ್ನು ಅನುಭವಿಸುತ್ತಾ ಒಂದುದಿನ ಸತ್ತು ಹೋಗುತ್ತಾನೆ. ಆದ್ದರಿಂದ ಉಳಿದ ಜೀವರಾಶಿಗೂ ಮಾನವನಿಗೂ ಏನು ವ್ಯತ್ಯಾಸವಿಲ್ಲದಂತಾಯಿತು, ಅವನು ಸಹ ಬಾಲವಿಲ್ಲದೆ ಎರಡೂ ಕಾಲಿನ ಪಶುವೇ ಆಗುತ್ತಾನೆ,

ಹಾಗಾದರೆ ಮನುಷ್ಯ ಯಾವ ಗುರಿಯನ್ನು ಸಾಧಿಸಬೇಕು ?

ಉತ್ತರ : ಮನುಷ್ಯನು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಅಮುಖ್ಯ ಪುರುಷಾರ್ಥವೆನಿಸಿದ ಧರ್ಮ, ಅರ್ಥ ಕಾಮಗಳ ಸಂಪಾದನೆಗಾಗಿ ಬದುಕದೆ (ಅಂದರೆ ಕೇವಲ, ಅನ್ನ, ವಸ್ತ್ರ, ಗೃಹ, ಧನ ಪತಿ ಸುತಾದಿಗಳನ್ನು ಸಂಪಾದಿಸುವ ಗುರಿಯಿಂದ ಬದುಕದೆ, ಕೇವಲ ಭೋಗವಿಷಯುಗಳಿಗಾಗಿ ಜೀವಿಸದೆ) ಪರಮಾರ್ಥ ಜೀವನವನ್ನು ನಡೆಸಿ, ಪರಮ ಪುರುಷಾರ್ಥವೆನಿಸಿದ "ಮೋಕ್ಷ" ವನ್ನು ಪಡೆಯಬೇಕು, ಅಂದರೆ ಅನಂತ ದುಃಖಗಳಿಂದ ಕೂಡಿದ ಜನನ–ಮರಣ ಸಂಸಾರ ಬಂಧನದಿಂದ ಬಿಡುಗಡೆ ಹೊಂದಬೇಕು. ಭವಹರಣ ಮಾಡಬೇಕು, ಅತ್ಯಂತ ದುಃಖನಿವೃತ್ತಿ ಹಾಗೂ ಪರಮಾನಂದ ಪ್ರಾಪ್ತಿರೂಪ ಸದ್ಗತಿಯನ್ನು ಹೊಂದಬೇಕು, ಇದೇ ಮಾನವ ಜನ್ಮದ ಗುರಿಯಾಗಿರುತ್ತದೆ. ಮತ್ತು ಮುಖ್ಯ ಕರ್ತವ್ಯವಾಗಿರುತ್ತದೆ,

ಆತ್ಮಲಾಭಾತ್ ಪರಂ ಲಾಭೋ ನ ವಿದ್ಯತೆ : ಎಂಬಂತೆ ಮೋಕ್ಷ ಲಾಭಕ್ಕಿಂತ ಜಗತ್ತಿನಲ್ಲಿ ಬೇರೊಂದು ಲಾಭವಿಲ್ಲ. ಮೋಕ್ಷ ಸಂಪತ್ತಿಗಿಂತ ಮಿಗಿಲಾದ ಮತ್ತೊಂದು ಸಂಪತ್ತಿಲ್ಲ. ಆ ಮೋಕ್ಷ ಸಂಪತ್ತು ಕೇವಲ ಮಾನವನಿಂದ ಮಾತ್ರ ದೊರಕುವಂಥದ್ದು, ಉಳಿದ ಜೀವರಾಶಿಗಳಿಗೆ ದೊರೆಯುವುದಿಲ್ಲ, ಆದ್ದರಿಂದ ಮಾನವರು ದುರ್ಲಭವಾಗಿ ದೊರೆತಿರುವ ಈ ದೇಹದಿಂದ ಮೋಕ್ಷವನ್ನು ಪಡೆಯಬೇಕು, ಈ ಮಾನವದೇಹವೆಂಬ ಅಪೂರ್ವ ನಾವೆಯಿಂದ ಘೋರವಾದ ಭವಸಾಗರವನ್ನು ದಾಟಬೇಕು, ಮಾನವ ಜನ್ಮವನ್ನು ಸಾರ್ಥಕಗೊಳಿಸಬೇಕು, ಈ ರೀತಿ ಮಾನವ ಜನ್ಮದ ಗುರಿ ಮೋಕ್ಷ ಸಂಪಾದನೆಯಾಗಿರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೋಕ್ಷ ಪಡೆಯದೆ ಹಾಗೆ ಸತ್ತರೆ ಏನಾಗುತ್ತದೆ ?

ಉತ್ತರ : ಮನುಷ್ಯ ಕರ್ಮಾನುಗುಣವಾಗಿ ಘೋರತರವಾದ ಜನನ ಮರಣವೆಂಬ ಭವಚಕ್ರದಲ್ಲಿ ಸಿಲುಕುತ್ತಾನೆ, ತರು, ಮರ, ಪಶು, ಪಕ್ಷಿ, ಪ್ರಾಣಿ, ಕ್ರಿಮಿ ಕೀಟಾದಿ ನೀಚಯೋನಿಗಳಲ್ಲಿ ಹುಟ್ಟಿ-ಹುಟ್ಟಿ ಸಾಯಬೇಕಾಗುತ್ತದೆ, ಪ್ರತಿ ಜನ್ಮದಲ್ಲೂ ಸಹಿಸಲು ಸಾಧ್ಯವಾದ ಗರ್ಭದುಃಖ, ಜನನ-ದುಃಖ, ಮರಣ ದುಃಖಗಳನ್ನು ಅನುಭವಿಸಬೇಕಾಗುತ್ತದೆ, ನಂತರ ಸಮುದ್ರದಲ್ಲಿ ಅಲೆಗಳು ನಿರಂತರವಾಗಿ ಬರುವಂತೆ, ಪ್ರತಿಜನ್ಮದಲ್ಲೂ ಅಧ್ಯಾತ್ಮ ದುಃಖ, ಅಧಿಭೂತ ದುಃಖಗಳನ್ನು (ತಾಪತ್ರಯಗಳನ್ನು) ಅನುಭವಿಸಬೇಕಾಗುತ್ತದೆ, ಬಳಿಕ, ಕಾಮಕ್ರೋಧಾದಿ ಅರಿಷಡ್ವರ್ಗಗಳ ಬಾಧೆಯನ್ನು ಅನುಭವಿಸಬೇಕಾಗುತ್ತದೆ, ಹಸಿವು-ತೃಷೆಗಳ ಬಾಧೆ, ಕಾಯಕರಣಂಗಳ ಬಾಧೆ, ಸಪ್ತವ್ಯಸನಂಗಳ ಬಾಧೆಯನ್ನು ಅನುಭವಿಸಬೇಕಾಗುತ್ತದೆ. ಈ ರೀತಿ ಜನ್ಮಾಂತರಗಳಲ್ಲಿ ದುಃಖದಲ್ಲಿಯೇ ಬೆಳೆದು, ದುಃಖದಲ್ಲಿಯೇ ಸಾಯಬೇಕಾಗುತ್ತದೆ, ದೊಡ್ಡ ಅನರ್ಥವೇ ಆಗುತ್ತದೆ. ಇಷ್ಟೆಲ್ಲ ಘೋರತರ ದುಃಖದಿಂದ ಭವಮಾಲೆಯಿಂದ ಪಾರಾಗುವ ಸಲುವಾಗಿ ಮುಕ್ತಿಯನ್ನು ಪಡೆಯಬೇಕು,

ಮಾನವಜನ್ಮ ಮೋಕ್ಷಪ್ರಾಪ್ತಿಯ ಒಂದು ಸುಸಮಯ,

ಜಗತ್ತಿನಲ್ಲಿ ಕೆಲವು ಕಾರ್ಯಗಳನ್ನು ಅವುಗಳ ಸುಸಮಯ (ಹದ) ನೋಡಿ ಮಾಡಬೇಕಾಗುತ್ತದೆ. ಆ ಸುಸಮಯವನ್ನು ಕಳೆದುಕೊಂಡರೆ ಅದು ಮತ್ತೆ ಸಿಗುವುದಿಲ್ಲ, ಆ ಕಾರ್ಯಗಳಾಗುವುದಿಲ್ಲ, ಆದರಿಂದ ಅಪಾರ ನಷ್ಟವುಂಟಾಗುತ್ತದೆ,

ಉದಾಹರಣೆಗಾಗಿ : 1. ರೈತನು ಗಾಳಿಬಿಟ್ಟಾಗ ತನ್ನ ಕಾಳನ್ನು ತೂರಿಕೊಳ್ಳಬೇಕು, ಕಾರಣಾಂತರದಿಂದ ಆ ಸುಸಮಯವನ್ನು ಕಳೆದುಕೊಂಡರೆ ಅದು ಮುಂದೆ ಸಿಗುವುದಿಲ್ಲ. ಅವನಿಗೆ ಕಷ್ಟ-ನಷ್ಟಗಳುಂಟಾಗುತ್ತವೆ. ಆದ್ದರಿಂದ ಗಾಳಿಬಿಟ್ಟ ಸುಸಮಯವನ್ನು ಉಪಯೋಗ ಮಾಡಿಕೊಳ್ಳಬೇಕು, ಉಳಿದ ಕಾರ್ಯವನೆಲ್ಲ ಬದಿಗಿಟ್ಟು ಕಾಳನ್ನು ತೂರಿಕೊಳ್ಳಬೇಕು. 2. ಮತ್ತೆ ರೈತನು ಹೊಲ ಬಿತ್ತಣಿಕೆಯ ಹದ ಹೊಂದಿದಾಗಲೇ ಬಿತ್ತುವ ಕೆಲಸವನ್ನು ಮಾಡಬೇಕು, ಕಾರಣಾಂತರದಿಂದ ಆ ಸುಸಮಯವನ್ನು ಕಳೆದುಕೊಂಡರೆ ಅದು ಮುಂದೆ ಸಿಗುವುದಿಲ್ಲ, ಅವನಿಗೆ ಕಷ್ಟ ನಷ್ಟಗಳುಂಟಾಗುತ್ತವೆ, ಆದ್ದರಿಂದ ಉಳಿದ ಕಾರ್ಯಗಳನ್ನೆಲ್ಲಾ ಬದಿಗಿಟ್ಟು ಬಿತ್ತುವ ಕೆಲಸವನ್ನು ಮಾಡಬೇಕು.

ಇದರಂತೆ ಮಾನವನಿಗೆ ಮಾನವಜನ್ಮವೆಂಬುದೊಂದು ಮೋಕ್ಷಪಡೆವ ಸುಸಮಯವಾಗಿರುತ್ತದೆ, ಮುಕ್ತಿಯ ಹದವಾಗಿರುತ್ತದೆ, ವಿಷಯಗಳ ಭೋಗದಾಸೆಯಿಂದ ಆ ಸಮಯವನ್ನು ಕಳೆದುಕೊಂಡರೆ ಅದು ಮುಂದೆ ಸಿಗುವುದಿಲ್ಲ. ಏಕೆಂದರೆ "ಜಂತೂನಾಂ ನರಜನ್ಮ ದುರ್ಲಭಂ" ಎಂಬಂತೆ ಮಾನವ ಜನ್ಮ ದೊರೆಯುವುದು ಅತಿದುರ್ಲಭವಾದುದು. ಮುಂದಿನ ಜನ್ಮದಲ್ಲಿ ಅದೇ ದೊರೆಯುವುದೆಂಬ ಭರವಸೆಯಿಲ್ಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುನಃ ಎಂಬತ್ತುನಾಲ್ಕು ಲಕ್ಷ ಯೋನಿಗಳಲ್ಲಿ ಹುಟ್ಟಿ–ಹುಟ್ಟಿ ದುಃಖ ಅನುಭವಿಸಬೇಕಾಗುತ್ತದೆ. ಅನಂತ ಕಷ್ಟ ನಷ್ಟಗಳುಂಟಾಗುತ್ತವೆ, ಆದ್ದರಿಂದ ಈ ಸುಸಮಯದಲ್ಲಿಯೇ ಉಳಿದ ಸಂಸಾರದ ಅನ್ನ ವಸ್ತ್ರಗಳ ಕಾರ್ಯಕಲಾಪವನ್ನು ಬದಿಗಿಟ್ಟು ಮುಕ್ತಿ ಪಡೆದುಕೊಳ್ಳುವ ಕೆಲಸವನ್ನು ಮಾಡಬೇಕು,

ಮನುಷ್ಯ " ಪ್ರೇಯಸ್ಸೆ " ನಿಸದ ಭೋಗವಿಷಯ ಪ್ರಾಪ್ತಿಗಾಗಿ ಬಾಳದೆ " ಶ್ರೇಯಸ್ಸ " ನಿಸಿದ ಮೋಕ್ಷ ವಿಷಯ ಪ್ರಾಪ್ತಿಗಾಗಿ ಬಾಳಬೇಕು. ಸಂಸಾರ "ಸಾಧನ" ಆಗಬೇಕು. ಮೋಕ್ಷ ' ಸಾಧ್ಯ ' ವಾಗಬೇಕು. ಹೀಗೆ ಜೀವಿಸುವವನೆ ಜಗತ್ತಿನಲ್ಲಿ ಜಾಣ, ಧೀರ, ಯೋಗ್ಯನೆನಿಸುತ್ತಾನೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಮಹಾದೇವಿಯಕ್ಕನ ವಚನಗಳಲ್ಲಿ ದೃಷ್ಟಾಂತ ಮತ್ತು ಉಪಮೆ :

● ಪ್ರೊ. ಬಿ. ಎ. ಪಾಟೀಲ,

ವಚನ ಸಾಹಿತ್ಯ, ಕನ್ನಡ ಸಾಹಿತ್ಯವು ವಿಶ್ವಸಾಹಿತ್ಯಕ್ಕೆ ಕೊಟ್ಟ ಅಪೂರ್ವವಾದ ಅಸದೃಶವಾದ ಕೊಡುಗೆ. ಆಳರಸರ ಮೆಚ್ಚುಗೆಯನ್ನಾಗಲೀ, ಪಂಡಿತೋತ್ತಮರ ಪ್ರಶಂಸೆಯನ್ನಾಗಲೀ ಗಳಿಸಬೇಕೆಂದು ಹಂಬಲದಿಂದಾಗಲೀ ಅಥವಾ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಬೇಕೆಂಬ ಲೌಕಿಕ ವಾಂಛೆಯಿಂದಾಗಲೀ ಬಸವಾದಿ ಶರಣರು ರಚಿಸಿದ ಕೃತಿಗಳಲ್ಲ, ವಚನಗಳು "ನಿಜವನ್ನು ಮನಗಂಡ ಶಿವಶರಣರು ಜನತೆಯಲ್ಲಿ ಮತ್ತೆ ಪರಮಾನುಭವವನ್ನು ಅರಳಿಸಲೆಂದು ಸಂಶೋಧಿಸಿದ ಕನ್ನಡ ಪದರಚನಾ ಪ್ರಕಾರವೇ ವಚನ" "ಶಬ್ದಸೋಪಾನದ ಬಲದಿಂದ ನಿಶ್ಯಬ್ದ ಸೋಪಾನದ ಕಟ್ಟಿ" ಶರಣರು "ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು" ಬೆಳಗಿಟ್ಟ "ಗೀತಮಾತೆಂಬ" ಜ್ಯೋತಿ, ವಚನ ಶರಣರ ಅಂತರಂಗದ ಅರಿವು, ಅವರ ಅನುಭಾವ ಮೂಸೆಯಲ್ಲಿ ಬೆಂದು, ಕರಗಿ, ಸ್ಫುಟಗೊಂಡು ಸಹಜವಾಗಿಯೇ ಹೊರಹೊಮ್ಮಿದ ತಿಳಿವಿನ ಹೊನ್ನನುಡಿಗಳೇ ವಚನಗಳು. ತಾವು ಕಂಡ ಸತ್ಯವನ್ನು, ಅನುಭವಿಸಿದ ಆನಂದವನ್ನು ತಮ್ಮ ಜನತೆಯೂ ಕಂಡು, ಅನುಭವಿಸಿ ಬದುಕನ್ನು ಲೇಸಾಗಿಸಲಿ" ಎಂಬ ಮಾನವೀಯ ಕಳಕಳಿಯಿಂದ ಶರಣರು ಆತ್ಮಸಾಕ್ಷಿಯಾಗಿ ನುಡಿದ ನುಡಿಮುತ್ತುಗಳೇ ವಚನಗಳು. "ಕೂಡಲ ಸಂಗನ ಶರಣರು ಮನದೆರೆದು" ಆಡಿದ ಮಾತುಗಳೇ ವಚನಗಳು.

ವಚನ ಗದ್ಯಮಯ ಪದ್ಯ, "ಹೆಚ್ಚು ಆಳವಾಗಿ ವಿಚಾರಿಸಿದರೆ ವಚನ ಎನ್ನುವುದು ಗದ್ಯಪದ್ಯದ ನಡುವಿನ ಒಂದು ಮಾದರಿಯೆಂದೇ ಹೇಳಬೇಕಾಗುವುದು. ವಚನಗಳಲ್ಲಿ ನಿರರ್ಗಳತೆಯಿಲ್ಲ, ಆದರೆ ಸರಳತೆಯಿದೆ. ಪದ್ಯದ ಕ್ರಮಬದ್ಧವಾದ ಛಂದೋಗತಿಯಿಲ್ಲ: ಆದರೂ ಅದರ ಲಯವಿದೆ" ವಚನಗಳಲ್ಲಿ ಅನುಭಾವ ಗಾಢವೂ, ಸೂಕ್ಷ್ಮವೂ ಆಗಿರುವಂತೆ, ಉಕ್ತಿ ಸಹಜ ಸ್ಫೂರ್ತಿವೂ ಅಲಂಕಾರ ರಮ್ಯವೂ ಆಗಿರುತ್ತದೆ......" ವಚನ ಸಾಹಿತ್ಯವೂ ಹೌದು, ಶಾಸ್ತ್ರವೂ ಹೌದು, ಸ್ವಾನುಭವ ಮೂರ್ತಿ ಹೃದಯವಂತಿಕೆ. ಸೌಂದರ್ಯದೃಷ್ಟಿ ಇವುಗಳ ಮೂಲಕ ವಚನ ಸಾಹಿತ್ಯವೆಂಬುದು ಸತ್ಯ. ಒಂದು ನಿಶ್ಚಿತದರ್ಶನ, ಸಿದ್ಧಾಂತ, ಆಚಾರ ಧರ್ಮ ಇವುಗಳ ಮೂಲಕ ಅದು ಶಾಸ್ತ್ರವೂ ನಿಜ: ಆದರೂ ಮುಖ್ಯವಾಗಿ ವಚನ ಮೇಲ್ತರಗತಿಯ ಸಾಹಿತ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಚನ ಸಾಹಿತ್ಯದಲ್ಲಿ ಮಾನವ ಬದುಕಿನ ಹರಹು ಇದೆ, ಬದುಕಿನ ಬಗ್ಗೆ ಒಲವಿದೆ, ಮಾನವನ ದೈವೀ ಹಂಬಲವಿದೆ, ಪುರುಷ ಪ್ರಯತ್ನವಿದೆ, ಜೀವನ ದರ್ಶನವಿದೆ, ಜೀವನಾದರ್ಶವಿದೆ, ವಿಶ್ವಮಾನವ ಧರ್ಮವಿದೆ, ನರನು ಹರನಾಗುವ ಕಲೆಯಿದೆ. ವಚನ ಸಾಹಿತ್ಯದಲ್ಲಿ ಲೌಕಿಕದ ಋಜುಮಾರ್ಗವಿದೆ, ಅಧ್ಯಾತ್ಮದುನ್ನತಿಯ ಬೆಳಗಿದೆ. ವಚನ ಸಾಹಿತ್ಯದಲ್ಲಿ ದೇಹ ದೇಗುಲವಾಗಿದೆ, ಮಾತು ಜ್ಯೋತಿರ್ಲಿಂಗವಾಗಿದೆ, ಕರ್ಮ ಕಾಯಕ ವಾಗಿದೆ, ಭಕ್ತಿ ಪಂಚಮ ಪುರುಷಾರ್ಥವಾಗಿದೆ. ಮರ್ತ್ಯದ ಮಾನವರ ಬದುಕು ಲೇಸಲಾಗಿದೆ,

ವಚನ ಸಾಹಿತ್ಯದಲ್ಲಿ ಮಹಾದೇವಿಯಕ್ಕನ ವಚನಗಳಿಗೆ ಒಂದು ವಿಶಿಷ್ಟ ಸ್ಥಾನ ವಿದೆ. ಚೆನ್ನಬಸವಣ್ಣನವರು.

ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ,
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ,
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ,
ಅಜಗಣ್ಣನ ಐದು ವಚನಕ್ಕೆ, ಕೂಡಲ ಚೆನ್ನಸಂಗಮದೇವಾ,
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ.

ಎಂದು, ಅಕ್ಕಗಳ ವಚನದ ಬಗ್ಗೆ ನಿರ್ಣಾಯಕ ವ್ಯಾಖ್ಯೆಯನ್ನು ಕೊಟ್ಟಿದ್ದಾರೆ. ಮಹಾದೇವಿಯಕ್ಕನ ವಚನಗಳನ್ನು ಅಭ್ಯಸಿಸಿ. ಅವುಗಳ ಸ್ವಾರಸ್ಯವನ್ನು ಅನುಭವಿಸಿದವರಿಗೆ ಆಕೆ ಮೇಲ್ತರಗತಿಯ ಕವಯಿತ್ರಿಯೆಂಬುದು ಮನವರಿಕೆಯಾಗದಿರದು. ಡಾ, ರಂ. ಶ್ರೀ ಮುಗಳಿಯವರು "ಅಧ್ಯಾತ್ಮ ಮತ್ತು ಗದ್ಯ ಕವಿತ್ವ ಇವೆರಡನ್ನೂ ಸೊಗಸಾಗಿ ಮೇಳ ಹಾಕುವುದರಲ್ಲಿ ಮಹಾದೇವಿಯಕ್ಕನೇ ಮೊದಲಿಗಿತ್ತಿ. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಅವಳೇ ಮೊದಲನೆಯ ಕವಯಿತ್ರಿಯೆಂದು ಅಕ್ಕನನ್ನು ಮುಕ್ತ ಕಂಠದಿಂದ ಪ್ರಶಂಶಿಸಿದ್ದಾರೆ.

ಮಾತು ಮನಂಗಳಿಗೆ ಮೀರಿದ ವಸ್ತು ಹಾಗೂ ಸ್ಥಿತಿಗಳನ್ನು ವಿವರಿಸಲು ದೃಗ್ಗೋಚರ ವಸ್ತುಗಳ ಹಾಗೂ ಅವುಗಳ ಗುಣಗಳ ದೃಷ್ಟಾಂತಗಳನ್ನು ವಿಪುಲವಾಗಿ ವಚನಕಾರರು ತಮ್ಮ ವಚನಗಳಲ್ಲಿ ಬಳಸಿದ್ದಾರೆ, ಮೇಲಾಗಿ ಸಾಕಷ್ಟು ಉಪಮೆಗಳನ್ನು ಅವರ ವಚನಗಳಲ್ಲಿ ನಾವು ಕಾಣುತ್ತೇವೆ. ಮಹಾದೇವಿಯಕ್ಕನೂ ತನ್ನ ಅನುಭಾವ ನಿರೂಪಣೆಯಲ್ಲಿ ಹೆಜ್ಜೆ ಹೆಜ್ಜೆಗೂ ದೃಷ್ಟಾಂತ ಹಾಗೂ ಉಪಮೆಗಳನ್ನೂ ಬಳಸಿದ್ದಾಳೆ, ಪ್ರಾಪಂಚಿಕ ವಿಷಯಗಳ ಅನುಭವದಿಂದ ಪಾರಮಾರ್ಥಿಕ ಸೌಂದರ್ಯಾನುಭವವನ್ನು ಹೃದಯಂಗಮವಾಗಿ ನಿರೂಪಿಸಿದ್ದಾಳೆ. ಮಹಾದೇವಿಯಕ್ಕ, ಅವಳ ಒಂದೊಂದೂ ವಚನವು ಕಾವ್ಯಕ್ಕೆ ಕಾವ್ಯ : ತತ್ವಕ್ಕೆ ತತ್ವ, ಮಹಾದೇವಿಯಕ್ಕನೇ ಒಂದು ತತ್ವ. ಅವಳ ಜೀವನವೇ ಒಂದು ಕಾವ್ಯ; ಅವಳ ನಡೆಯೇ ಒಂದು ಶಾಸ್ತ್ರ, ಅವಳ ವಚನ ಗಳಲ್ಲಿ ನಾವು ದರ್ಶನ, ಧರ್ಮ, ಶಾಸ್ತ್ರ, ಕಾವ್ಯ ಗುಣ, ಮಾನವ ಹೃದಯದ ಮಿಡಿತ, ಸಂಗರುಳಿನ ಮಾರ್ದವತೆ ಇತ್ಯಾದಿ ಎಲ್ಲವನ್ನು ಕಾಣುತ್ತೇವೆ. ಪ್ರಸ್ತುತ ಲೇಖನದಲ್ಲಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾದೇವಿಯಕ್ಕನ ವಚನಗಳಲ್ಲಿಯ ದೃಷ್ಟಾಂತ ಹಾಗೂ ಉಪಮೇಗಳ ವೈಚಿತ್ರ್ಯ ಮತ್ತು ಸೊಗಸನ್ನು ಕುರಿತು ವಿವೇಚಿಸುವ ಒಂದು ಸಪ್ರ ಪ್ರಯತ್ನ ಮಾಡಲಾಗಿದೆ.

ದೇವನ ಅಸ್ತಿತ್ವ :

ವಿಜ್ಞಾನದಿಂದ ಪ್ರಭಾವಿತನಾದ ಮನುಷ್ಯನು ಇಂದು ವಿಶ್ವದಲ್ಲಿಯ ಪ್ರತಿಯೊಂದು ವಸ್ತು ಹಾಗೂ ವಿಷಯವನ್ನು ವೈಜ್ಞಾನಿಕ ದೃಷ್ಟಿಯಿಂದ ತಿಳಿಯಲು ಹಂಬಲಿಸುತ್ತಾನೆ. ದೃಷ್ಟಿಗೋಚರವಾದುದನ್ನೇ ಸತ್ಯವೆಂದು ನಂಬುತ್ತಾನೆ; ಉಳಿದುದೆಲ್ಲ ಅವನ ಪಾಲಿಗೆ ಅಸತ್ಯ. ಅವನು ಪ್ರಯೋಗ ಪ್ರೇಮಿಯಾಗಿ ಕೇವಲ ಬಹಿರಂಗದ ಪ್ರಯೋಗದಲ್ಲಿ ನಂಬುಗೆ ಹಾಗೂ ಆಸಕ್ತಿಗಳನ್ನು ತಳೆದಿದ್ದಾನೆ, ಅಂತರಂಗದ ಅನುಭಾವ ಅವನಿಗೆ ಅಗೋಚರ, ವೈಜ್ಞಾನಿಕ ತಂತ್ರ ಹಾಗೂ ಪ್ರತಿಭಾವ ಇವೆರಡೂ ಮೇಳವಿಸಿದಾಗಲೇ ವಾಸ್ತವತೆಯ ನಿಜವಾದ ಅರಿವು ಸಮಗಾಗುತ್ತದೆ, ಬಹಿರಂಗಕ್ಕೆ ಗೋಚರವಾಗದ್ದು ಅಂತರಂಗಕ್ಕೆ ಗೋಚರ,

ಸಾಮಾನ್ಯವಾಗಿ, ವೈಜ್ಞಾನಿಕದೃಷ್ಟಿಯು ಮಾನವನಿಗೆ ದೇವನ ಅಸ್ತಿತ್ವದ ಬಗೆಗೆ ಅನುಮಾನ. ಇದು ಸಹಜವೆ, ಕಾರಣ ಈ ಭೌತಿಕ ದೃಷ್ಟಿಗೆ ಆ ದೇವನು ಕಾಣಿಸಲೊಲ್ಲ, ಆ ದೇವನು ನಮ್ಮಲ್ಲಿಯೇ ಇರುವನೆಂದು ನೆರೆ ನಂಬಿ, ನಿಷ್ಠೆಯ ಸಾಧನೆಯಿಂದ ಅವನನ್ನುಸಾಕ್ಷಾತ್ಕರಿಸಿಕೊಂಡ ಮಹಾದೇವಿಯಕ್ಕ. ಅವನ ಇರುವಿಕೆಯ ಬಗೆಗೆ ಈ ರೀತಿಯಲ್ಲಿ ದೃಷ್ಟಾಂತಗಳನ್ನು ಕೊಡುತ್ತಾಳೆ,

"ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ,
ಶಿಲೆಯ ಮರೆಯಹೇಮದಂತೆ, ತಿಲದ ಮರೆಯ ತೈಲದಂತೆ,
ಮರದ ಮರೆಯ ತೇಜದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ"

"ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆ"
ಹಾಲು ತುಪ್ಪವ ನುಂಗಿ ಬೇರಾಗಬಲ್ಲುವೆ ?
ಸೂರ್ಯಕಾಂತದ ಅಗ್ನಿಯನಾರು ಭೇದಿಸಬಲ್ಲರು ?

ಭೂಮಿಯಲ್ಲಿ ಬಚ್ಚಿಟ್ಟ ನಿಧಿ, ಹಣ್ಣಿನಲ್ಲಿಯ ರುಚಿ, ಕಲ್ಲಿನಲ್ಲಿಯ ಬಂಗಾರ, ಎಳ್ಳಿನಲ್ಲಿಯ ಎಣ್ಣೆ, ಕಾವ್ಯದಲ್ಲಿಯ ಅಗ್ನಿ ಹಾಲಿನಲ್ಲಿಯ ತುಪ್ಪ, ಬಂಗಾರದಲ್ಲಿಯ ಬಣ್ಣ, ಸೂರ್ಯಕಾಂತ ಶಿಲೆಯಲ್ಲಿಯ ಉಷ್ಣತೆ ಇವೆಲ್ಲವೂ ನಮಗೆ ಒಪ್ಪಿಗೆ. ಎಲ್ಲವೂ ಸಹಜ. ಹಾಗೆಯೇ ನಮ್ಮ ಭಾವದಲ್ಲಿ ಆ ಬ್ರಹ್ಮವಡಗಿದೆ, ಅದಕ್ಕಾಗಿ ಆ ದೇವ ಇದ್ದಾನೆ, ಎಂಬುದನ್ನು ಒಪ್ಪಬೇಕು. ಶಿಲೆಯಲ್ಲಿಯ ಬಂಗಾರ, ಎಳ್ಳಿನಲ್ಲಿಯ ಎಣ್ಣೆ, ಹಾಲಿನಲ್ಲಿಯ ತುಪ್ಪ ಇವುಗಳನ್ನು ಬಾಹ್ಯ ಸಂಸ್ಕರಣದಿಂದ ಪಡೆಯಬಹುದು, ಇವು ದೃಷ್ಟಿಗೋಚರ. ಆದರೆ ಹಣ್ಣಿನಲ್ಲಿರುವ ರುಚಿ ಹಾಗೂ ಸೂರ್ಯಕಾಂತ ಶಿಲೆಯಲ್ಲಿಯ ಅಗ್ನಿ – ಇವುಗಳನ್ನು ಸಂಸ್ಕರಣದಿಂದ ಬೇರ್ಪಡಿಸಲು ಸಾಧ್ಯವಿಲ್ಲ, ಇವು ದೃಷ್ಟಿಗೆ ಅಗೋಚರ, ಇವುಗಳನ್ನು ಅನುಭವಿಸಿಯೆ ತಿಳಿಯಬೇಕು, ಹಾಗೆಯೇ ಅಂತರಂಗದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೃಷಿ ಅಥವಾ ಸಂಸ್ಕಾರದಿಂದ ಆ ದೇವನ ಬಗ್ಗೆ ಅನುಭಾವವನ್ನು ಹೊಂದಬೇಕು, "ಮಣ್ಣು ಬಿಟ್ಟು ಮಡಕೆಯಿಲ್ಲ, ತನ್ನ ಬಿಟ್ಟು ದೇವರಿಲ್ಲ" ಎಂಬ ತತ್ವವನ್ನೇ ಮೇಲಿನ ದೃಷ್ಟಾಂತಗಳಿಂದ ಮಹಾದೇವಿಯಕ್ಕ ದೃಢಪಡಿಸಿದ್ದಾಳೆ, "ಫಲದ ಮರೆಯ ರುಚಿ" ಹಾಗೂ ಸೂರ್ಯಕಾಂತದ ಅಗ್ನಿ" ಈ ದೃಷ್ಟಾಂತಗಳು ಬಹಳ ಔಚಿತ್ಯಪೂರ್ಣವಾಗಿವೆ.

ಮನಸ್ಸು :

"ಮನ: ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋ" ಎಂಬಂತೆ, ಸಕಲ್ಲ ಅರ್ಥ ಅನರ್ಥಗಳಿಗೆ ಈ ಮನಸ್ಸೆ ಕಾರಣವೆಂಬುದನ್ನು ಮಹಾದೇವಿಯಕ್ಕ,

"ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ"

ಎಂದು ನಿರೂಪಿಸಿದ್ದಾಳೆ, ಇಲ್ಲಿ ಮನವನ್ನು ಸೂರ್ಯನಿಗೆ ಹೋಲಿಸುತ್ತಾಳೆ. ಸುಂದರವಾದ ಹೋಲಿಕೆ. ಲೋಕದ ಸಕಲ ವ್ಯವಹಾರಗಳಿಗೂ ಸೂರ್ಯನೆ ಕಾರಣ, ಅವನಿಲ್ಲದಿರೆ ಲೋಕದ ಆಟವೇ ನಡೆಯುವುದಿಲ್ಲ. ಹಾಗೆಯೇ ನಮ್ಮ ಇಂದ್ರಿಯಗಳ ಸಕಲ ವ್ಯಾಪಾರಕ್ಕೆ ಮನವೇ ಮೂಲ ಕಾರಣ, ಮನವನ್ನು ನಿಯಂತ್ರಣದಲ್ಲಿಟ್ಟುಕೊಂಡವನು ಏನನ್ನಾದರೂ ಸಾಧಿಸಬಲ್ಲ ಲೋಕದೊಳಗೆ.

ದೇವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಭಕ್ತನಿಗೂ ಮನವೇ ಸಾಧನ, ಸಾಧಕ – ಭಕ್ತನ ಮೊದಲ ಹೆಜ್ಜೆಗಳಲ್ಲಿ ಮನದ ಹೊಯ್ದಾಟ ಬಹುವಾಗಿರುತ್ತದೆ, ಇಲ್ಲದುದನ್ನು ಬಯಸಿ, ಅದು ಲಭಿಸದಿದ್ದಾಗ ಬಳಲಿ ಬೇಯುವಂತೆ ಮಾಡುವ ಈ ಮನಸ್ಸನ್ನು ಅಕ್ಕನು,

"ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ,
ತನ್ನ ನೂಲು ತನ್ನನೆ ಸುತ್ತಿ ಸಾವಂತೆ
ಮನ ಬಂದುದನು ಬಯಸಿ ಬೇವುತ್ತಿದ್ದೇನಯ್ಯಾ"

ಎಂದು, ತೆರಣಿಯ ಹುಳುವಿಗೆ ಹೋಲಿಸಿದ್ದಾಳೆ. ತೆರಣಿಯ ಹುಳು ಸ್ವೇಚ್ಛೆಯಿಂದಲೇ ನೂಲಿನ ಮನೆಯನ್ನು ಕಟ್ಟಿ, ಆ ನೂಲಿನ ಜಾಲದಿಂದ ಹೊರಬರಲಾರದೆ ಸಾಯುವುದು. ಹಾಗೆಯೇ ಈ ಮನಸ್ಸುಕೂಡ ಆದರೆ ಮನಸ್ಸಿನ ಜಾಲದಿಂದ ಪ್ರಯಾಸಪಟ್ಟರೆ ಹೊರಬರಬಹುದಾಗಿದೆ. ಇದಕ್ಕೆ ದೃಢ ಚಿತ್ತಬೇಕು, ಮನಸ್ಸನ್ನು ತೆರಣಿ ಹುಳುವಿಗೆ ಉಪಮಿಸಿದ್ದು ತುಂಬ ಅರ್ಥಪೂರ್ಣವಾಗಿದೆ.

ಇಷ್ಟಲಿಂಗ :

ವೀರಶೈವ ಧರ್ಮದಲ್ಲಿ ಲಿಂಗದೀಕ್ಷೆ ಒಂದು ಪ್ರಮುಖವಾದ ಸಂಸ್ಕಾರ "ಒಳಗ ಶೋಧಿಸಿ, ಹೊರಗ ಶುದ್ಧಯಿಸಿ, ಒಳಹೊರಗೆಂಬ ಉಭಯ ಶಂಕೆಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಳೆದು ಹಿಂದಣ ಜನ್ಮವ ತೊಡೆದು. ಮುಂದಣ ಪಥವ ತೋರುವ " ಶ್ರೀಗುರುವು ವೇಧಾದೀಕ್ಷೆ ಹಾಗೂ ಮಂತ್ರ ದೀಕ್ಷೆಗಳಿಂದ ಶಿಷ್ಯನ ಭಾವ, ಮನಗಳಲ್ಲಿ ತೃಪ್ತಿಲಿಂಗ ಹಾಗೂ ಪ್ರಾಣಲಿಂಗಗಳನ್ನು ಸ್ಥಾಪಿಸಿ, ಕ್ರಿಯಾದೀಕ್ಷೆಯಿಂದ ಶಿಷ್ಯನ ಕರಕ್ಕೆ ಇಷ್ಟಲಿಂಗ ವನ್ನು ಕರುಣಿಸುತ್ತಾನೆ. ಭಕ್ತಿಯೆಂಬ ಬೀಜವನ್ನು ಬಿತ್ತಿ ಮುಕ್ತಿಯೆಂಬ ಫಲವನ್ನು ಪಡೆಯಲು ಈ ಇಷ್ಟಲಿಂಗ ಒಂದು ದಿವ್ಯ ಸಾಧನ ಸ್ವರೂಪ ದರ್ಶನ ಈ ಇಷ್ಟಲಿಂಗ ಪೂಜೆಯಿಂದ ಸುಸಾಧ್ಯ. ಇಂಥ ಲಿಂಗವನ್ನು ಅಕ್ಕನು,

" ಚಕ್ರ ಬೆಸಗೆಯ್ವುಡೆ ಅಲಗಿನ ಹಂಗೇಕೆ ?
ಮಾಣಿಕ್ಯದ ಬೆಳಗುಳ್ಳಡೆ ದೀಪದ ಹಂಗೇಕೆ ?
ಪರುಷ ಕೈಯಲುಳ್ಳಡೆ ಸಿರಿಯ ಹಂಗೇಕೆ ?
....
ಎನ್ನ ದೇವ ಚನ್ನಮಲ್ಲಿಕಾರ್ಜುನ ಲಿಂಗವು
ಕರಸ್ಥಲದೊಳಗುಳ್ಳಡೆ ಇನ್ನಾವ ಹಂಗೇಕೆ ?

ಎಂದು ವರ್ಣಿಸಿದ್ದಾಳೆ. ಇಲ್ಲಿ ಇಷ್ಟಲಿಂಗವನ್ನು ಚಕ್ರ, ಮಾಣಿಕ್ಯ ಹಾಗೂ ಪರುಷ ಮಣಿಗಳಿಗೆ ಹೋಲಿಸಿದ್ದಾಳೆ: ಅಕ್ಕ. ಅಜ್ಞಾನದ ಕತ್ತಲೆಯೆಂಬ ಅನಿಷ್ಟವನ್ನು ತರಹರಿ ಸುವಲ್ಲಿ ಲಿಂಗ ಚಕ್ರವಾಗಿದೆ. ಶಿವದ ಬೆಳಗನ್ನು ಪಸರಿಸುವ ಮಾಣಿಕ್ಯ—ಈ ಇಷ್ಟಲಿಂಗ. ಸ್ವಯಂ ಪ್ರಕಾಶವುಳ್ಳ ಮಾಣಿಕ್ಯವಿರುವಾಗ ದೀಪದ ಹಂಬಲ ಕ್ಷುಲ್ಲಕ. ಎಣ್ಣೆ ಇರುವ ತನಕ ದೀಪದ ಬೆಳಕು. ಎಣ್ಣೆ ತೀರಲು ಮತ್ತೆ ಕತ್ತಲು. ಲಿಂಗಪೂಜಕನಿಗೆ ಮೃತ್ಯುವಿನ ಛಾಯೆಯೂ ಇರುವುದಿಲ್ಲ. ಶಿವಸಂತನ್ನು ಕರುಣಿಸುವ ಪರುಷ ಈ ಇಷ್ಟಲಿಂಗ. ಲಿಂಗಭಕ್ತನಿಗೆ ಆಧ್ಯಾತ್ಮದ ಸಂಪತ್ತಿನ ಮುಂದೆ ಭೌತಿಕ ಸಂಪತ್ತು ತೃಣಸಮಾನ. ಚಕ್ರ, ಮಾಣಿಕ್ಯ, ಮತ್ತು ಪರುಷ ಈ ಉಪಮೆಗಳು ಸಹಜವಾಗಿವೆ.

ಅರಿವು – ಆಚರಣೆ :

ಲಿಂಗಾಂಗ ಸಾಮರಸ್ಯವನ್ನು ಸಾಧಿಸುವ ಭಕ್ತನಿಗೆ ಅರಿವು ಮತ್ತು ಆಚರಣೆ ಎರಡೂ ಅವಶ್ಯಕ. ಅರಿವಿಲ್ಲದ ಆಚರಣೆಯಿಲ್ಲದ ಅರಿವು—ಇವೆರಡೂ ನಿಷ್ಪ್ರಯೋಜಕ, ಅರಿವಿಲ್ಲದ ಆಚರಣೆ ಕುರುಡನಂತೆ, ಆಚರಣೆಯಿಲ್ಲದ ಅರಿವು ಹೆಳವನಂತೆ. ಕುರುಡ ಕಾಣಪಥವ; ಹೆಳವ ನಡೆಯಲರಿಯ ಜ್ಞಾನವಿಲ್ಲದ ಕ್ರಿ ಜಡ; ಕ್ರಿಯಿಲ್ಲದ ಜ್ಞಾನ ವಾಗ್ಜಾಲ, ಭ್ರಾಂತು. ಅರಿವಿಲ್ಲದ ಆಚರಣೆಯನ್ನು ಕುರಿತು ಅಕ್ಕ,

" ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರದಡೆ
ಅದೆಂದಿಂಗೆ ಬೆಳೆದು ಫಲವಪ್ಪುದಯ್ಯಾ ?
ಅರಿವಿಲ್ಲದವರಿಗೆ ಆಚಾರವಿದ್ದಡೆ
ಅರಕೆಗೆಟ್ಟು ಸುಖವೆಂದಪ್ಪುದಯ್ಯಾ ?

ಎಂದು ನುಡಿದಿದ್ದಾಳೆ, ತೌಡನ್ನು (ಭತ್ತದ ಹೊಟ್ಟು) ಬಿತ್ತಿ ಎಷ್ಟು ನೀರೆರೆದರೂ ಅದು ಬೆಳೆದು ಫಲಕೊಡುವುದಿಲ್ಲ, ಅರಿವಿಲ್ಲದ ಆಚರಣೆ ತೌಡಿಗೆ ನೀರೆರೆದರೆ, ಲಿಂಗ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನವಿಲ್ಲದೆ ಕೇವಲ ಬಾಹ್ಯಾಚರಣೆಯಿಂದ ಏನನ್ನೂ ಸಾಧಿಸಲಾಗದು. ಅದು ಡಾಂಭಿಕತೆ, ಅಂತೆಯೇ ಭತ್ತದ ಸಸಿಯನ್ನು ನೆಟ್ಟು ಸರಿಯಾಗಿ ನೀರುಣಿಸದಿದ್ದಲ್ಲಿ ಅದೂ ಕೂಡ ನಿಸ್ಫಲ, ಕೇವಲ ಲಿಂಗಜ್ಞಾನ ಒಂದು ಹಮ್ಮು: ಕೇವಲ ಲಿಂಗಪೂಜೆ ಒಂದು ಡಾಂಭಿಕತೆ, ಹಮ್ಮು ಮತ್ತು ಡಾಂಭಿಕತೆ ಲಿಂಗಾನಂದವನ್ನು ದೊರಕಿಸಿ ಕೊಡಲಾರವು, ಲಿಂಗಜ್ಞಾನ, ಲಿಂಗಾನುಸಂಧಾನ ಎರಡೂ ಮೇಳವಿಸಿದಾಗ ಲಿಂಗಾಂಗ ಸಾಮರಸ್ಯದ ಆನಂದವನ್ನು ಅನುಭವಿಸಲಿಕ್ಕೆ ಸಾಧ್ಯ.

ಲಿಂಗಾನುಭಾವಿಗಳ ಸಂಗ :

ಮಾನವ ಸಂಘಜೀವಿ. ಸಂಘಜೀವನವಿಲ್ಲದೆ ಅವನು ಬದುಕಲಾರ. ಮೇಲಾಗಿ, ಅವನ ವ್ಯಕ್ತಿತ್ವದ ವಿಕಸನವೂ ಆಗದು. ಅಂತೆಯೇ ಲಿಂಗಭಕ್ತನಿಗೆ ಲಿಂಗಾನುಭಾವಿಗಳ ಸಂಗ ಅನಿವಾರ್ಯ ಹಾಗೂ ಅಗತ್ಯ. ಶರಣರ ಸಂಗವನ್ನು ಕುರಿತು ಮಹಾದೇವಿ ಯಕ್ಕನು,

" ಅರಿಯದವರೊಡನೆ ಸಂಗವ ಮಾಡಿದಡೆ
ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ.
ಬಲ್ಲವರೊಡನೆ ಸಂಗವ ಮಾಡಿದಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪುರದ ಗಿರಿಯನುರಿಕೊಂಬಂತೆ

ಎಂದು ಬಣ್ಣಿಸಿದ್ದಾರೆ. ಇಲ್ಲಿ ಲಿಂಗಜ್ಞಾನವಿಲ್ಲದ ಭವಿಗಳನ್ನು ಕಲ್ಲಿಗೂ, ಲಿಂಗಾನುಭಾವಿಗಳನ್ನು ಮೊಸರಿಗೂ ಹೋಲಿಸಿದ್ದಾಳೆ ಅಕ್ಕ. ಕಲ್ಲನ್ನು ಕಡೆದಲ್ಲಿ ಕಿಡಿಯುದಿಸುವಂತೆ ಅಜ್ಞಾನಿಗಳ ಸಂಗದಿಂದ ನಮ್ಮ ಹಾನಿಯೇ. ಜ್ಞಾನಿಗಳ ಸಂಗ ಮೊಸರನ್ನು ಕಡೆದು ನವನೀತವನ್ನು ಪಡೆದಂತೆ, ಇಂಥವರ ಸಂಗದಿಂದ ನಮ್ಮ ಶ್ರೇಯಸ್ಸು. ಅಜ್ಞಾನಿಗಳ ಹೃದಯ ಕಲ್ಲಿನಂತೆ ಕಠಿಣ; ಜ್ಞಾನಿಗಳ ಹೃದಯ ಮೊಸರಿನಂತೆ ಮೃದು ಮಮರ ಮಥನಿಸುವಲ್ಲಿ ಕಿಚ್ಚು ಉದಯಿಸುವಂತೆ ಆತ್ಮ ಆತ್ಮ ಮಾಥ ಮಥನಿಸುವಲ್ಲಿ ಅನುಭಾವದ ಉದಯ, ಈ ಲಿಂಗಾನುಭಾವದಿಂದ ಅಂಗಗುಣಗಳ ಭಸ್ಮ. ಶರಣರ ಸಂಗವೆಂದರೆ " ಕರ್ಪೂರದ ಗಿರಿಯು ಉರಿಯ ಸಂಗ ಮಾಡಿದಂತೆ ". ಅಲ್ಲಿ ಶೇಷವಿಲ್ಲ. ಎಲ್ಲವೂ ತೇಜದಲ್ಲಿ ಲೀನ, ಅಂಗ ಗುಣದ ಕಾಳಿಕೆ ಕರಗಿ ಲಿಂಗ ತೇಜವೊಂದೇ ಬೆಳಗುವುದು, ಈ ಉಪಮೆ ಅಕ್ಕನ ಕಾವ್ಯ ಪ್ರತಿಭೆಗೆ ಒಂದು ಉತ್ತಮ ಉದಾಹರಣೆ.

ನಿ : ಕಾ ಯ ಶ ರ ಣ :

ಲಿಂಗಾನುಸಂಧಾನದಿಂದ ಲಿಂಗವೇ ಆದ ಶರಣನಿಗೆ ಅಂಗವೆಂಬುದಿರುವುದಿಲ್ಲ. ಅವರ ಅಂಗವೆಲ್ಲ ಲಿಂಗ, ಅಂಗಕ್ರಿಯೆಗಳೆಲ್ಲ ಲಿಂಗಕ್ರಿಯೆಗಳು, " ಫಲಸ್ಯ ಕಾರಣಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಶ್ನೆ ನಿವಾರಣಂ; ಜ್ಞಾನಸ್ಯ ಕಾರಣಂ ಕರ್ಮಂ, ಜ್ಞಾನೇ ಕ್ರಮ ನಿವಾರಣಂ ಎಂಬಂತೆ ಅಂಗವಿಡಿದು ಲಿಂಗವಾದ ಬಳಿಕ ಅಂಗಗುಣಗಳೆಲ್ಲ ಲಿಂಗ ಕಿರಣಗಳಾಗುತ್ತವೆ. ಆಗ ಶರಣರಿಗೆ ಕಾಯವಿಕಾರವೆಂಬುದಿಲ್ಲ. ಕಾಯವಿದ್ದರಲ್ಲವೆ ಕಾಯವಿಕಾರ? ಶಿವನೊಲಿದವರು ಕಾಯಗೊಂಡಿರುವುದಿಲ್ಲವೆಂಬುದಕ್ಕೆ ಅಕ್ಕನು,

"ಕೆಂಡದ ಶವದಂತೆ, ಸೂತ್ರ ತಪ್ಪಿದ ಬೊಂಬೆಯಂತೆ,
ಜಲವರತ ತಟಾಕದಂತೆ, ಬೆಂದ ನುಲಿಯಂತೆ,
ಮತ್ತೆ ಹಿಂದಣಂಗವುಂಟೆ, ಅಣ್ಣಾ
ಚೆನ್ನಮಲ್ಲಿಕಾರ್ಜುನಸಂಗವೇ ಆಶ್ರಯವಾದವಳಿಗೆ ? "

ಎಂಬ ಸುಂದರವಾದ ಉಪಮೆಗಳನ್ನು ಕೊಡುತ್ತಾಳೆ. ಕೆಂಡದ ಶವಕ್ಕೆ ಮುನ್ನಿನ ರೂಪಿಲ್ಲ. ಕೆಂಡದಲ್ಲಿ ಶವವೆಲ್ಲವೂ ಭಸ್ಮ. ಸೂತ್ರದಿಂದ ಕಳಚಿದ ಬೊಂಬೆ ಮತ್ತೆ ಸೂತ್ರಕ್ಕೆ ಅಂಟಿಕೊಳ್ಳುವುದಿಲ್ಲ. ನೀರೆಲ್ಲ ಬತ್ತಿಹೋದ ತಟಾಕದಲ್ಲಿ ಯಾವ ಗಜಬಿಜಿಯೂ ಇರುವುದಿಲ್ಲ, ಬೆಂಕಿಯಲ್ಲಿ ಬೆಂದ ನುಲಿಗೆ ರೂಪಿದ್ದರೂ ಅದು ಮುಂಚಿನಂತಲ್ಲ, ಹಾಗೆಯೇ ಅಂಗವು ಲಿಂಗವಾದ ಬಳಿಕ ಅಂಗವೆಂಬುದಿಲ್ಲ.

ಮೇಲಿನ ಉಪಮೆಗಳಲ್ಲಿ "ಜಲವರತ ತಟಾಕ" ಮತ್ತು "ಬೆಂದ ನುಲಿ' ಗಳು ಬಹು ಅರ್ಥಗರ್ಭಿತವಾಗಿವೆ ಮತ್ತು ಔಚಿತ್ಯಪೂರ್ಣವಾಗಿವೆ, ಕಾಯ ವಿಕಾರವನ್ನು ಜಲವೆಂದೂ ಕಾಯವನ್ನು ತಟಾಕವೆಂದೂ ಅಕ್ಕ ಇಲ್ಲಿ ಪರಿಗಣಿಸಿದ್ದಾಳೆ, ಎಂತಹ ಸುಂದರ ಸಾಮ್ಯ. ಕೆರೆಯಲ್ಲಿ ನೀರಿದ್ದಾಗಲೇ ಜನರು, ದನಕರು, ಪಶುಪಕ್ಷಿಗಳು ನೀರಿನ ದೆಸೆಯಿಂದ ಬಂದು ಕೆರೆಯನ್ನು ಮಲಿನಗೊಳಿಸುವುದು. ನೀರೇ ಇಲ್ಲದಿದ್ದಾಗ ಮಲಿನತೆಯ ಪ್ರಶ್ನೆ ಎಲ್ಲಿ ? ಹಾಗೆಯೇ ಕಾಯವಿಕಾರ ಇರವರಲ್ಲಿ ಬಯಕೆ, ನೋವು ನಲಿವು, ಹುಟ್ಟು ಸಾವೆಲ್ಲ ಕಾಯವಿಕಾರವಿಲ್ಲದಾಗ ಬಯಕೆಯಿಲ್ಲ; ಬಯಕೆಯಿಲ್ಲಾದಾಗ ನೋವಿಲ್ಲ, ನಲಿವಿಲ್ಲ, ಹುಟ್ಟಿಲ್ಲ, ಸಾವಿಲ್ಲ, ಇನ್ನು ಲಿಂಗಮಯ ಅಂಗವನ್ನು "ಬೆಂದ ನುಲಿ" ಯೆಂದು ಸಂಬೋಧಿಸಿದ್ದಾಳೆ ಅಕ್ಕ. ಬೆಂದನುಲಿಗೆ ರೂಪಿದ್ದರೂ ಅದು ಮುಂಚಿನಂತಲ್ಲ, ಹಿಡಿಯ ಹೋದರೆ ಅದು ಬರಿಯ ಬೂದಿ. ಹಾಗೆಯೇ ಲಿಂಗ ಶರೀರಗಳಾದ ಶರಣರು ನಮ್ಮ ಚರ್ಮಚಕ್ಷುಗಳಿಗೆ ಕಾಯಗೊಂಡಿದ್ದರೂ ಅವರು ನಿ:ಕಾಯರು. ಈ ಉಪಮೆಯಂತೂ ಮಹಾದೇವಿಯಕ್ಕನ ಪರಿಪೂರ್ಣ ಜ್ಞಾನಸಿದ್ಧಿಯ ದ್ಯೋತಕವಾಗಿದೆ. ಅದಕ್ಕೇನೇ ಮಹಾಜ್ಞಾನಿ ಚೆನ್ನಬಸವಣ್ಣ ಅಕ್ಕನನ್ನು "ಜ್ಞಾನಿಗಳ ಜ್ಞಾನಿ" ಯೆಂದು ಸಂಬೋಧಿಸಿದುದು.

ಶರಣರು ಜೀವನ್ಮುಕ್ತರು :

ಲಿಂಗವ ಪೂಜಿಸಿ ಲಿಂಗವೇ ಆದ ಶರಣರಿಗೆ ಹುಟ್ಟು ಸಾವೆಂಬುದಿಲ್ಲ. ಹುಟ್ಟು ಸಾವುಗಳನ್ನು ಮೆಟ್ಟಿ ನಿಂತ ಶರಣರು ಪುನಃ ಅಂಗವಿಡಿದು ಮರ್ತ್ಯಕ್ಕೆ ಬರಲಾರರು ಎಂಬುದಕ್ಕೆ ಅಕ್ಕನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಕಟಿಹಾದ ಬಿದಿರಿನಲ್ಲಿ ಮರಳಿ ಕಳಲಿ ಮೂಡಬಲ್ಲುದೆ ?
ಸುಟ್ಟ ಮಡಕೆ ಮುನ್ನಿನಂತೆ ಮರಳಿ ಧರೆಯನಪ್ಪಬಲ್ಲುದೆ ?
ತೊಟ್ಟ ಬಿಟ್ಟು ಬಿದ್ದ ಹಣ್ಣು ಮರಳಿ ತೊಟ್ಟನಪ್ಪಬಲ್ಲುದೆ ?
ಕಷ್ಟಕರ್ಮಿ ಮನುಜರು ಕಾಣದೆ ಒಂದ ನುಡಿದಡೆ
ನಿಷ್ಠೆಯುಳ್ಳ ಶರಣರು ಮರಳಿ ಮರ್ತ್ಯಕ್ಕೆ ಬಪ್ಪರೆ
ಚೆನ್ನಮಲ್ಲಿಕಾರ್ಜುನಾ ?

ಎಂಬ ಉಪಮೆಗಳನ್ನು ಕೊಡುತ್ತಾಳೆ, ನೆಟೆಹಾದ ಮರವು ಪುನಃ ಚಿಗುರೊಡೆಯುವುದಿಲ್ಲ. ಸುಟ್ಟಮಡಕೆ ಮತ್ತೆ ಮಣ್ಣನ್ನು ಬೆರೆಯುವುದಿಲ್ಲ. ತೊಟ್ಟಿನಿಂದ ಕಳಚಿ ಬಿದ್ದ ಹಣ್ಣು ಮತ್ತೆಂದೂ ತೊಟ್ಟನ್ನು ಕೂಡುವುದಿಲ್ಲ. ಇದು ಸಹಜ; ನಿತ್ಯಸತ್ಯ. ಅಂದರೆ ಪರಿವರ್ತನ ಪ್ರಕ್ರಿಯೆಗೆ ಹಿಮ್ಮುಖವೆಂಬುದಿಲ್ಲ. ಭವವನ್ನು ಗೆದ್ದು ಶಿವವಾದ ಶರಣರಿಗೆ ಪುನಃ ಜನನ ಮರಣ ಬಾಧೆಯಿಲ್ಲ. ಮೇಲಿನ ಉಪಮೆಗಳಲ್ಲಿ "ಸುಟ್ಟಮಡಕೆ" ಬಹು ಸ್ವಾರಸ್ಯಪೂರ್ಣವಾಗಿದೆ ಹಸಿಮಣ್ಣು ಬೆಂಕಿಯ ಸಂಸ್ಕಾರದಿಂದ ಶುದ್ಧಿಯನ್ನು ಹೊಂದಿ ಮಡಕೆಯಾಗಿ ಪರಿವರ್ತನೆಗೊಂಡ ಮೇಲೆ. ಮಡಕೆ ಹಸಿಮಣ್ಣಿನ ರೂಪ, ಗುಣವನ್ನೆಂದೂ ಪಡೆಯಲಾರದು. ಹಾಗೆಯೇ ಗುರುಮುಖದಿಂದ ಇಷ್ಟಲಿಂಗವನ್ನು ಪಡೆದ ಲಿಂಗಭಕ್ತರು, ಶಿವಜ್ಞಾನವೆಂಬ ಅಗ್ನಿಯ ಸಂಸ್ಕಾರದಿಂದ ತನುಗುಣಗಳನ್ನು ಸುಟ್ಟು ಪರಿಶುದ್ಧವಾಗಿ, ಮನವನ್ನು ಘನವನ್ನಾಗಿ, ಆತ್ಮವನ್ನು ಪರಮಾತ್ಮವಾಗಿ ಪರಿವರ್ತಿಸಿ ಮೃತ್ಯುವನ್ನು ಮೆಟ್ಟಿನಿಂತ ಮಹಂತನೆನಿಸಿಕೊಂಡ ಮೇಲೆ ಪುನಃ ಆವನಿಗೆ ಭವವೆಲ್ಲಿಯದು ? ಮರಳಿ ಮರ್ತ್ಯಕ್ಕೆ ಬರುವುದಾದರೂ ಹೇಗೆ ?

ಶರಣರ ನಿಲುವು ಶಿವನಿಗೆ ವೇದ್ಯ :

ಸಂಸಾರದಲ್ಲಿದ್ದುಕೊಂಡು, ನಿಷ್ಠೆಯಿಂದ ಲಿಂಗಾನುಸಂಧಾನವಶಾಡ, "ಕರ್ಪೂರದ ಗಿರಿಯ ಉರಿಯ ಚರಸುವಂತೆ" ಲಿಂಗದಲ್ಲಿ ಲೀಯವಾಗಿ. ಲಿಂಗ ಶರೀರಗಳಾದ ಶರಣರ ನಿಲವು ಆ ಶಿವನಿಗೇ ಗೊತ್ತು. ಭವಭಾರಿಗಳಿಗೆ ಅದು ತಿಳಿಯದು. ಇದರ ಸುಂದರ ನಿರೂಪಣೆಯನ್ನು ಅಕ್ಕ.

" ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ,
ಕಡೆಯಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ
ಪುಷ್ಪದ ಪರಿಮಳವ ದುಂಬಿ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ನೊರಜ ಬಲ್ಲುದೆ ಅಯ್ಯಾ ?
ಚೆನ್ನ ಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ
ಈ ಕೋಣನ ಮೈಮೇಲಣ ಸೊಳ್ಳೆಗೇತ್ತ ಬಲ್ಲವಯ್ಯಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಮಾಡಿದ್ದಾಳೆ. ಈ ವಚನದಲ್ಲಿ ಅಳಿಮನದ ಅಜ್ಞಾನಿ ಮಾನವರನ್ನು " ಕೋಣನ ಮೈಮೇಲಣ ಸೊಳ್ಳೆಗಳೆಂದು ಸಂಬೋಧಿಸಿದ್ದಾಳೆ ಮಹಾದೇವಿಯಕ್ಕ. ಕೋಣ, ಮೃತ್ಯು ದೇವತೆಯಾದ ಯಮನ ವಾಹನ, ಕೋಣನ ಮೈಮೇಲಣ ಸೊಳ್ಳೆಗಳೆಂದರೆ ಮೃತ್ಯು ಬಂಧನಕ್ಕೊಳಗಾದ ಅಳಿಮನದ ಅಜ್ಞಾನಿ ಮಾನವರು, ಇಂಥವರು ಮೃತ್ಯುವನ್ನು ಗೆದ್ದು ಮೃತ್ಯುಂಜಯರಾದ ಶರಣರ ನಿಲುವನ್ನು ಅರಿಯಲಾರರು, ಮೃತ್ಯುಂಜಯನಾದ ಶಿವನೇ ಬಲ್ಲ ಅವರ ಪರಿಯನು ಈ ಉಪಮೆ ಅಕ್ಕನ ಕಾವ್ಯ ಪ್ರತಿಭೆಗೆ ಮತ್ತೊಂದು ನಿದರ್ಶನ. ಇದು ಮಹಾದೇವಿಯಕ್ಕನ ಲೌಕಿಕ ಅನುಭವದ ಆಳ ಹಾಗೂ ಅಲೌಕಿಕ ಅನುಭಾವದ ಎತ್ತರ – ಇವುಗಳನ್ನು ಸೂಚಿಸುತ್ತದೆ.

ಸಂಸ್ಕೃತ ಕವಿಗಳಲ್ಲಿ ಉಪಮೆಗಳಲ್ಲಿ ಕಾಳಿದಾಸನನ್ನು ಮೀರಿಸುವ ಕವಿ ಇನ್ನೊಬ್ಬನಿಲ್ಲವೆಂದು ಹೇಳುವುದುಂಟು " ಉಪಮಾ ಕಾಳಿದಾಸಸ್ಯ ". ಹಾಗೆಯೇ ಕನ್ನಡ ಕವಯಿತ್ರಿಯರಲ್ಲಿ ಉಪಮೆಗಳಲ್ಲಿ ಅಕ್ಕನನ್ನು ಹೋಲುವವರು ಇಲ್ಲವೆಂದರೆ ತಪ್ಪಾಗಲಾರದಲ್ಲವೆ ? " ಉಪಮಾ ಮಹಾದೇವಿಯಕ್ಕಸ್ಯ " ಎಂದರೆ ಉತ್ಪ್ರೇಕ್ಷೆಯಾಗಲಾರದಲ್ಲವೆ ?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೭ ಶಿಶುನಾಳ ಶರೀಫ್ ಮತ್ತು ಕಡಕೋಳ ಮಡಿವಾಳಪ್ಪ - ಒಂದು ವಿವೇಚನೆ :

● ಪ್ರೊ. ಬಾಳಿ ಮೀನಾಕ್ಷಿ.

ಶಿಶುನಾಳ ಶರೀಫ್ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಹು ಜನಪ್ರಿಯನಾದ ಜನಪದ ಕವಿ, ಇದಕ್ಕೆ ಕಾರಣ ಅವನ ಬ್ಯಾಡಗಿ ಮೆಣಸಿನಕಾಯಿಯಂಥ ಗರಿಗರಿಯಾದ ಹಾಡುಗಳಷ್ಟೆ ಅಲ್ಲ, ಅವನ ಹಿಂದಿರುವ ಆಕರ್ಷಕವಾದ ಸಂಕೀರ್ಣವಾದ ವ್ಯಕ್ತಿತ್ವವು ಕಾರಣವಾಗಿದೆ. ಅನುಭವ ಪರಿಗಳ ದೃಷ್ಟಿಯಿಂದ ಕನ್ನಡ ಭೂಮಿ ಸಂಪತ್ತದ್ಭರಿತ ವಾದುದು, 17. 18 ಮತ್ತು 19 ಈ ಮೂರು ಶತಮಾನಗಳ ಪರಿಹಿಸಲ್ಲಿ ನೂರಾರು ಸಂತ ಕವಿಗಳು ಲೆಕ್ಕ ವಿಲ್ಲದಷ್ಟು ತತ್ವಪದಗಳನ್ನು (ಭಜನೆ ಪದಗಳು, ಸ್ವರ ವಚನ ಗಳು) ಬರೆದದ್ದುಂಟು, ಆದರೆ ಅನುಭವ ಪದ ಕ್ಷೇತ್ರದಲ್ಲಿ ಶರೀಫನಿಗೆ ಸಿಕ್ಕಷ್ಟು ಪ್ರಚಾರ, ಪ್ರೇರಣೆ, ಕೀರ್ತಿ ಇನ್ನಾವುದೆ ಅವಧೂತ ಕವಿಗಳಿಗೆ ದೊರಕಲಿಲ್ಲ. ಇದಕ್ಕೆ ತಾಂತ್ರಿಕ್ಯ ಅಥವಾ ಇನ್ನಾವುದೇ ಬೇರೆ ಕಾರಣಗಳಿರಬಹುದು. ಆದರೆ ಸಾಹಿತ್ಯಿಕ ರಾಜಕಾರಣದ ಗುಂಪುಗಾರಿಕೆಯು ಹಿಡುಗು ಒಂದು ದಟ್ಟ ಕಾರಣವೆಂಬುದು ಬಲ್ಲವರಿಗೆ ಗೊತ್ತು.

ಶರೀಫರಿಗಿಂತ ಒಂದು ಶತಮಾನ ಮುಂದೆ ಬಾಳಿ ಬದುಕಿದ ಕಡಕೋಳದ ಮಡಿವಾಳಪ್ಪ ಕಲಬುರ್ಗಿ ವಿಭಾಗದ ಕಪ್ಪು ನೆಲದ ಗಂಡು ಮಗ. ಬಾಳಿನ ದಿಟ್ಟತನ ದಲ್ಲಿ, ಹಾಡುಗಳ ಕಸುವಿನಲ್ಲಿ, ತತ್ವದ ನಿಖರತೆಯಲ್ಲಿ ಜೀವನಾನುಭವಗಳ ಗಟ್ಟಿತನದಲ್ಲಿ ಮಡಿವಾಳಪ್ಪ ಶರೀಫನಿಗಿಂತ ಒಂದಿಷ್ಟು ಎತ್ತರದಲ್ಲಿ ನಿಲ್ಲುತ್ತಾನೆ. ಶರೀಫ್–ಮಡಿವಾಳರ ಪದಗಳನ್ನು ಯಾವ ಪೂರ್ವಾಗ್ರಹ ಪೀಡಿತ ಗುಮಾನಿಗಳಿಲ್ಲದೆ ನೋಡಿದರೆ ಈ ಮಾತು ಅತಿಶಯೋಕ್ತಿ ಅನಿಸಲಾರದು.

ಅವರಿಬ್ಬರ ಜೀವನದ ಸಂಘರ್ಷಗಳೇ ಅವರ ಈ ವಿಭಿನ್ನತೆಗೆ ಕಾರಣವಾಗು ತ್ತವೆ, ಶರೀಫನಿಗೆ ಬಾಳಿನಲ್ಲಿ ಸವಾಲುಗಳೆದುರಾದರೆ ಮಡಿವಾಳಪ್ಪನಿಗೆ ಇಡೀ ಬಾಳೆ ಒಂದು ಪ್ರಚಂಡ ಸವಾಲಾಗಿತ್ತು. ಮಠದಯ್ಯನ ಅನಧಿಕೃತ ಪ್ರೇಮ ಪ್ರಕರಣ ವೊಂದರ ಫಲವಾಗಿ ವಿಧವೆಯ ಗರ್ಭದಲ್ಲಿ ಜನಸಿದ ಮಡಿವಾಳನ ಹುಟ್ಟೇ ಕ್ರಾಂತಿಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಟೋಬಾಂಬ್ ಆಗಿತ್ತು. ಅನೈತಿಕ ಹಾದರದ ಫಲವೆಂದು ನಿಂದೆ, ಅಪಮಾನಗಳಿಗೊಳಗಾದ ಆ ಪುಟ್ಟ ಚೇತನ ಸಮಾಜದ ಸಕಲ ಕ್ರೌರ್ಯಗಳಿಗೂ ಒಳಗಾಗಬೇಕಾಯಿತು. ಭರ್ತ್ಸನ, ಕಟಕೋಕ್ತಿ, ಅವಮಾನಗಳ ತೀವ್ರ ಶಾಖಕ್ಕೆ ಒಳಗಾಗಿ ಕಮರಿ ಸುಟ್ಟು ಹೋಗಬಹುದಾದ ಆ ಚಿಗುರು ಅದೇಗೋ ಸ್ಫೋಟವಾಗಿ ಹೊರಬಂದು ಹೆಮ್ಮರವಾಗಿ ಬೆಳೆಯಿತು. ಪುರೋಹಿತಶಾಹಿಯ ಪೌರುಷದ ಆಟಾಟೋಪಕ್ಕೆ ಬಲಿಯಾಗಿ ಮುರುಟಬಹುದಾದ ಬಂಡಾಯದ ಧ್ವನಿಯಾಗಿ ಹೊರಬಿದ್ದ,

ಶರೀಫನಿಗಾದರೆ ಅಕ್ಕರೆಯ ಅಪ್ಪ – ಅಮ್ಮರ ಆರೈಕೆ ಇತ್ತು. ಸಾಮರ್ಥ್ಯವನ್ನು ಗುರುತಿಸಿ ಪುಂಡರಿಂದ ರಕ್ಷಿಸುವ ಛಂಡಗುರು ಗೋವಿಂದಭಟ್ಟನ ಆಸರೆ ಇತ್ತು. ಮಡಿವಾಳಪ್ಪನ ಹುಟ್ಟಿಗೆ ಸಾಮಾಜಿಕ ಮುದ್ರೆಯೊತ್ತುವ ಅಪ್ಪನಿಲ್ಲ. ಹೊಟ್ಟೆ ತಿಪ್ಪಲಿಗಾಗಿ ಊರ ಬಿಟ್ಟು ಪರವೂರಿನಲ್ಲಿ ಕೂಲಿ ಮಾಡುವ ವಿಧವೆ ಅವ್ವ ಏನು ಆಸರೆ ನೀಡಿಯಾಳು.

ಇಂಥ ವಿಷಮ ವಾತಾವರಣದ ಮಧ್ಯೆ ಸಾಮಾನ್ಯ ವ್ಯಕ್ತಿತ್ವವಾದರೆ ಕುಬ್ಜವಾಗಿ ಬಿಡುತ್ತಿತ್ತೇನೊ. ಆದರೆ ಮಡಿವಾಳನದು ಅಸಮಾನ್ಯ ಪ್ರಚಂಡ ವ್ಯಕ್ತಿತ್ವ. ಎಂತಲೆ ಪರಿಸ್ಥಿತಿಗೆ ಸೆಡ್ಡು ಹೊಡೆದು ನಿಂತ. ಯಾವ ಸಾಮಾಜಿಕ ಸೋಗಾಗಂಗೂ ಒಪ್ಪಂದ ಮಾಡಿಕೊಳ್ಳದ ಬಂಡಾಯಗಾರನಾದ. ಯಾವ, ಯಾರ ಆಸರೆ ಕುಮ್ಮಕ್ಕುಗಳಿಲ್ಲದೆ ತ್ರಿವಿಕ್ರಮನಾಗಿ ಬೆಳೆದ ಅವಧೂತ ಸಂತನಾದ.

ಶರೀಫನ ವ್ಯಕ್ತಿತ್ವವೇ ಬೇರೆ ರಾಜಿ ಮನೋಭಾವದ ಸೌಮ್ಯಯೋಗಿ. ಮಡಿವಾಳಪ್ಪ ವ್ಯವಸ್ಥೆಯನ್ನು ಧಿಕ್ಕರಿಸಿದರೆ: ಶರೀಫ್ ವ್ಯವಸ್ಥೆಯಲ್ಲಿನ ಒಂದು ಜನಪರವೆನ್ನಬಹುದಾದ ನಿಲುವಿನಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಶರೀಫ್ ಒಮ್ಮೊಮ್ಮೆ ಪ್ರವಾಹ ಬಂದತ್ತ ಕೊಚ್ಚಿಕೊಂಡು ಹೋದಂತೆ ಅನಿಸುತ್ತದೆ. ಅಮ್ಮ ಮದುವೆಯಾಗೆಂದರೆ ಮದುವೆಯಾದ ಸಂಸಾರ ಹೂಡಿದ, ಮಗು ಸತ್ತು, ಹೆಂಡತಿ ತೀರಿ ಬದುಕು ಬರಡಾದಾಗ ಮತ್ತೆ ಗುರುವಿನ ನೆನಪಾಯಿತು. ದುಃಖ ಅಸಹನೀಯ ಎನಿಸಿದಾಗ. ಬದುಕು ಭಾರ ಎನಿಸಿದಾಗ; ಗುರು ಸೆರೆ ಕುಡಿ ಎಂದಾಗ ಕುಡಿದ. ಕುಡಿದ ಅಮಲಿನಲ್ಲಿ ತನ್ನನ್ನು ತಾನು ಮರೆತು ಸುಂದರವಾದ ಹಾಡುಗಳನ್ನು ಕಟ್ಟಿದ ಗುರುವಿನ ಮುಲಾಜಿಗಾಗಿ ಬ್ರಾಹ್ಮಣಿಕೆ ಒಪ್ಪಿಕೊಂಡ, ನಂತರ ಬ್ರಾಹ್ಮಣಿಕೆಯ ಪಕ್ಕಾ ವಿರೋಧಿಯಾದ ವೀರಶೈವತ್ವದಲ್ಲಿ ತನ್ನನ್ನು ಹುಡುಕಿಕೊಳ್ಳುವ ಪ್ರಯತ್ನ ಮಾಡಿದ. ತನ್ನದಲ್ಲದ ಅನ್ನದೊಂದು ಸಂಸ್ಕೃತಿಯಲ್ಲಿ ಗುರುತಿಸಿಕೊಳ್ಳುವ ಭರದಲ್ಲಿ ಗಜಿಬಿಜಿಯನ್ನು ಅನುಭವಿಸಿದ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಮಡಿವಾಳ ತನ್ನ ಗಟ್ಟಿಯಾದ ಅನುಭವಗಳ ಮುಖಾಂತರ ಸಮಾಜವನ್ನು ಅರ್ಥೈಸಿಕೊಂಡ, ತನ್ನ ನೋವು ಅಸಹನೀಯವೆನಿಸಿದಾಗ ಸಮಷ್ಟಿ ನೋವಿನಲ್ಲಿ ಅದನ್ನು ನೀಗಿಸಿಕೊಂಡ. ದುರ್ಬಲ ವರ್ಗದವರ ಮೇಲಾಗುವ ಶೋಷಣೆಯನ್ನು ಕಂಡು ರೊಚ್ಚಿಗೆದ್ದ, ಅಷ್ಟೇ ಅಲ್ಲ ಸಂಪ್ರದಯಗಳ ಅರ್ಥಹೀನತೆಯನ್ನು ಯಾವ ಮುಲಾಜಿಲ್ಲವೆ ಬಯಲಿಗೆಳೆದ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದುಡಿವಾಳ – ಶರೀಫ್, ಇವರಿಬ್ಬರ ಬದುಕಿನಲ್ಲಿ ಬಹುತೇಕ ಸಮಾನವೆನ್ನ ಬಹುದಾದ ಒಂದು ಘಟನೆ ಸಂಭವಿಸುತ್ತದೆ. ಆಗ ಇವರಿಬ್ಬರೂ ಪ್ರತಿಕ್ರಿಯಿಸಿದ ರೀತಿಯನ್ನು ಗಮನಿಸಿದರೆ ಇವರಿಬ್ಬರ ವ್ಯಕ್ತಿತ್ವದ ದಟ್ಟ ಪರಿಚಯವಾಗದೆ ಇರದು.

ಗೋವಿಂದ ಭಟ್ಟನಲ್ಲಿ ಅಭ್ಯಾಸ ಮಾಡುವ ಮುಸ್ಲಿಂ ಹುಡುಗನನ್ನು ಕಂಡು ಪುರೋಹಿತಶಾಹಿಯ ಪಟ್ಟಧಾರಿಗಳಾದ ಬ್ರಾಹ್ಮಣರು ಸಹಜವಾಗಿಯೇ ಶರೀಫ್‌ನನ್ನು ಪ್ರತಿಭಟಿಸುತ್ತಾರೆ. ಜನಿವಾರವಿಲ್ಲದವರಿಗೆ ವೇದಾಧ್ಯಯನ ಮಾಡಿಸುವದು ಅಕ್ಷಮ್ಯ ಅಪರಾಧವೆಂದು ವಾದಿಸುತ್ತಾರೆ, ಆಗ ಸ್ವಲ್ಪ ತೀವ್ರಗಾಮಿಯಾದ ಗೋವಿಂದಭಟ್ಟ ಥಟ್ಟನೆ ಎದ್ದು ತನ್ನ ಕೊರಳಿನ ಜನಿವಾರ ತೆಗೆದು ಶರೀಫನ ಕೊರಳಿಗೆ ತೊಡಿಸಿ ಬ್ರಾಹ್ಮಣಿಕೆಯ ಮುದ್ರೆಯೊತ್ತುತ್ತಾನೆ, ಆದನ್ನು ಅತ್ಯಂತ ಹರ್ಷದಿಂದ ಒಪ್ಪಿಕೊಂಡ ಶರೀಫ್

ಹಾಕಿದ ಜನಿವಾರವಾ ಸದ್ಗುರುನಾಥ
ಹಾಕಿದ ಜನಿವಾರವಾ
ಹಾಕಿದ ಜನಿವಾರ ಸೂಕಿದ ಭವಬಾರ
ಲೋಕದೆ ಬ್ರಹ್ಮಜ್ಞಾನ ನೀ ಪಡೆಯೆಂದು
ಸಂಧ್ಯಾವಂದನೆ ಕಲಿಸಿ – ಆನಂದದ
ಬಿಂದು ಮಧ್ಯದಿ ನಿಲಿಸಿ
ನಂದಿಸ ಮನಸು ಆತ್ಮದ ಜಲದಲಿ
ಎಂದೆಂದಿಗೂ ಯಮದಂದುಗವಳಿಯೆಂದು
ಶಿಶುನಾಳಧೀಶ ಗುರು – ತನ್ನೊಡಲೊಳು
ವಶವಾದ ಸೂತ್ರವನು
ನಸುನಗುತ ತೆಗದಲ್ಲಿಯೆ ತೊಡಸಿದ
ಉಸುರಿದ ಮಂತ್ರವ ಹೊಸಬನ ಮಾಡುತ

JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7249

ಎಂದು ಹಾಡನ್ನು ರಚಿಸಿ; ನೆರದ ಜಾತಿವಾದಿಗಳು ಮುಖ ತಗ್ಗಿಸುವಂತೆ ಮಾಡುತ್ತಾನೆ.

ಶರೀಫನಿಗೆ ಗಟ್ಟಿಗುರು ಗೋವಿಂದಭಟ್ಟದೊರೆತು ಮಾರ್ಗ ಸುಲಭವಾಗಿದೆ, ಆದರೆ ಮಡಿವಾಳನಿಗೆ ಗುರುವಾಗಲು ಯಾರೂ ಸಿದ್ಧರಿಲ್ಲ. ಜೀವಿಯ ಹುಟ್ಟಿಗೆ ಬೀಜವೆ ಮುಖ್ಯವೆನ್ನುವದಾದರೆ ಮಡಿವಾಳ ಜಂಗಮವಂಶದವ. ಭೂಮಿಯೆ ಮುಖ್ಯ ವೆನ್ನುವದಾದರೆ ಈತ ಗಾಣಿಗ. ಆದರೆ ಆತ ಒಪ್ಪಿಕೊಂಡ, ವೀರಶೈವತ್ವದ ಪಾರಂಪಾರಿಕ ಮುದ್ರೆ ಬೀಳಬೇಕಾದರೆ ಅಯ್ಯಾಚಾರವಾಗಬೇಕು. ಮಡಿವಾಳನಿಗೆ ಅಯ್ಯಾಚಾರ ಮಾಡಲು ಊರಿನ ಯಾವ ಜಂಗಮನು ಒಪ್ಪುವುದಿಲ್ಲ. ಕೊನೆಗೆ ಸಾತ್ವಿಕ ಸಂತ ಶರಣಬಸಪ್ಪನ ಬಳಿಗೆ ಹೋಗುತ್ತಾನೆ, ಪ್ರಗತಿಪರ ರೈತಾಪಿ ಜನಾಂಗದ ಶರಣಬಸಪ್ಪ ಇವನ ವ್ಯಕ್ತಿತ್ವವನ್ನು ಗುರುತಿಸಿ ಅಪ್ಪಿಕೊಳ್ಳುತ್ತಾನೆ, ನಿರುಪದ್ರವಿಯಾದ ಶರಣಬಸಪ್ಪ ತನ್ನ ಗುರು ಮರುಳಾಧ್ಯರನ್ನು ಮಡಿವಾಳನಿಗೆ ಅಯ್ಯಾಚಾರ ನೀಡಲು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸಲಾಯಿಸುತ್ತಾನೆ. ಆದರೆ ಅಷ್ಟರಲ್ಲಿ ಹಳಪ್ಯಾಟಿ ಬಸಯ್ಯಾ ಮುಂತಾದವರು ಅದನ್ನು ವಿರೋಧಿಸಿ ಹಾದರಕ್ಕೆ ಹುಟ್ಟಿದವನಿಗೆ ಅಯ್ಯಾಚಾರ ಮಾಡಿದರೆ ಮರುಳಾಧ್ಯರಿಗೇನೆ ಬಹಿಷ್ಕಾರ ಹಾಕುವ ಬೆದರಿಕೆ ಹಾಕುತ್ತಾರೆ. ಇದೇ ಮುಂದೆ ದೊಡ್ಡ ರಾಜಕೀಯವಾಗುತ್ತದೆ. ಶರಣಬಸಪ್ಪ ಮಡಿವಾಳನಿಗೆ ಅಯ್ಯಾಚಾರ ಮಾಡಿಸಲೇಬೇಕೆಂದು ಹಟ ಹಿಡಿಯುತ್ತಾನೆ, ಈ ಎಲ್ಲ ಗೊಂದಲವನ್ನು ಕಂಡು ಲೋಕ ಬದುಕಿನ ಕುಟಿಲ ಕಾರಸ್ಥಾನಗಳ ಪರಿಚಯವಿದ್ದ ಮಡಿವಾಳಪ್ಪ ಅಯ್ಯಾಚಾರವನ್ನೇ ಧಿಕ್ಕರಿಸಿ ಬಿಡುತ್ತಾನೆ.

ಐತಾನದಮ್ಮೇನೋ ಜುಮ್ಮಾ ; ದೇಹ
ಮೈಥುನದಿಂದ ಆದ ತಾಯಿ–ತಂದಿಯ ಸೊಮ್ಮು
ಎಲವು ತೊಗಲ ನರಸುತ್ತಿ ಅದು
ಹೊಲದು ಮಾಡಿದ ಮಲಮೂತ್ರವ ತಿತ್ತಿ
ಜಲವು ಯಾವುದು ಹೇಳೋ ನೀ ಮೂಳಕತ್ತಿ
ಹೊಲಸು ಮುಚ್ಚಿಕೊಳ್ಳೋ ನೀ ಮೂಳಕತ್ತಿ :
ಅವ ಇವ ಎಂಬುದ್ಯಾಕೊ ದುಡಕಿ ನಿನ್ನ
ನವಮಾಸ ಹೆತ್ತು ಹೊತ್ತವಳೆ ಕುಂಡಡಕಿ
ಭವದೊಳು ಬರುವದೆಬ್ಬಡಕಿ ಅನು
ಭಾವದ ನೆಲಿ ತಿಳಿ ನಿನ್ನ ನೀ ಹುಡುಕಿ :
ಧರಿಯೊಳಧಿಕ ಬಿದನೂರ ಅಲ್ಲಿ
ಮೆರೆವ ಮಂದಿರ ಮಡಿವಾಳ ಮತಿ
ಸಾರ ಅರವು ಬಲ್ಲನು ಪರಿಪೂರ ಮೇ
ಲೊರಸಿ ತೊಳಸಿದರೆ ಶುಚಿಯಾಯಿತೆ ಶರೀರ

ಒಂದು ಜಾತಿಯ ಮುದ್ರೆಯೊತ್ತುವ ಯಾವ ಸಾಂಪ್ರದಾಯಿಕ ಸಂಸ್ಕಾರಗಳೂ ವ್ಯಕ್ತಿ ಬಾಳಿಗೆ ಅನಿವಾರ್ಯವಲ್ಲ ಎಂಬುದನ್ನು ಮಡಿವಾಳ ನಿಖರವಾಗಿ ತೋರಿಸಿಕೊಡುತ್ತಾನೆ,

ವೇದಾಧ್ಯಯನ, ಪುರಾಣ ಪಠಣ, ಆ ಮೂಲಕ ಅಧ್ಯಾತ್ಮದ ಸಾಧನೆಗೆ ಸಾಂಕೇತಿಕವಾದರೂ, ಬ್ರಾಹ್ಮಣಿಕೆಯ ಮುದ್ರೆಗಳಾದ ಜನಿವಾರ, ಸಂಧ್ಯಾವಂದನೆ ಮುಂತಾದವುಗಳು ಗೋವಿಂದಭಟ್ಟ–ಶರೀಫರಿಗೆ ಅನಿವಾರ್ಯವಾದವೇ ಹೊರತು ಅವನ್ನು ಧಿಃಕ್ಕರಿಸುವದಾಗಲಿಲ್ಲ, ಶರೀಫ್‌ನ ಮೂಲಭೂತ ಒಲವು ವೀರಶೈವ ತತ್ವದ ಕಡೆಗಿದ್ದಂತಿವೆ. ಸಕಲ ಜೀವಾತ್ಮರ ಲೇಸಿನ ತಳಹದಿ ಮೇಲೆ ವೀರಶೈವತತ್ವವನ್ನು ರೂಪಿಸಿದ ಬಸವಣ್ಣನೆ ಜನಿವಾರ, ಬ್ರಾಹ್ಮಣಿಕೆಯನ್ನು ಧಿಃಕ್ಕರಿಸಿರಬೇಕಾದರೆ; ಶರೀಫ್ ಒಪ್ಪಿಕೊಂಡ ಅನಿವಾರ್ಯತೆ ಏನಾಗಿತ್ತು. ಎಂಬ ಪ್ರಶ್ನೆ ಎದುರಾಗುತ್ತದೆ. ಅಯ್ಯಾಚಾರವೆನ್ನುವ ಸಂಸ್ಕಾರ ಹುಟ್ಟಿಕೊಂಡಾಗ, ಆದರ ಆಶಯ ಜನಪರವೇ ಆಗಿರಬಹುದು ಸಮತಾವಾದಿ ಬಸವಣ್ಣ ಸೃಷ್ಟಿಸಿದ ಜಂಗಮತ್ವದ ಕುರುಹಾಗಿಯೇ ಇರಬಹುದು, ಕಾಲ ಕಳೆದಂತೆ ವೀರಶೈವ ಪ್ರಗತಿಪರ ಆಚರಣೆಗಳು ಸಹಿತ ಒಂದು ಪಂಥವನ್ನು ಕಟ್ಟುವ ಹುನಾರಿಗಿಳಿದಾಗ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರ್ಯಾದಿತ ಪುರೋಹಿತಶಾಹಿಯ ಇನ್ನೊಂದು ಮುಖವೇ ಆಗ ತೊಡಗಿದಾಗ. ಮಡಿವಾಳ ಆಯ್ಯಾಚಾರವನ್ನೆ ಧಿ:ಕ್ಕರಿಸಿಬಿಡುತ್ತಾನೆ. ಅಷ್ಟೇ ಅಲ್ಲ ವ್ಯಕ್ತಿಯ ಸಾಧನಾನುಭವಗಳಿಗೆ ಯಾವ ಸಾಂಕೇತಿಕ ಸಂಸ್ಕಾರಗಳು ಜರೂರಿ ಅಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾನೆ.

ಮಡಿವಾಳಪ್ಪ ಸಂಪ್ರದಯುಗಳನ್ನು ಕೆಣಕಿದಂತೆ, ವಿರುದ್ಧ ಬಂಡೆದ್ದಂತೆ ಶರೀಫ್ ಬಂಡೇಳುವುದಿಲ್ಲ. ವ್ಯವಸ್ಥೆ ವಿರುದ್ಧ ಹೂಡಿದ ಸೃಜನಾತ್ಮಕ ಚಳುವಳಿಯ ಆಸು ಸೃಷ್ಟಿಯಾಗಿ ಮಡಿವಾಳನ ಸಾಹಿತ್ಯ ಹೊರಬಿತ್ತು. ಆದರೆ ವ್ಯವಸ್ಥೆಯ ಮಧ್ಯದಲ್ಲಿ ನಿಂತುಕೊಂಡು ಪ್ರಗತಿಪರ ಅನಸಿಕೆಯ ಫಲಮಾತ್ರವಾಗಿ ಶರೀಫ್‌ನ ಸಾಹಿತ್ಯ ನಿರ್ಮಾಣವಾಯಿತು. ಮಡಿವಾಳನ ಪ್ರಾಕ್ಟಿಕಲ್ ಬದುಕಿನ ದಾಖಲೆಗಳೆ ಹಾಡುಗಳಾದವು, ಶರೀಫ್‌ನ ಏಕವ್ಯಕ್ತಿ ವಿಶಿಷ್ಟ ಥೆರಾಟಿಕಲ್ ಬದುಕಿನ ಕನವರಿಕೆಗಳೆ ಹಾಡುಗಳಾದದುಂಟು.

ಆದೇನೆ ಇರಲಿ ಇಲ್ಲಿವರೆಗಿನವಾದ ಯಾರಿಗಿಂತ ಯಾರು ಶ್ರೇಷ್ಟ ಎಂಬ ವ್ಯಕ್ತಿ ವೈಭವಿಕರಣದ ಹಪಾಹಪಿಯಿಂದ ಮಾಡಿದ್ದಲ್ಲ,

ಒಂದು ಕಡೆ ಎನ್, ಎಸ್. ಲಕ್ಷ್ಮೀನಾರಾಯಣಭಟ್ಟರು " ಶರೀಫ್‌ರ ತತ್ವಪದಗಳು ಯಾವ ತತ್ವ ಪದಗಳಿಗಿಂತಲೂ ಹೆಚ್ಚು ಜನಪ್ರಿಯವಾಗಿವೆ. ಅವುಗಳ ಗುಣವೆ ಅಂಥದು ಅವು ಉತ್ತಮ ತತ್ವಪದಗಳು " ಎಂದು ಬರೆದಿದ್ದಾರೆ. ಈ ಹೇಳಿಕೆ ಗಡಿಬಡಿಯಲ್ಲಿ ನೀಡಿದ್ದು ಎಂಬುದನ್ನು ಗುರುತಿಸಬೇಕು. ಏಕೆಂದರೆ ಶರೀಫರಿಗಿಂತ ಉತ್ತಮವಾದ ತತ್ವಪದಗಳು ಕಲಬುರ್ಗಿ ಜಿಲ್ಲೆಯ ಈ ನೆಲದಲ್ಲಿ ಸೃಷ್ಟಿಯಾಗಿವೆ. ಇನ್ನೂ ಒಬ್ಬ ಕವಿ ಆವನ ಕಾವ್ಯ ಇವು ಜನಪ್ರಿಯವಾಗಿವೆ ಎಂದಾಕ್ಷಣ ಅವು ಸರ್ವೋತ್ತಮವಾದವೆಂದೇನಲ್ಲ. ಜನಪ್ರಿಯತೆ ಕಾವ್ಯದ ಗಟ್ಟಿತನದ ನಿಕಷವೇನಲ್ಲ. ಶರೀಫ್‌ರನ್ನು ಅಭ್ಯಸಿಸುವದರೊಂದಿಗೆ ಮಡಿವಾಳಪ್ಪ, ಖೈನೂರು ಕೃಷ್ಣಪ್ಪ. ಚೆನ್ನೂರ ಜಲಾಲ ಸಾಬ, ಮೈಲಾರ ಬಸವಲಿಂಗ, ರಾಮಪೂರದ ಬಕ್ಕ, ತಿಂತಣಿ ಮೋನಪಯ್ಯಾ ಮುಂತಾದ ಅವಧೂತ ಕವಿಗಳನ್ನು ಹೊರಹಾಕಬೇಕು. ಅವರ ಜೀವಪರ, ಜನಪರ ಕಾವ್ಯವನ್ನು ಗುರುತಿಸಿ ಉಳಿಸಿಕೊಳ್ಳದಿದ್ದರೆ ಕನ್ನಡ ಸಾಹಿತ್ಯ ಬಡತನದ ಬೇಗೆಗೆ ಪಕ್ಕಾಗಬಹುದು ಜೋಕೆ. ●

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೮ "ಶರಣರ ಸಾಮಾಜಿಕ ಪ್ರಜ್ಞೆಯ ಭಾಷೆ"

● ಪ್ರೊ. ಕಲ್ಯಾಣರಾವ ಪಾಟೀಲ.

ಶರಣರು ತಾವು ಬದುಕಿದ ಅಂದಿನ ಸಾಮಾಜಿಕ ಸಂದರ್ಭಕ್ಕೆ ಹಲವರಿಂದ ತೀವ್ರವಾಗಿ ಪ್ರತಿಕ್ರಿಯೆ ಕೊಟ್ಟಿದ್ದಾರೆ. ಭಾಷೆಯ ದೃಷ್ಟಿಯಿಂದ ನೋಡುವುದಾದರೆ, ಶಿವಶರಣ ಆದಯ್ಯ ಹೇಳುವಂತೆ :

"ಖ್ಯಾತಿಗೆ ಜೋತು, ಲಾಭಕ್ಕೆ ಲೋಭಿಸಿ, ರಾಜದ್ವಾರದಲ್ಲಿ ಸುಳಿದು ಬಳಲುವ" ಪಂಡಿತ ಮಂಡಳಿಯಿಂದ ಅಂದಿನ ಭಾಷೆ ಮುಗ್ಧ ಜನತೆಯಿಂದ ಬಹುದೂರ ಸರಿದಿತ್ತು. ನಗೆಯಮಾರಿ ತಂದೆ ತಿಳಿಸುವಂತೆ:

"ಕಲ್ಲಿಯ ಹಾಕಿ, ನೆಲ್ಲವ ತಳಿದು, ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ" — ಭಾಷೆಯು ವೇಷಗಾರಿಕೆಯ ಜನರ, ಶೋಷಣೆಯ ಸಾಧನವಾಗಿತ್ತು, ಆದರೆ ಜನಸಾಮಾನ್ಯರ ಆಡುಭಾಷೆ ಅವಹೇಳನಕ್ಕೊಳಗಾಗಿತ್ತು. ಅತಿ ತಾತ್ಸಾರಗೊಂಡು ಅದು ಶೂದ್ರರ, ದರಿದ್ರರ, ದೇಶಿಭಾಷೆಯಾಗಿ ಪರದೇಶಿ ಸ್ಥಿತಿಗೆ ತಲುಪಿತ್ತು. ಇಂತಹ ಪರಿಸ್ಥಿತಿಯಲ್ಲಿ ಶರಣರು ಶೋಷಿತ ವರ್ಗಕ್ಕೆ ಆತ್ಮವಿಶ್ವಾಸ ತುಂಬಿದರು. ಅವರ ದುಡಿಮೆಗೆ ತಕ್ಕ ಗೌರವಾದರಗಳನ್ನು ತಂದರು. ಅದರಂತೆ ಅವರಾಡುವ ಭಾಷೆಯನ್ನು ಕೃಷಿಗೊಳಿಸಿ ಕಾವ್ಯ ಭಾಷೆಯನ್ನಾಗಿಸಿ ಅದಕ್ಕೆ ಪಾವಿತ್ರ್ಯತೆಯನ್ನು ಕೊಟ್ಟರು. ಆ ವೇಷಗಾರಿಕೆಯ ಭಾಷೆಯನ್ನು ಬದಿಗೊತ್ತಿ, ಜನಮನದ ನುಡಿಮಿಡಿದು, ಆಡು ನುಡಿಯ ಕಾಂತಿ ಹೆಚ್ಚಿಸಿದರು,

"ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ"
"ಬಣ್ಣವಿಟ್ಟು ನುಡಿದಲ್ಲಿ ಫಲವೇನು" ?
"ಬರಿಯ ಮಾತಿಂಗೊಲಿವನೇ ದೇವ" ?
"ಮಾತಿನ ಮಾತಿನಲಪ್ಪುದೇ ಭಾಷೆ" ?

ಎಂದು ಭಾಷೆಯ ಹೆಸರಿನಲ್ಲಿ ನಡೆಯುತ್ತಿದ್ದ ಆಡಂಬರದ ಡೊಂಬಾರಾಟವನ್ನು ನಿಲ್ಲಿಸಿದರು. ಹೀಗಾಗಿ ಶರಣರ ಭಾಷೆ ಅದು ಸಹಜ, ಸರಳ, ಸಮರ್ಥ, ಸುಂದರ ಸ್ವರೂಪ ತಾಳಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರಣರ ಸಮಕಾಲೀನ ಸ್ಥಿತಿಗತಿಗಳಲ್ಲಿ : ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಬೌದ್ಧಿಕ ಶೋಷಣೆ – ಜನರಲ್ಲಿ ಅವರಿಸಿದ ಜಾಡ್ಯ – ತುಂಬಿ ತುಳುಕಿದ ಕೊಳೆ – ಇವುಗಳನ್ನು ತೆಗೆದೊಗೆದು ಹೊಸ ಬೆಳೆ ಬೆಳೆಸುವ ಸಾಧನವನ್ನಾಗಿ ಭಾಷೆಯನ್ನು ಶರಣರು ಅವಿಷ್ಕರಿಸಿದರು.

ಇದಲ್ಲದೆ ಅಂದಿನ ಸಮಾಜದಲ್ಲಿ ಅಸಹ್ಯವಾಗಿದ್ದ ಅಸಮತೆಯ, ಅನಾರೋಗ್ಯಕರವಾದ ಸವಾಲುಗಳಿಗೆ ಉತ್ತರ ಕೊಡುವುದಕ್ಕಾಗಿ ಶರಣರು ಜನಸಾಮಾನ್ಯರ ದೈನಂದಿನ ಬದುಕಿನಲ್ಲಿ ಬೆರೆತ ಭಾಷೆಗೆ ಕಾವು ಕೊಟ್ಟರು. ಹೀಗಾಗಿ ಅವರ ಭಾಷೆ– ಅವರಾಡುವ ಮಾತು ಕೇವಲ ಮಾತಾಗಿ ಉಳಿಯದೆ, ಆ ಮಾತು ಜ್ಯೋತಿಯಾಗಿ, ಮುಗ್ಧ ಜನತೆಯ ಬದುಕನ್ನು ತಿದ್ದಿ, ಶುದ್ಧಗೊಳಿಸುವ ಮಾಧ್ಯಮವಾಗಿ ಮಾರ್ಪಟ್ಟಿತು. ಅದಕ್ಕಾಗಿ ಆತ್ಮೀಯವಾಗಿ ತಿಳಿಯಾಗಿ ತಿಳಿಹೇಳುವ ಇವರ ಭಾಷೆ ಯಾವುದೇ ಛಂದೋಬಂಧಗಳ ಜಂಜಾಟಕ್ಕೆ ನಿಲುಕಲಿಲ್ಲ.

ಲೋಕಾನುಭಾವಿಗಳಾದ ಶರಣರು ಲೋಕ ವ್ಯವಹಾರದಲ್ಲಿದ್ದ ಲೋಕೋಕ್ತಿಗಳನ್ನು ಸಂದರ್ಭಕ್ಕೆ ತಕ್ಕಂತೆ ಹೊಂದಿಸಿ ವ್ಯಕ್ತಗೊಳಿಸಿದರು.

ಉದಾ : "ತುಂಬಿದುದು ತುಳುಕದು ನೋಡಾ"
"ಕತ್ತೆ ಬಲ್ಲುದೆ ಕಸ್ತೂರಿಯ ವಾಸನೆಯ"
"ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು" ?
"ಹೊರಸಿಕೊಂಡ ಹೋದ ನಾಯಿ ಮೊಲನೇನ ಹಿಡಿವುದಯ್ಯ"

ಮುಂತಾದ ನಾಣ್ಣುಡಿಗಳನ್ನು ಸರ್ವರಿಗೂ ಮನ ಮುಟ್ಟುವಂತೆ, ಎದೆ ತಟ್ಟುವಂತೆ, ಬಳಸಿಕೊಂಡರು. ಇಷ್ಟೇ ಅಲ್ಲದೆ ಇವರ ವಚನಗಳಲ್ಲಿ ಬರುವ ಎಷ್ಟು ? ನುಡಿಗಟ್ಟುಗಳು ಇಂದಿಗೂ ಜನಮನದಲ್ಲಿ ರಕ್ತಗತವಾಗಿ ಬೆರತುಹೋಗಿವೆ.

"ದಯವೇ ಧರ್ಮದ ಮೂಲವಯ್ಯಾ"
"ಸದುವಿನಯವೇ ಸದಾಶಿವನ ಒಲುಮೆಯಯ್ಯ"
"ಮಾತೆಂಬುದು ಜ್ಯೋತಿರ್ಲಿಂಗ"
"ಕಾಯಕವೇ ಕೈಲಾಸ"
"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ"

ಇಂಥ ಸಾವಿರಾರು ನುಡಿಮುತ್ತುಗಳು ಜನರ ಜೀವನದಲ್ಲಿ ಜೀವಂತವಾಗಿ ನಡೆಯುತ್ತ ಬಂದಿದೆ.

ಅಂದಿನ ಸಮಾಜದಲ್ಲಿದ್ದ ಅನಿಷ್ಟ ಅಂಧಶ್ರದ್ಧೆಗಳನ್ನು, ಸಾವಿರಾರು ಸಮಸ್ಯೆಗಳನ್ನು ಕಂಡ ಶರಣರು, ಅವನ್ನು ನಿವಾರಿಸುವುದಕ್ಕೋಸ್ಕರ ಭಾಷೆಯನ್ನು ಅಸ್ತ್ರದಂತೆ–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿತವಾಗಿ ಬಳಸಿದ್ದುಂಟು. ಉದಾ : "ವೇದ ಶಾಸ್ತ್ರ ಆಗಮ ಪುರಾಣಂಗಳೆಂಬುವು ಕೊಟ್ಟಣದ ನುಚ್ಚು ತೌಡು ಕಾಣಿಭೋ"
"ವಿಸಯ್ಯ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯ"
"ಎಲೆ ಎಲೆ ಮಾನವಾ ಅಳಿಯಾಸೆ ಬೇಡವೋ" "ಎಲವೋ ಎಲವೋ"......

ಎಂದು ಉಚ್ಚರಿಸುವಾಗ ಇವರ ಭಾಷೆ ಬಹಳ ಮೊನಚಾಗಿರುತ್ತದೆ, ಇಂತಹ ಸಿಟ್ಟಿನ ನುಡಿಗಟ್ಟುಗಳ ಹಿಂದೆ ಶರಣರ ಸಾತ್ವಿಕ ರೋಷ ಮನಗಾಣಬೇಕು, ಮೇಲುನೋಟಕ್ಕೆ ವಿಷಂಬಸಂತೆ ತೋರಿದರೂ ಅಲ್ಲಿ ಪ್ರೀತಿಯಿಂದ ತಿದ್ದುವ, ತಿಳಿಸುವ ತೀವ್ರ ಕಳ ಕಳಿ ಇದೆ, ಅಂತೆಯೇ ಶರಣರ ವಚನಗಳು ಆದರಕ್ಕೆ ಕಹಿಯಾದರೂ ಉದರಕ್ಕೆ ಸಿಹಿ – ಅವು ಬೇವು ಸವಿದಂತೆ,

ಶರಣರು ಅಧಿಕಾರವಾಣಿಯಿಂದ ಆಡುವ ಮಾತು ಅನೇಕ ಸಲ ಸಹಜವಾಗಿ ಅಲಂಕಾರಗಳಿಂದ ಕೂಡಿರುವುದುಂಟು. ಉದಾ :–

"ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತೆ"
"ಅಂಧಕನ ಕೈ ಅಂಧಕ ಹಿಡಿದಂತೆ"
"ತೊರೆಯಲದ್ದಿ ಹೋಹನೀಸಲರಿಯದವರ ತೆಗೆದಂತೆ" –

ಮುಂತಾದ ಉಪಮೆಗಳು ನೇರವಾಗಿ ಎದೆ ಮುಟ್ಟುತ್ತವೆ.

"ನುಡಿದರೆ ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಫಟಿಕದ ಶಲಾಕೆಯಂತೆ" ಎಂದು ಹೇಳುವಲ್ಲಿ ಬಳಸಿದ ಪರಿಚಿತ ಪ್ರಪಂಚದ ಪ್ರತಿಮೆಗಳು ಪರಿಣಾಮಕಾರಿಯಾಗಿ ಜನರಾಡುವ ಮಾತು ಹೇಗೆ ಮೌಲಿಕವಾಗಿರಬೇಕು – ಎಷ್ಟು ತೂಕಬದ್ಧವಾಗಿರಬೇಕು, ಆ ಭಾಷೆ ಸತ್ವಪೂರ್ಣವಾಗಿರಬೇಕೆಂಬುದನ್ನು ಸರಳ ಮಾತುಗಳಲ್ಲಿ ವಿವರಿಸಿದ್ದು ಔಚಿತ್ಯ–ಪೂರ್ಣವಾಗಿದೆ. ಮತ್ತೆ ಕೆಲವೊಮ್ಮೆ ಮನಸ್ಸನ್ನು ಓತಿ, ಗೋಸುಂಬೆ, ಮರ್ಕಟಗಳಿಗೆ; ಹೀನತನವನ್ನು – ಸೊಣಗ, ಹಂದಿಗಳಿಗೆ; ಮುಗ್ಧತೆಯನ್ನು ಪಶುವಿಗೆ ಹೋಲಿಸಿರುವುದುಂಟು.

"ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಾ" - ಎಂಬ ರೂಪಕದಲ್ಲಿ ಆಡು ಮಾತಿನ ಮೋಡಿಯನ್ನು ನೋಡಬಹುದು, ಸರಳ ಚಿತ್ರ ಕೊಡುತ್ತಲೇ ಮಾನಸಿಕ. ದ್ವಂದ್ವ ಸ್ಥಿತಿಯನ್ನು ಮನದಟ್ಟು ಮಾಡುವ, ವಿಷಯವನ್ನು ಬಿಚ್ಚಿ ತೋರಿಸುವ ರೀತಿ – ಅಪ್ಪಟ ಸಮಾಜಮುಖಿಯಾಗಿದೆ.

"ಹಾವು ತಿಂದವರ ನುಡಿಸಬಹುದು, ಗರ ಹೊಡೆದವರ ನುಡಿಸಬಹುದು"
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ" ಎಂಬಲ್ಲಿ ಸಿರಿವಂತರ ಸ್ವಭಾವ ತಿಳಿಸುತ್ತ ಮಾಡುವ ಸಮಾಜ ವಿಮರ್ಶೆಯೂ ಅಷ್ಟೇ ಆಲೋಚನೆಗೆ ಆಸ್ಪದ ಮಾಡಿಕೊಡುತ್ತದೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುಹೋಗದ ಮುನ್ನ
ಹಲ್ಲು ಹೋಗಿ, ಬೆನ್ನುಬಾಗಿ, ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ–ಇಂಥ ವಚನಗಳಲ್ಲಿ ಅನಾಯುಸವಾಗಿ ಬಳಸಿದ ಪ್ರಾಸಾನು ಪ್ರಾಸಗಳ ಕಣ್ಮುಂದೆ ತರುವ ಶಬ್ದ ಚಿತ್ರಗಳು ಶರಣರು ಭಾಷೆಯನ್ನು ಕಲೆಯಾಗಿಸಿದುದಕ್ಕೆ ಸಾಕ್ಷಿಯಾಗಿದೆ.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನಬಣ್ಣಿಸಬೇಡ; ಇದಿರು ಹಳಿಯಲು ಬೇಡ" ಎಂಬ ವಚನ ದಲ್ಲಿರುವ ವಿಶಿಷ್ಟ ಪದ–ಪದಗಳ ರಚನೆಯಲ್ಲಿಯೇ– ಆದರ್ಶ ಸಮಾಜದ ರಚನೆಯನ್ನು ನೈತಿಕ ಮೌಲ್ಯಗಳ ಪ್ರತಿಪಾದನೆಯನ್ನು ಕಾಣಬಹುದು,

"ಏನು ಬಂದಿರಿ, ಹದುಳವಿದ್ದರೆ. ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ ?" "ಮೃದು ವಚನವೇ ಸಕಲ ಜಪಂಗಳಯ್ಯ" "ಸದುವಿನಯವೇ ಸದಾಶಿವನ ಒಲುಮೆ ಯಯ್ಯಾ" – ಇತ್ಯಾದಿ ಮಾತುಗಳಲ್ಲಿ ಸಾಂಸ್ಕೃತಿಕ ಸೌಜನ್ಯ ಗುಣವನ್ನು ಸರಳವಾಗಿ ನಿರೂಪಿಸಲಾಗಿದೆ,

"ಇವನಾರವ, ಇವನಾರವ, ಇವನಾರವ–ಎಂದೆನಿಸದಿರಯ್ಯಾ" – ಎಂಬಲ್ಲಿ ಪರಕೀಯ ಭಾವ ತೆಗೆದು ಆತ್ಮೀಯತೆ ತರುವ ವಿಚಾರದಲ್ಲಿ ಆಡು ಮಾತಿನ ಲಯ ಶಬ್ದಗಳ ಪುನರುಕ್ತಿಯೂ ಆತ್ಮೀಯವಾಗಿದೆ,

"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ" ಎಂದು ತಿಳಿಸುವಲ್ಲಿ ಬದುಕಿನ ತಿರುಳನ್ನೆ ತೋರಿಸಲಾಗಿದೆ,

ಹೀಗೆ ಶರಣರು ಕಿರುಗಾತ್ರದಲ್ಲಿಯೇ ಹಿರಿದಾದ ಅರ್ಥ ಹುದುಗಿಸಿ ಚಿತ್ರಯುಕ್ತ ಮುಕ್ತಕರೂಪ ಕೊಡುವಾಗ ಶಬ್ದ ಶಿಲ್ಪಿಗಳಾಗಿ ಕಂಗೊಳಿಸುತ್ತಾರೆ. ಆಡು ನುಡಿಗೆ ಅವರು ಕೊಟ್ಟ ಕಾವ್ಯದ ಎರಕ ಬಳಸಿದ ರೀತಿ. ಈ ನಿಟ್ಟಿನಲ್ಲಿ ಶರಣರ ಪ್ರತಿಭೆ ಮತ್ತು ಪ್ರಯತ್ನಗಳು ಕನ್ನಡಕ್ಕಂತೂ ಹೊಸ ಪ್ರಯೋಗವೆನ್ನಲೇಬೇಕಾಗುತ್ತದೆ.

ಚೆನ್ನಬಸವ ಹೇಳುವಂತೆ "ಶಬ್ದ ಸೋಪಾನವ ಕಟ್ಟಿ, ನಡೆಸಿದ ಶರಣು" ಸಮಾಜದ ಎಲ್ಲ ಮಗ್ಗುಲುಗಳ ಜನಮನ ಮುಟ್ಟಿ ಎಚ್ಚರಿಸಿದರು. ಕತ್ತಲು ಲೋಕ ದಲ್ಲಿ ಕಣ್ಮರೆಯಾಗಿದ್ದ – ಬಟ್ಟೆ ಒಗೆಯುವವ, ಮೆಟ್ಟು ಹೊಲಿಯುವ, ಬುಟ್ಟಿ ಮಾಡುವವ ಮೇದಾರ, ನೇಕಾರ, ತಳವಾರ, ದನ ಕಾಯುವವ, ದೋಣಿ ನಡೆಸುವವ ಮುಂತಾದ ದುಡಿವ ವರ್ಗ, ಮತ್ತೊಂದು ಕಡೆ,

ಮೇಲೆ ಗುಂಪಾಗಿ ಬಿದ್ದ ಮಹಿಳಾ ಲೋಕವೂ ಕೂಡ ಮೈಕೊಡವಿ ಎದ್ದು ಸೃಜನ ಶೀಲತೆಯಲ್ಲಿ ತೊಡಗಿದ್ದಂತೂ ಕನ್ನಡ ಭಾಷೆಯ ಚರಿತ್ರೆಯಲ್ಲಿ ಐತಿಹಾಸಿಕ ಸತ್ಯ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಟ್ಟಿನಲ್ಲಿ – " ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ " ಎಂಬ ಶರಣರ ಧ್ಯೇಯ ವಾಕ್ಯದಂತೆ – ಅಂದಿನ ಕಾಲಮಾನದ ಸಾಂಸ್ಕೃತಿಕ ಸ್ಥಿತಿ ಹೇಗೆ ಸ್ಥಾವರದಿಂದ ಜಡತ್ವ ಜಂಗಮ ಚಲನಶೀಲ ವಾಯಿತೋ ಹಾಗೆಯೇ ಶರಣರ ಸಾಮೂಹಿಕ ಜಾಗ್ರತಿಯ, ಸಮಷ್ಟಿ ಪ್ರಜ್ಞೆಯ, ಸಮಗ್ರ ಕ್ರಾಂತಿಯ ಕಿರಣವಾಗಿ ಭಾಷೆ ಅಭಿವ್ಯಕ್ತಿ ಕಂಡಿತು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೯ ಧರ್ಮದ ಸ್ವರೂಪ ಮತ್ತು ಅರ್ಥವ್ಯಾಪ್ತಿ :

● ಪ್ರೊ. ವಿ. ಜಿ. ಪೂಜಾರ.

ಧರ್ಮವೆಂಬ ಪದಕ್ಕೆ ನಾವಿಂದು ಸಾಮಾನ್ಯವಾಗಿ ಜಾತಿ ಎಂಬರ್ಥವನ್ನು ಹೇಳುತ್ತ ಅದನ್ನು ಬಹಳ ಸೀಮಿತವಾದ ಪರಿಧಿಯೊಳಗೆ ಹಿಡಿದಿಟ್ಟದ್ದೇವೆ, ವಾಸ್ತವವಾಗಿ ಧರ್ಮ ಎಂದರೆ ಜಾತಿ ಅಲ್ಲ. ಜಾತಿ ಬಹಳ ಸಂಕುಚಿತವಾದ ಅರ್ಥವನ್ನೊಳಗೊಂಡುದು, ಧರ್ಮ ವಿಶಾಲಾರ್ಥವನ್ನು ಒಳಗೊಂಡುದು. "ಧೃ" ಎಂಬ ಸಂಸ್ಕೃತ ಪದದಿಂದ ಧರ್ಮ ನಿಷ್ಪನವಾಗಿದೆ, "ಧೃ" ಎಂದರೆ ಧರಿಸು, ಯಾವುದು ನಮ್ಮನ್ನು ಧರಿಸಿದೆ ಅಂದರೆ ನಮ್ಮನ್ನು ಎತ್ತಿ ಹಿಡಿದಿದೆ. ಇಲ್ಲವೆ ಈ ರೀತಿ ಸುಸಂಸ್ಕೃತರನ್ನಾಗಿ ಮಾಡಿದೆ ಅದು ಧರ್ಮ, ಧರ್ಮ ಇದೊಂದು ವಿಧದ ನಡೆ, ಜೀವನ ವಿಧಾನ, ಧರ್ಮಕ್ಕೆ ನಾವೂ ಈ ರೀತಿ ವಿಧ, ವಿಧ ಅರ್ಥ ಹೇಳಿದರೂ ಆ ಅರ್ಥಗಳಲ್ಲಿ ಅದನ್ನು ಹಿಡಿದಿಡಲಾಗದು, ಅದು ಸಂಪೂರ್ಣವಾಗಿ ಮಾನವನನ್ನೇ ಆವರಿಸಿದ ವಿಚಾರ ಪ್ರಣಾಲಿಯಾಗಿದೆ. ಆತನ ಸಂಸ್ಕೃತಿಯ ಉದಯದೊಂದಿಗೇ ಅದು ಉದಿಸಿದೆ, ಮಾನವನ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಅದು ಹಾಸುಹೊಕ್ಕಾಗಿದೆ, ಅದೊಂದು ವಿಧದ ಮನೋಧರ್ಮವೇ ಆಗಿದೆ. ಈ ಮನೋಧರ್ಮವನ್ನು ಮಾನವನಿಂದ ಹೊರಗಿರಿಸಲು ಸಾಧ್ಯವಿಲ್ಲ ಎನ್ನುದಷ್ಟರ ಮಟ್ಟಿಗೆ ಅದು ಆತನೊಡನೆ ಅನುಭಾವಿಯಾಗಿ ಬೆರೆತು ಕೊಂಡಿದೆ, ನಮ್ಮ ನಡೆ–ನುಡಿಗಳಲ್ಲಿಯ ಆದರ್ಶ ಶುಚಿತ್ವಗಳೇ, ನ್ಯಾಯ–ನೀತಿಗಳೇ ಧರ್ಮವೆಂದರೂ ನಡೆದೀತು, ವ್ಯಕ್ತಿಯನ್ನು ಸಮಾಜವನ್ನು ಉದ್ಧರಿಸುವ ಉದ್ದೇಶ ಧರ್ಮದ್ದಾಗಿದೆ.

ಧರ್ಮಕ್ಕೆ ಎರಡು ಮುಖಗಳಿವೆ. ಒಂದು ತತ್ವ ಮತ್ತೊಂದು ಆಚರಣೆ. ಜೀವ ಜಗತ್ತು ಮತ್ತು ಈಶ್ವರ ಇವುಗಳ ಸಂಬಂಧವನ್ನು ಸ್ವರೂಪವನ್ನು ದಾರ್ಶನಿಕರು. ಅನುಭಾವಿಗಳು ನಡೆಸಿದ ಚಿಂತನೆ, ಜಿಜ್ಞಾಸೆ ಧರ್ಮದ ತತ್ವ ಮುಖವಾಗಿದೆ. ಈ ಮುಖವನ್ನು ವೇದ, ಉಪನಿಷತ್ತು, ಬೈಬಲ್, ಕುರಾನ್, ವಚನ, ಕೀರ್ತನೆ ಮುಂತಾದವುಗಳಲ್ಲಿ ಕಾಣುವೆವು, ಈ ಕೃತಿಗಳಲ್ಲಿನ ತತ್ವಗಳನ್ನು ಜನ ತಮ್ಮ ದೈನಂದಿನ ಜೀವನದಲ್ಲಿ ಆಚರಿಸಿ ತೋರಿಸುವುದನ್ನು ಆಚರಣೆಯ ಮುಖದಿಂದ ತಿಳಿಯುವೆವು. ಇದೇ ಬಹು ಮುಖ್ಯವಾದುದು. ಇವು ಒಂದರ್ಥದಲ್ಲಿ ಜ್ಞಾನ ಮತ್ತು ಕ್ರಿಯೆಗಳಿದ್ದ ಹಾಗೆ. ಜ್ಞಾನಕ್ಕೆ ಮಹತ್ವವೇನೋ ಇದೆ. ಆದರೆ ಇದಕ್ಕಿಂತ ಆ ಜ್ಞಾನವನ್ನು ಕ್ರಿಯೆಯಲ್ಲಿ ತರುವುದಕ್ಕೆ ಮಿಗಿಲಾದ ಸ್ಥಾನವಿದೆ. ಹೀಗೆ ತಂದಾಗ ಧರ್ಮವನ್ನು ನಾವು ಸರಿಯಾಗಿ ಅರ್ಥಯಿಸಿ ಕೊಂಡಂತಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರ್ಮವನ್ನು ಮತವೆಂದೂ ಕೆಲವರು ಕರೆಯುವರು. ಆದರೆ ಧರ್ಮವೇ ಬೇರೆ ಮತವೇ ಬೇರೆ. ಎರಡಕ್ಕೂ ಬಹಳ ಅಂತರವಿದೆ, ಮತ ನಂಬಿಕೆಗೆ ಸಂಬಂಧಿಸಿದರೆ, ಧರ್ಮ ಆ ನಂಬಿಕೆಗಳನ್ನು ಆಚರಣೆಗೆ ತಂದು ತೋರಿಸುವುದಕ್ಕೆ ಸಂಬಂಧಿಸಿದೆ. ಮತ ನಂಬಿಕೆಗಳನ್ನು, ತತ್ವಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡ ಮಡುವಿನಂತಿದ್ದರೆ, ಧರ್ಮ ಆ ಮಡು ಒಂದೆಡೆ ನಿಲ್ಲದಂತೆ ಮಾಡುವುದು. ಮಡುವಿನಲ್ಲಿ ನೀರು ಬಹಳ ಕಾಲ ಹಾಗೆಯೇ ಉಳಿದರೆ ದುರ್ವಾಸನೆ ಹೊರಟು ಸುತ್ತಲಿನ ವಾತಾವರಣವೇ ದೂಷಿತ ವಾಗುವುದು, ಧರ್ಮ ಮತ ಆ ಮಡುವಿನಲ್ಲಿಯ ನೀರು ಸದಾ ಹರಿಯುವಂತೆ ಮಾಡುವ ಕಾಲುವೆ ಇದ್ದಂತೆ ಧರ್ಮ ಮತದಲ್ಲಿನ ನಂಬಿಕೆ, ತತ್ವ ಮತ್ತು ಸಿದ್ಧಾಂತ ಗಳಿಗೆ ನವ ಚೈತನ್ಯ ತುಂಬಿ ಅವುಗಳನ್ನು ಸಮಾಜದಲ್ಲಿ ಕ್ರಿಯಾಮುಖವಾಗಿ ಪಸರಿಸು ವಂತೆ ನೋಡಿಕೊಳ್ಳುವುದು. ಹೀಗೆ ತತ್ವ. ಸಿದ್ಧಾಂತಗಳನ್ನು ಸಂವಹನ (ಚಲನೆ) ಗೊಳಿಸುವುದರ ಮೂಲಕ ಧರ್ಮ ಮಾನವನಿಗೆ ಪ್ರಮುಖವೆನ್ನಿಸುವುದು, ಮನುಷ್ಯ-ಮನುಷ್ಯರನ್ನು ಹತ್ತಿರಕ್ಕೆ ತಂದು ಧರ್ಮ ಅವರನ್ನು ಭಾವನಾತ್ಮಕವಾಗಿ ಬೆಸೆಯುತ್ತದೆ, ಅವರಲ್ಲಿ ಮಾನವೀಯ ಸಂಬಂಧಗಳನ್ನು ಏರ್ಪಡಿಸುತ್ತದೆ. ಗುಂಪುಗೂಡಿ ಬಾಳಲು ಕಲಿಸುತ್ತದೆ. ಹೀಗೆಂದ ಮಾತ್ರಕ್ಕೆ ಧರ್ಮ ನೇರವಾಗಿ ತತ್ವಗಳನ್ನು ಬೋಧಿಸುತ್ತದೆ ಎಂದಲ್ಲ. ಪರೋಕ್ಷವಾಗಿ ಅವರಿಗೆ ಮನಂಬುಗುವ ಹಾಗೆ ಮನಗಾಣಿಸುತ್ತದೆ. ಒಳ್ಳೆ ಯದು-ಕೆಟ್ಟದು-ಎರಡನ್ನೂ ಅವರೆದುರು ಬಿಚ್ಚಿಡುತ್ತ ಅವರ ಮನಸ್ಸನ್ನು ಪ್ರವೇಶಿಸಿ ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಸುವುದು. ಜಾತಿ ಹಾಗು ಮತಕ್ಕಿಂತ ಧರ್ಮ ದೊಡ್ಡದು ಮತ್ತು ವ್ಯಾಪಕವಾದ, ವೈವಿಧ್ಯಮಯವಾದ ಅರ್ಥವನ್ನು ಒಳಗೊಂಡುದು ಧರ್ಮದಲ್ಲಿ ತರ ತಮ ಭಾವ ಮೇಲು-ಕೀಳು ಎಂಬುದೇ ಇಲ್ಲ. ಜಾತಿಗೋಡೆಗ ಳಂತೂ ಮೊದಲೇ ಇಲ್ಲ. ಇವು ನೆಲಸಮವಾದಾಗಲೇ ಅಲ್ಲಿ ಧರ್ಮದ ಮಂದಿರ ನಿರ್ಮಾಣವಾಗುವುದು ಧರ್ಮ ಒಟ್ಟಿನಲ್ಲಿ ಮಾನವನ ಒಳಿತಿಗಾಗಿ ಇರುವಂಥದು. ಇದು ದುಃಖಿತರನ್ನು ಸಂಕಟದಲ್ಲಿ ಸಿಲುಕಿದವರನ್ನು ದೀನ-ದುರ್ಬಲರನ್ನು ಶರಣಾಗತ ರಾದವರನ್ನು ರಕ್ಷಿಸುವಲ್ಲಿ ತನ್ನಂತೆಯೇ ಇನ್ನೊಬ್ಬರೂ ಎಂದು ತಿಳಿಯುವಲ್ಲಿ, ಇನ್ನೊಬ್ಬರ ಸುಖದಲ್ಲಿ ತನ್ನ ಸುಖವನ್ನು ಅನುಭವಿಸುವುದರಲ್ಲಿ ತನ್ನ ಸಾರ್ಥಕತೆ ಯನ್ನು ಕಂಡುಕೊಳ್ಳುತ್ತದೆ. ಇಂದು ಧರ್ಮದ ಹಿಂದೆ ದುತವನ್ನೂ ಸೇರಿಸಿ ಒಟ್ಟಿಗೆ ಮತ ಧರ್ಮವೆಂದು ವ್ಯಾಪಕಾರ್ಥದಲ್ಲಿ ಬಳಸಲಾಗುತ್ತಿದೆ,

ಧರ್ಮದ ಇತಿಹಾಸವನ್ನು ಅವಲೋಕಿಸಿದರೆ ಅದರ ಕಾರ್ಯರಂಗ ಅತ್ಯಂತ ವ್ಯಾಪಕವೂ, ವೈವಿಧ್ಯಮಯವೂ ಆದುದಾಗಿದೆ, ಮಾನವನಲ್ಲಿರುವ ಹುಟ್ಟು ಸ್ವಭಾವ ವನ್ನು ಮೊದಲು ಮಾಡಿಕೊಂಡು ಸಾಮಾಜಿಕ ನೀತಿ ನಡಾವಳಿಯವರೆಗೆ ಅದರ ಅರ್ಥವ್ಯಾಪ್ತಿ ಪಸರಿಸಿದೆ, ಸುಮಾರು ಐದು ಸಾವಿರ ವರ್ಷಗಳಿಂದಲೂ ಧರ್ಮ ಮಾನವನ ಮೇಲೆ ಅವ್ಯಾಹತವಾದ ಪ್ರಭಾವವನ್ನು ಬೀರುತ್ತ ಬಂದಿದೆ, ಮತ್ತು ಜೀವನದ ಎಲ್ಲಾ ರಂಗಗಳಲ್ಲೂ ಅದು ಮಾನವನ ಮೇಲೆ ಸವಾರಿ ಮಾಡುತ್ತಾ ಆತ ನನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಬಂದಿದೆ, ಆತನ ವಿಕಾಸದ ಪ್ರತಿಯೊಂದು ಹಂತದಲ್ಲೂ ಅದು ಬಗೆ ಬಗೆಯ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಮಾಡುತ್ತಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಂದಿದೆ. ಒಟ್ಟಿನಲ್ಲಿ ಆತನ ವ್ಯಕ್ತಿತ್ವ ವಿಕಾಸದಲ್ಲಿ ಅದು ಆಡಿದ ಪಾತ್ರ ಬಹು ಮುಖ್ಯವಾದುದು.

"ಧರ್ಮ" ಎಂದರೆ ಅಮಲು ತರಿಸುವ ಅಫೀಮು ಎಂದು ಕೆಲವರು ಅಭಿಪ್ರಾಯ ಪಡುವರು, ಇನ್ನು ಕೆಲವರಿಗೆ ಧರ್ಮ ಎಂಬ ಎರಡಕ್ಷರ ಕೇಳಿದರೇನೇ ಆಗದು. ಅವರಿಗೆ ಅದೊಂದು ಬಗೆಯ ಅಲರ್ಜಿ ಅಷ್ಟೇ, ಮತ್ತೆ ಕೆಲವರು ಧರ್ಮವೇ ಮಾನವನ ವೈಚಾರಿಕ ಮತ್ತು ಸಾಮಾಜಿಕ ಪ್ರಗತಿಗೆ ಅಡ್ಡಿಯಾಗಿದೆ ಇದನ್ನು ಕಿತ್ತೊಗೆಯ ಬೇಕು, ಒದ್ದೋಡಿಸಬೇಕು ಎಂದೆಲ್ಲ ಅಭಿಪ್ರಾಯ ಪಡುವರು, ವಾಸ್ತವವಾಗಿ ಇವರಾರೂ ಧರ್ಮದ ನಿಜವಾದ ಅರ್ಥವನ್ನೇ ಅರಿಯದವರು ಎಂದು ನನ್ನ ಸ್ವಪ್ರಾಭಿಪ್ರಾಯ, ಧರ್ಮ ಮನುಷ್ಯನನ್ನು ನಿಜವಾದ ಅರ್ಥದಲ್ಲಿ ಮಾನವನನ್ನಾಗಿಸಿದೆ. ಆತನಲ್ಲಿಯ ಮೃಗೀಯ ಗುಣವನ್ನು ನಿರ್ಮೂಲನ ಮಾಡುತ್ತ ಚರಿತ್ರೆಯುದ್ದಕ್ಕೂ ಆತನ ಸುಖ–ದುಃಖಗಳಲ್ಲಿ ಸಹಭಾಗಿಯಾಗಿ ಸಾಂತ್ವನ ಹೇಳುತ್ತ ಬಂದಿದೆ.

ಇನ್ನು ಧರ್ಮ ಎಲ್ಲರನ್ನೂ ತನ್ನ ಸ್ಮೃತಿ ಪಟಲದಲ್ಲಿ ಉಳಿಸಿಕೊಳ್ಳುತ್ತ ಬಂದಿಲ್ಲ, ಎಷ್ಟೋ ಜನ ರಾಜರು, ಚಕ್ರವರ್ತಿಗಳು ಸಾಮ್ರಾಟರು, ಅಹಂಭಾವಿಗಳು ಧರ್ಮ ರಥದ ಚಕ್ರದಡಿ ಸಿಕ್ಕು ನುಚ್ಚುನೂರಾಗಿ ಹೋಗಿದ್ದಾರೆ. ಆ ಕಾಲದ ಜನ ಇವರನ್ನು ನೆನಪಿಟ್ಟು ಗ್ರಂಥಗಳಲ್ಲಿ ಇವರ ಚರಿತ್ರೆಯನ್ನು ಬರೆಯುತ್ತ ಬಂದರೂ ಧರ್ಮ ಮಾತ್ರ ಇವರನ್ನು ಕಡೆಗಣಿಸುತ್ತ ಬಂದಿದೆ. ಬಹುಶಃ ಇದಕ್ಕೆ ಕಾರಣ ಧರ್ಮದ ದೃಷ್ಟಿ ಯಾವಾಗಲೂ ಸತ್ಯಸಂಧರ, ಪ್ರಾಮಾಣಿಕರ, ನೀತಿ ಮಾರ್ಗದಲ್ಲಿ ನಡೆಯುವವರ ಕಡೆಗಿದ್ದುದೇ ಆಗಿದೆ. ಅದೇ ಧಾರ್ಮಿಕ ಮಹಾಪುರುಷರ ಸಾಧು–ಸಂತ ಅನುಭಾವಿಗಳ ಚರಿತ್ರೆಯನ್ನು ಧರ್ಮ ಅಚ್ಚಳಿಯದೇ ಉಳಿಸಿಕೊಂಡು ಬಂದಿದೆ. ಜನರ ಬಾಯಲ್ಲೂ ಇಂಥವರು ಇಂದೂ ಇರುವುದೇ ಇದಕ್ಕೆ ಸಾಕ್ಷಿಯಾಗಿದೆ. ಧಾರ್ಮಿಕ ಮಹಾಪುರುಷರದು ಸಾತ್ವಿಕವಾದ ಮಹಾಜೀವನ. ಇವರು ಸಾಮಾನ್ಯರಂತೆ ಆಸೆ, ಆಮಿಷಾದಿಗಳಿಗೆ ಹೋರಾಡುವವರಲ್ಲ. ತಮ್ಮ ವೈಯಕ್ತಿಕ ಬದುಕನ್ನೇ ಗಂಧದ ಕೊರಡಿನಂತೆ ಇನ್ನೊಬ್ಬರಿಗಾಗಿ ಸವೆಸಿದವರು. ಮೇಣಬತ್ತಿಯಂತೆ ಇನ್ನೊಬ್ಬರಿಗಾಗಿ ಕರಗಿ ಹೋದವರು. ವೈರಾಗ್ಯದಿಂದ ಇಲ್ಲವೆ ಸಾಂಸಾರಿಕರಾಗಿದ್ದರೆ ಸತ್ಯಸಂಧರಾಗಿ ಪ್ರಾಮಾಣಿಕರಾಗಿ ಬದುಕಿದವರು, ಈ ಕಾರಣಗಳಿಂದ ತಮ್ಮ ಬದುಕಿಗೆ ಒಂದು ಭವ್ಯ ಅರ್ಥವನ್ನು ತಂದು ಕೊಟ್ಟಿರುತ್ತಾರೆ. ಇಂಥವರ ಬದುಕಿನ ಆದರ್ಶಗಳನ್ನು ಸಾಮಾನ್ಯ ಜನ ಅನುಕರಿಸಿ ಬಾಳುವುದರಿಂದ ಇವರು ಶಾಶ್ವತರಾಗಿ ಜನತೆಯ ನಾಲಿಗೆಯ ಮೇಲೆ ನಿಲ್ಲುತ್ತಾರೆ. ಇವರ ಜೀವನ ಸಂದೇಶ ಮತ್ತು ಪ್ರಭಾವಯುಗ ಯುಗಗಳವರೆಗೂ ಮುಂದುವರಿದುಕೊಂಡು ಹೋಗುತ್ತದೆ, ಇವರ ಮೇಲಿರಿಸಿದ ಜನತೆಯ ಶ್ರದ್ಧೆ ಉಳಿಯುತ್ತದೆ.

ಧರ್ಮ ಜೀವನದ ಶಾಶ್ವತವಾದ ಮೌಲ್ಯಗಳನ್ನು ನಿರಂತರವಾಗಿ ಅನ್ವೇಷಣೆ ಮಾಡುತ್ತಲೇ ಇರುತ್ತವೆ. ಮತ್ತು ಕಾಲಕಾಲಕ್ಕೆ ಆ ಮೌಲ್ಯಗಳನ್ನು ಪರಿಷ್ಕರಿಸುತ್ತಲೇ ಮುನ್ನಡೆಯುತ್ತದೆ, ಮಾನವನ ನಿತ್ಯದ ಸಮಸ್ಯೆಗಳಾದ ಜನನ, ಮರಣ, ಸುಖ–ದುಃಖ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವನದ ಗುರಿ ವಿಶ್ವಾಸ. ವಿಚಾರ ದೈವ ಪಾಪ–ಪುಣ್ಯ ಒಳಿತು, ಕೆಡಕು. ಸದ್ಗತಿ–ದುರ್ಗತಿ ಕರ್ಮ ಇಂತಹ ಅನೇಕ ಪ್ರಶ್ನೆಗಳಿಗೆ ಸೂಕ್ತವಲ್ಲದಿದ್ದರೂ ಸಮಾಧಾನಕರವಾದ ಉತ್ತರವನ್ನು ಧರ್ಮ ಹೇಳುತ್ತದೆ, ಹೇಳಿ ಜನತೆಯ ಕದಡಿದ ಮನವನ್ನು ತಿಳಿಗೊಳಿಸಿ ಮುದ ನೀಡುತ್ತದೆ. ಒತ್ತರಿಸಿ ಬಂದ ದುಃಖವನ್ನು ಸಾಂತ್ವನ ಹೇಳಿ ಶಮನಗೊಳಿಸುತ್ತದೆ, ಭಾವೋದ್ವೇಗಕ್ಕೆ ಒಳಗಾದ ಮನಸ್ಸನ್ನು ಸ್ಥಿಮಿತಕ್ಕೆ ತಂದು ಸ್ಥಿತ ಪ್ರಜ್ಞರನ್ನಾಗಿಸುತ್ತದೆ. ಒಟ್ಟಿನಲ್ಲಿ ಧರ್ಮ ಮಾನವನ ಬಾಳ ಹಾದಿಯಲ್ಲಿ ಬೆಳಕಿನ ಕಂಬದೋಪಾಧಿಯಲ್ಲಿ ನಿಂತು ಬೆಳಕು ನೀಡುತ್ತದೆ. ಆತನ ಜೀವನವನ್ನು ಸರ್ವಾಂಗದಲ್ಲಿ ಸದೃಢಗೊಳಿಸಿ ಮುನ್ನಡೆಸುವಲ್ಲಿ ಧರ್ಮ ಬಹು ಮುಖ್ಯ ಪಾತ್ರ ವಹಿಸುತ್ತದೆ,

ಧರ್ಮ ಸಂಸ್ಕೃತಿ ಸಂವರ್ಧನೆಯಲ್ಲಿ ವಹಿಸಿದ ಪಾತ್ರ ಅಮೋಘವಾದುದು. ಪ್ರಾಚೀನ ಹಾಗೂ ಮಧ್ಯಯುಗದ ಚರಿತ್ರೆಯನ್ನು ನೋಡಿದರೆ ಅದರ ಸಂಸ್ಪರ್ಶವಿಲ್ಲದ ಯಾವ ಜೀವನ ವಿಭಾಗವೂ ಕಾಣಸಿಗದು, ಸಾಹಿತ್ಯ, ಕಲೆ, ನೀತಿಶಾಸ್ತ್ರ, ರಾಜ್ಯಶಾಸ್ತ್ರ, ತರ್ಕ–ವ್ಯಾಕರಣ, ಲೋಕಸೃಷ್ಟಿ, ಗ್ರಹಗತಿ, ಜ್ಯೋತಿಷ್ಯ, ಔಷಧಿ ಶಾಸ್ತ್ರ–ಮುಂತಾದವುಗಳ ಬೆಳವಣಿಗೆಗೆ, ಪೋಷಣೆಗೆ ಧರ್ಮ ಸ್ಫೂರ್ತಿ ನೀಡಿದೆ, ಸಂಜೀವಿಯಾಗಿ ಬದುಕಿಸಿದೆ. ಇದು ಮಾನವ ಸಂಸ್ಕೃತಿಗೆ ತಾಯ್ದೊಟ್ಟಿಲಾಗಿ ತೂಗುತ್ತ ಬೆಳೆಸಿದೆ,

ಮಾನವನ ಮೂಲ ಪ್ರವೃತಿಗಳಾದ ಆಹಾರ, ನಿದ್ರೆ, ಮೈಥುನ, ಭಯ, ಸ್ನೇಹ, ಆಸೆಗಳಂತೆ ಧರ್ಮವನ್ನೂ ಒಂದು ಮೂಲ ಪ್ರವೃತ್ತಿ ಎನ್ನಬಹುದೇ ? ಆಧುನಿಕರು, ವೈಚಾರಿಕರು ವಿಜ್ಞಾನಿಗಳು ಅಲ್ಲವೆನ್ನುತ್ತಾರೆ. ಇಂದು ಮಾನವ ಬಹಳ ಮುಂದುವರಿದಿದ್ದಾನೆ. ಧರ್ಮ ಇಲ್ಲದೆಯೂ ಬದುಕಬಲ್ಲ ರಶಿಯಾ, ಚೈನಾ ಮೊದಲಾದ ಸಮಾಜವಾದಿ ರಾಷ್ಟ್ರಗಳಲ್ಲಿ, ವಿಶ್ವದ ಅನೇಕ ಮೇಧಾವಿಗಳ ಚರಿತ್ರೆಯಲ್ಲಿ ಧರ್ಮವು ಸಾರ್ವತ್ರಿಕ ಸತ್ಯವಾಗಿ ಮಾನವನ ಮೂಲಭೂತ ಪ್ರವೃತ್ತಿಯಾಗಿ ಉಳಿದಿಲ್ಲ. ಆದರೂ ಧರ್ಮದ ಪ್ರಭಾವ ಆಗದೇ ಇಲ್ಲ. ಪ್ರಪಂಚದಲ್ಲಿ ಧರ್ಮ ಪರಹಿತ ಜನಸಂಖ್ಯೆ ತೀರ ಅತ್ಯಲ್ಪ. ಆದ್ದರಿಂದ ಧರ್ಮವೂ ಮಾನವನ ಮೂಲಭೂತ ಪ್ರವೃತ್ತಿಗಳಲ್ಲಿ ಒಂದೆಂಬ ಭಾವನೆಯುಂಟಾಗುತ್ತದೆ. ಇದಿನ್ನೂ ಚರ್ಚೆ ಪ್ರತಿ ಚರ್ಚೆಗಳಿಂದ ನಿರ್ಣಯವಾಗಬೇಕಾದ ವಿಷಯ, ಇದೇನೇ ಇರಲಿ ಮಾನವನ ಬದುಕಿನಲ್ಲಿ ಧರ್ಮ ಹಾಸು ಹೊಕ್ಕಾಗಿರುವುದನ್ನು ಪ್ರಜ್ಞಾವಂತರಾದ ಯಾರು ಅಲ್ಲಗಳೆಯಲಾರರು. ●

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೦ ಅನುಭವ ಮಂಟಪ ಮತ್ತು ಅಧ್ಯಾತ್ಮ ಸ್ವಾತಂತ್ರ್ಯ :

● ನಾನಾಗೌಡ ಜಿ. ಪಾಟೀಲ.

ಅನುಭವ ಮಂಟಪವೆಂದರೆ ಅನುಭವಿಗಳು ಸೇರಿ ಅನುಭಾವ ಹಂಚಿಕೊಳ್ಳುವ ಸ್ಥಳವೇ ಅನುಭವ ಮಂಟಪ, ಅನುಭವ ಮಂಟಪವೆನುವುದು ಕಲ್ಲಿನಿಂದ ನಿರ್ಮಿತವಾದ ಒಂದು ಕಟ್ಟಡವಲ್ಲ, ಹೀಗೆ ತಿಳಿದರೆ ಅನುಭವ ಮಂಟಪದ ಕಲ್ಪನೆಯೇ ನಮಗಾಗದೆ ಹೋಗಬಹುದು, ಸ್ಥಾವರಕ್ಕೆ ಮಹತ್ವಕೊಡದ ಬಸವಣ್ಣನವರು ಕಲ್ಲಿನ ಕಟ್ಟಡವೊಂದು ಮಾಡಿದ್ದಾರೆಂದರೆ ಹಾಸ್ಯಾಸ್ಪದವಾದೀತು, ಒಂದು ವೇಳೆ ಈ ಕಟ್ಟಡ ಕಟ್ಟಿಸಿದ್ದರೆ ಆದರ ಅವಶೇಷ ಇಂದು ಸಿಗಬೇಕಾಗಿತ್ತು, ಯಾವ ಅವಶೇಷವೂ ಭೌತಿಕವಾಗಿ ನಮಗೆ ಸಿಗುವುದಿಲ್ಲವೆಂದ ಮೇಲೆ ಅದು ಕಟ್ಟಿರಲಿಲ್ಲವೆಂದೇ ಒಪ್ಪಬೇಕಾಗುತ್ತದೆ. ಹಾಗಾದರೆ ಅನುಭವ ಮಂಟಪವೆಂದರೆ ಗಾಳಿಯ ಗೋಪುರವೇ ? ಎಂಬ ಪ್ರಶ್ನೆ ಉದ್ಭವಾಗುತ್ತದೆ, ಒಬ್ಬೊಬ್ಬ ಶರಣನ ಮನೆಯೂ ಅನುಭವ ಮಂಟಪವಾಗಿರಬಹುದು ಇಲ್ಲವಾದರೆ ಎಲ್ಲಾ ಶರಣರೂ ಸೇರಿ ಒಂದು ನಿರ್ಧಿಷ್ಟವಾದ ಸ್ಥಳದಲ್ಲಿ ಚರ್ಚಿಸಿ ಅನುಭವ ಪಡೆದುಕೊಳ್ಳುವ ಸ್ಥಳದ ಅನುಭವ ಮಂಟಪವಾಗಿತ್ತು. ಇಲ್ಲಿ ಅನೇಕ ವಿಚಾರಗಳ ಮಂಥನ ನಡೆಯುತ್ತಿತ್ತು, ಈ ಮಂಥನದಿಂದ ಹೊರಬಂದ ನವನೀತವೇ ವಚನಾಮೃತ, ಅನುಭವಾಮೃತ, ಈ ಅನುಭವಾಮೃತವ ನುಡಿಗಳು ಸಾರ್ವತ್ರಿಕ ಸತ್ಯವಾದವು ಮತ್ತು ನಿತ್ಯನೂತನವಾದವುಗಳಾಗಿವೆ, ಇಂಥ ಕೊಡುಗೆ ಕೊಟ್ಟ ಹೆಮ್ಮೆ ಅನುಭವ ಮಂಟಪದ್ದಾಗಿದೆ,

ಅನುಭವ ಮಂಟಪದ ಕಲ್ಪನೆಯಾದ ಮೇಲೆ ಅಧ್ಯಾತ್ಮವೆಂದರೆ ಏನು ? ಎಂಬುದು ತಿಳಿದುಕೊಳ್ಳುವ ಯಾವ ವಿಷಯ ಆತ್ಮ ಪರಮಾತ್ಮರ ಆದಿ ಅಂತ್ಯವನ್ನು ಸ್ವರೂಪವನ್ನು ಅವಿನಾಭಾವ ಸಂಬಂಧವನ್ನು ಪರಿಚಯಿಸಿ ಕೊಡುತ್ತದೆಯೋ ಅದಕ್ಕೆ ಅಧ್ಯಾತ್ಮವೆಂದು ಕರೆಯುತ್ತಾರೆ, ಜೀವ ದೇವರ ನಡುವಿನ ಸಂಪೂರ್ಣ ಅರಿವು ಮೂಡಿಸುವ ಪ್ರಕ್ರಿಯೆಗೆ ಅಧ್ಯಾತ್ಮ ವಿದ್ಯೆಯೆಂದು ಹೇಳುವದುಂಟು. ಇಂಥ ಜ್ಞಾನ ಪಡೆಯುವ ವ್ಯಕ್ತಿ ಯಾವನಾದರೂ ಇರಬಹುದು. ಯಾವವರ್ಗಕ್ಕೆ ಸೇರಿದವನಾದರೂ ಇರಬಹುದು. ಎಂಬುದು ಈಗಿನ ಮಾತು, ಆದರೆ 800 ವರ್ಷಗಳ ಹಿಂದೆ ಈ ಅಧ್ಯಾತ್ಮವನ್ನು ಎಲ್ಲ ವರ್ಗದವರು, ವರ್ಣದವರು ಪಡೆಯುವಂತಿಲ್ಲ, ಕೇವಲ ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬ್ರಹ್ಮ ವಿದ್ಯೆ ಬ್ರಾಹ್ಮಣರಿಗೆ" ಮಾತ್ರ ಮೀಸಲಾಗಿತ್ತು. ಈ ಮೇಲ್ವರ್ಗದ ಜನರು ಮಾತ್ರ ಅಧ್ಯಾತ್ಮ ವಿದ್ಯೆ ಹೊಂದಿ ಆತ್ಮಜ್ಞಾನಿಗಳಾಗಲು ಅವಕಾಶವಿತ್ತು. ಉಳಿದವರಿಗೆ. ಅದರಲ್ಲಿಯೂ ಶೂದ್ರರಿಗಂತೂ ಸಾಧ್ಯವೇ ಇರಲಿಲ್ಲ. ಶೂದ್ರನಾದವನು ಅಧ್ಯಾತ್ಮ ವಿದ್ಯೆ ಪಡೆಯುವದಿರಲಿ, ತಪ್ಪಿ ಅವನ ಕಿವಿಯಲ್ಲಿ ಈ ವಿಚಾರಗಳು ಬಿದ್ದರೆ ಅರಗು ಕರಗಿಸಿ ಕಿವಿಯಲ್ಲಿ ಹಾಕಿ ಎರಕ ಹೊಯಿದ ಪ್ರಸಂಗಗಳುಂಟು, ಕುವೆಂಪುರವರ ಶೂದ್ರ ತಪಸ್ವಿ ನಾಟಕದಲ್ಲಿ ಶೂದ್ರನೊಬ್ಬನು ತಪಸ್ಸಿಗೆ ತೊಡಗಿದ್ದರ ಪರಿಣಾಮ ಬ್ರಾಹ್ಮಣನ ಮಗ ಸತ್ತನೆಂದು ಶ್ರೀರಾಮನ ಹತ್ತಿರ ದೂರು ನೀಡಿದ್ದು ಓದಿದ್ದೇನೆ. ಶೂದ್ರನ ತಪಸ್ಸಿಗೂ ಬ್ರಾಹ್ಮಣ ಮಗನ ಸಾವಿಗೂ ಯಾವ ಸಂಬಂಧವೂ ಇಲ್ಲ, ಇದೊಂದು ಕಾಕತಾಳಿಯ ನ್ಯಾಯ. ಕಾಗೆ" ಕೂತಿದ್ದರಿಂದಲೇ ಟೊಂಗೆ ಮುರಿಯಿ ತ್ತೆಂಬ ವಾದವಂತೆ. ಇಂಥ ಹಿನ್ನೆಲೆಯಲ್ಲಿ ಕೆಳವರ್ಗದ ಜನರಿಗೆ ಅಧ್ಯಾತ್ಮದ ಗಂಧ ಗೊತ್ತಿಲ್ಲದಾಗ. ಅದರ ಸುವಾಸನೆ ತೋರಿಸಿ, ಅವನ್ನು ತನ್ನತ್ತ ಎಳೆದುಕೊಂಡು ಅಧ್ಯಾತ್ಮ ಜ್ಞಾನ ಅರಿವನ್ನು ಮೂಡಿಸಿ ಬಿಟ್ಟ. ಜೊತೆಗೆ ಅವರಿಗೆ ಸ್ವತಂತ್ರವಾಗಿ ವಿಚಾರ ಮಾಡಲು ಅಧ್ಯಾತ್ಮದ ಅರಿವನ್ನು ಸಂಪೂರ್ಣ ಪಡೆದುಕೊಳ್ಳಲು, ಅಧ್ಯಾತ್ಮದ ಸ್ವಾತಂತ್ರ್ಯ ಪಡೆಯುವ ಮಾರ್ಗ ತೋರಿಸಿ ಕೊಟ್ಟ ಕೀರ್ತಿ ಬಸವಣ್ಣನವರದು,

ಅಧ್ಯಾತ್ಮ ಸ್ವಾತಂತ್ರ್ಯ ಚಳುವಳಿ ಒಂದು ಸಮಗ್ರ ರೂಪದಲ್ಲಾಗಿದೆ ಎನ್ನ ಬಹುದು. ಅನುಭವ ಮಂಟಪದಲ್ಲಿ ಸುಮಾರು 365 ಜನ ಪುರುಷ ಮತ್ತು ಸ್ತ್ರೀ ವಚನಕಾರ್ತಿಯರು ಸಿಗುತ್ತಾರೆ. ಇವರೆಲ್ಲರೂ ಒಂದೊಂದು ವರ್ಗ. ವರ್ಣ ಮತ್ತು ಜಾತಿಯ ಪ್ರತಿನಿಧಿಗಳಾಗಿ ಕಾಣಸುತ್ತಾರೆ, ಇವರೆಲ್ಲರೂ ಕೂಡಿ ರಚಿಸಿದ ವಚನ ಸಾಹಿತ್ಯವೇ ಅನುಭವ ಮಂಟಪದ ಅನುಭಾವ ಸಂಪತ್ತು, ಡಾ. ಚಿದಾನಂದ ಮೂರ್ತಿ ಯವರು ಹೇಳುವಂತೆ ಏಕ ಕಾಲಕ್ಕೆ 365 ಜನರು ಒಂದೆಡೆ ಸೇರಿ ಚರ್ಚಿಸಿ, ಸಾಮೂಹಿಕವಾಗಿ ಸಾಹಿತ್ಯ ಸೃಷ್ಟಿಮಾಡಿದ ಉದಾಹರಣೆ ಜಗತ್ತಿನ ಯಾವ ಸಾಹಿತ್ಯ ಇತಿಹಾಸದಲ್ಲಿಯೂ ಸಿಗಲಾರದು, ಇದು ಕನ್ನಡ ನಾಡಿನ ಕನ್ನಡ ಸಾಹಿತ್ಯದ ವೈಶಿಷ್ಟವೆಂದೇ ಹೇಳಬೇಕು ಎಂದಿದ್ದಾರೆ. ಜೊತಗೆ ಇಂಥ, ಕೆಳಸ್ತರದ ಜನ ಅದ್ಭುತ ವಾದ ಅಧ್ಯಾತ್ಮ ಜ್ಞಾನವನ್ನು ಹೊಂದಿ, ವಚನ ರಚಿಸುವ ಮಟ್ಟಕ್ಕೆ ತಮ್ಮ ಅನು ಭಾವವನ್ನು ಎತ್ತರದ ನಿಲುವಿನಲ್ಲಿ ನಿಂತು ಹೇಳು ಸ್ಥಿತಿಗೆ ಬರಬೇಕಾದರೆ ಅವರಿಗೆ ಅನುಭವ ಮಂಟಪ ಯಾವ ರೀತಿಯಲ್ಲಿ ತರಬೇತಿ ನೀಡಿರಬೇಕು ? ಎಂದು ಯೋಚಿಸ ಬೇಕಾಗುತ್ತದೆ. ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಸೂಲಿಯ ಚಂದಯ್ಯ ಮುಂತಾದ ಕೆಳಸ್ತರದ ಜನ, ಆಯ್ದಕ್ಕಿ ಲಕ್ಕಮ್ಮ, ರೆಮ್ಮವ್ವೆ, ರೇಚವ್ವೆ, ಸೂಳೆ ಸಂಕವ್ವೆ, ಇವರೆಲ್ಲ ವಚನ ಬರೆಯಬೇಕಾದರೆ ಇವರಿಗೆ ಅನುಭವ ನೀಡಿದ ಬರೆಯಲು ಅಕ್ಷರ ಜ್ಞಾನ ಮಾಡಿಕೊಟ್ಟ ರೀತಿ ಸಂಶೋಧಕರು ಸಂಶೋಧಿ ಸಿದರೆ, ಇಂದಿನ ನಮ್ಮ ವಯಸ್ಕರ ಶಿಕ್ಷಣ ಪದ್ಧತಿ ಯಶಸ್ವಿಯಾಗುವ್ವದರಲ್ಲಿ ಯಾವ ಸಂಶಯವಿಲ್ಲ.. ಸೂಳೆಯಾದ ಸಂಕವ್ವೆ ವಚನ ಬರೆದು ಶರಣೆಯಾದ ರೀತಿ ನೋಡಿದರೆ ಅಲ್ಲಿಯ ಕ್ರಾಂತಿಯ ಮಹತ್ವ ನಮ್ಮ ಅರಿವಿಗೆ ಬಂದಿತು, ಇವಳ ಅಂಕಿತನಾಮ ನಿರ್ಲಜ್ಜೇಶ್ವರ ಎಂದು ಇಟ್ಟುಕೊಂಡಿದ್ದಾಳೆ. ಒಟ್ಟಿನಲ್ಲಿ ಅನುಭವ ಮಂಟಪ ಅಲ್ಲಿಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರ್ಯಕಲಾಪಗಳ ವೈಖರಿ, ತರಬೇತುಗೊಳಿಸಿವ ವಿಧಾನ, ಸಾಮಾನ್ಯರನ್ನು ಮಾನ್ಯ ರನ್ನಾಗಿ ಮಾಡಿದ ಪರಿ ಇಂದಿಗೂ ಸಂಶೋಧಕರಿಗೆ ಸವಾಲ್ ಆಗಿ ನಿಂತ ವಿಷಯ ಗಳಾಗಿವೆ, ಇದು ಸಂಶೋಧನೆಯಾದರೆ ಆ ಸತ್ಯ ನಮಗೆ ಗೊತ್ತಾಗಿ ಅದು ನಮ್ಮ ಭಾರತ ಸರ್ಕಾರ ಜಾರಿಗೆ ತಂದರೆ ಆಗ ಭಾರತ ನಿಜವಾದ ಜಾತ್ಯಾತೀತ ರಾಷ್ಟ್ರ ವಾದೀತು.

ಈ ಸ್ವಾತಂತ್ರ್ಯ ಚಳುವಳಿಯ ನಾಯಕ ಬಸವಣ್ಣ, ಬಸವಣ್ಣನವರ ವ್ಯಕ್ತಿತ್ವ ಬಹುಮುಖವಾದುದು. ಅವರು ಸಮಗ್ರ ದೃಷ್ಟಿಯಿಂದ ವಿಚಾರ ಮಾಡಿದವರು. ಕಾಯಕ ದಾಸೋಹ ಕಲ್ಪನೆಗಳು, ಆರ್ಥಿಕ, ಸಾಮಾಜಿಕ ಸುಧಾರಣೆಗಳು, ಜೀವನದ ಪರಮ ಮೌಲ್ಯದ ವಿಚಾರಗಳು ಇವೆಲ್ಲವಕ್ಕೂ ಹೊಸತಾದ ಅರ್ಥ ಕೊಟ್ಟು ಪರಿಷ್ಕರಿಸಿ ನೋಡಿದವರು, ವೈಜ್ಞಾನಿಕ ವೈಚಾರಿಕ ತಳಹದಿಯ ಮೇಲೆ ನಿಲ್ಲುವಂತೆ ಮಾಡಿದವರು ಆರ್ಥರ್ ಮೈಲ್ಸ್ ಎನ್ನುವ ಪಾಶ್ಚಾತ್ಯ ವ್ಯಕ್ತಿ ಎಂದು ಹೇಳಿದ್ದಾನೆ, ಸ್ವತಂತ್ರವಾಗಿ ವಿಚಾರ ಮಾಡುವ ಬುದ್ಧಿಶಕ್ತಿ ಇದ್ದವ ಮತ್ತು ಎಲ್ಲರಿಗೂ ಸ್ವತಂತ್ರವಾಗಿ ವಿಚಾರ ಮಾಡಲು ಕಲಿಸಿಕೊಟ್ಟವನೆಂದರೆ ಬಸವಣ್ಣನೆಂದೇ ಹೇಳಬೇಕು. ಇಂಥ ನಾಯಕನ ನಾಯಕತ್ವದಲ್ಲಿ ಅನೇಕರು ಸ್ವತಂತ್ರ ವಿಚಾರ ಮಾಡುವ ಆಧ್ಯಾತ್ಮ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಆಧ್ಯಾತ್ಮ ಸ್ವಾತಂತ್ರ್ಯವನ್ನು ಪಡೆದರು. ಇದರ ಪರಿಣಾಮವೇ ಎಲ್ಲ ವರ್ಗ, ವರ್ಣ, ಜಾತಿ ಮತ ಪಂಥಗಳ ನಿರ್ಮೂಲನೆಯಾಯಿತು. ಧಾರ್ಮಿಕ ಸ್ವಾತಂತ್ರ್ಯ ಇವರೆಲ್ಲರ ಪಾಲಿಗೆ ದೊರಕಿತು, ಎಲ್ಲರೂ ಧರ್ಮತತ್ವ ವಿಚಾರದಲ್ಲಿ ಪಾಲ್ಗೊಳ್ಳಬಹುದೆಂಬ ಸಿದ್ಧಾಂತ ಬಂತು,

ಉಳ್ಳವರು ಶಿವಾಲಯ ಮಾಡುವರು
ನಾನೇನು ಮಾಡಲಿ ಬಡವನಯ್ಯಾ, ಎನ್ನ ದೇಹವೇ ದೇಗುಲ.
ಕಾಲೇ ಕಂಬ, ಶಿರವೇ ಹೊನ್ನ ಕಳಸ, ಕೂಡಲಸಂಗಮದೇವಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಸ್ಥಾವರ ದೇವಾಲಯಗಳನ್ನು ಅಲ್ಲಿ ಪೂಜೆ ಮಾಡುವ ಪೂಜಾರಿಗಳನ್ನು ತಿರಸ್ಕಾರದ ದೃಷ್ಟಿಯಿಂದ ನೋಡಿದರು. ಏಕೆಂದರೆ ಈ ದೇವಾಲಯಗಳಲ್ಲಿ ಪೂಜೆ ಯನ್ನು ಮಾಡುವ ಒಂದು ವರ್ಗವೇ ನಿರ್ಮಾಣವಾಗಿತ್ತು. ಇದೇ ಪುರೋಹಿತ ಶಾಹಿ ವರ್ಗವಾಗಿ ತನ್ನ ಪ್ರಾಭಲ್ಯವನ್ನು ಹೆಚ್ಚಿಸಿಕೊಳ್ಳತೊಡಗಿತ್ತು. ಹೀಗಾಗಿ ಇವರೇ ಶೋಷಣೆಗಿಳಿದರು, ಶೋಷಕರಾದರು. ದಲಾಲಿ ಕೆಲಸ ಮಾಡತೊಡಗಿದರು. ದೇವರು ಮತ್ತು ಭಕ್ತರ ನಡುವೆ ಸಂಬಂಧ ಬೆಳೆಸುವ ಬ್ರೋಕರ್ಸಗಳಾದರು ಪಾಪಿಗಳ ಪಾಪ ಕಳೆಯಲಿಕ್ಕೆ ಪಾಪಿ ಜನರಿಂದ ಹಣ ಪಡೆಯತೊಡಗಿದರು. ಈ ಪಾಪಿಗಳ ಧನ ಈ ಹೊಟ್ಟೆ ಬಾಕ ತೋಳಗಳ ಪಾಪದ ಕೆಲಸಕ್ಕೆ ಸಲ್ಲತೊಡಗಿತು. ಇದನ್ನು ಕಂಡು ಬಸವಣ್ಣ " ಪಾಪಿಯ ಧನ ಪ್ರಾಯಶ್ಚಿತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ " ನಾಯಿ ಹಾಲು ನಾಯಿ ಮರಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ ಎಂದು ಹೇಳಿ " ಖಂಡಿಸಿದ್ದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಣುತ್ತೇವೆ". ದೇವರನ್ನು ಕಾಣುವ ಪೂಜಿಸುವ ಭಕ್ತನಿಗೆ ಪೂಜಾರಿಯ ಅವಶ್ಯಕತೆ ಇಲ್ಲವೆಂದು ಖಡಾ ಖಂಡಿತವಾಗಿ ಹೇಳಿದರು.

ತಾಸುಂಬ ಊಟವನು ತನ್ನಾಶ್ರಯದ ರತಿಸುಖವನು
ಪರರ ಕೈಯಿಂದ ಮಾಡಿಸಬಹುದೆ ?
ತನ್ನ ಲಿಂಗಕ್ಕೆ ನಿತ್ಯ ನೇಮಾರ್ಚನೆ ತಾ ಮಾಡಬೇಕಲ್ಲದೆ
ಪರರ ಕೈಯಿಂದ ಮಾಡಿಸಬಹುದೆ ? ಎಂದು ಪ್ರಶ್ನಿಸಿದರು.

ಪ್ರತಿಯೊಬ್ಬನಿಗೂ ದೇವರನ್ನು ಪೂಜಿಸುವ ಹಕ್ಕಿದೆ. ಅವನು ಯಾವ ಜಾತಿಯವನಾದರೂ ಇರಬಹುದು ಎನ್ನುತ,

ದಾಸಿ ಪುತ್ರನಾಗಲಿ, ವೇಶ್ಯಾಪುತ್ರನಾಗಲಿ
ಶಿವದೀಕ್ಷೆ ಹೊಂದಿದ ಬಳಿಕ
ಸಾಕ್ಷಾತ್ ಶಿವನೆಂದು ಪೂಜಿಸಿ, ಪಾದೋದಕ ಪ್ರಸಾದ
ಕೊಂಬುದು ಲೇಸು ಬಿಟ್ಟು ಅನ್ಯವನೆಣಿಸಿದರೆ
ನಾಯಕ ನರಕ ತಪ್ಪದು
ಕೂಡಲಚೆನ್ನಸಂಗಮದೇವಾ.

ಎಂದು ಚೆನ್ನಬಸವಣ್ಣನವರೂ ಕೂಡಾ ಖಂಡಿಸಿದ್ದಾರೆ. ಆಧ್ಯಾತ್ಮ ಜ್ಞಾನವನ್ನು ಪಡೆಯುವ, ಬೋಧೆ ಮಾಡುವ, ದೇವನನ್ನು ಪೂಜಿಸಿ ಸಾಕ್ಷಾತ್ಕಾರ ಮಾಡಿಕೊಳ್ಳುವ ಹಕ್ಕು ಎಲ್ಲರಿಗುಂಟು ಎಂದು ಸಾರಿದ್ದು ಶರಣರ ವೈಚಾರಿಕ ಧೋರಣೆ. ಅವರ ಕ್ರಾಂತಿಕಾರಕ ಮನೋಭಾವ ಇಲ್ಲಿ ಎದ್ದು ಕಾಣುತ್ತದೆ. ಧರ್ಮ ಯಾರ ಸೊತ್ತು ಅಲ್ಲ, ಅದು ಕೆಲವರ ಗುತ್ತಿಗೆಯೂ ಅಲ್ಲ. ಧರ್ಮದ ದೃಷ್ಟಿಯಲ್ಲಿ ಆಚರಣೆಯಲ್ಲಿ ಸರ್ವರೂ ಸಮಾನರೂ ನನ್ನ ಪೂಜೆ ನಾನೇ ಮಾಡಬೇಕು ನನ್ನ ಉದ್ಧಾರಕ್ಕೆ ನಾನೇ ಶ್ರಮಿಸಬೇಕು ಎಂಬುದನ್ನು ಶರಣರು ಸಾರಿ ಹೇಳಿದರು. ಹೀಗೆ ಹೇಳಿದ ಬಸವಣ್ಣನವರಿಗೆ ಅನೇಕ ಆರೋಪಗಳು ಬಂದವು. ಇವನು ವೈದಿಕ ಧರ್ಮದ ವಿರೋಧಿ, ಇವನು ವರ್ಣಾಶ್ರಮ ವಿರೋಧಿ, ಸಮಾಜದಲ್ಲಿ ವರ್ಣ ಸಂಕರವನ್ನುಂಟು ಮಾಡುತ್ತಿದ್ದಾನೆ ಎಂಬ ಮಾತುಗಳು ಬಂದವು. ಆದರೆ ಇವೆಲ್ಲ ಬಸವಣ್ಣನವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಮಾಡಿದ ಆರೋಪಗಳಿವು. ಬಸವಣ್ಣ ಹಿಂದೂ ಧರ್ಮವಾಗಲಿ, ಧರ್ಮದ ಮೌಲ್ಯಗಳಾಗಲಿ ಎಂದೂ ತಿರಸ್ಕರಿಸಲಿಲ್ಲ, ಅವನು ಮಾಡಿದ ಒಂದು ಒಳ್ಳೆಯ ಕೆಲಸವೆಂದರೆ ಧರ್ಮದ ಹೆಸರಿನಲ್ಲಿ ಬೆಳೆದ ಅಂಧಾನುಕರಣೆ, ಮೂಢನಂಬಿಕೆ, ಸಂಪ್ರದಾಯಗಳನ್ನು ಬುಡ ಸಹಿತ ಕತ್ತರಿಸಿ ಹಾಕಿದ, ಅದನ್ನು ವೈಜ್ಞಾನಿಕ ಒರೆಗಲ್ಲಿಗೆ ಹಚ್ಚಿ ನೋಡಿದ. ಹೀಗಾಗಿ ಜನರಿಗೆ ಬಸವಣ್ಣ ತೊಡಕಿನ ಪ್ರಶ್ನೆಯಾಗಿ ಉಳಿದ.

ಉದಾ :— ಯಜ್ಞಗಳನ್ನು ತೆಗೆದುಕೊಂಡರೆ, ಬೆಂಕಿ ದೇವರೆಂದು ತುಪ್ಪ, ಹಾಲು, ಗಂಧದ ಕಟ್ಟಿಗೆ ಹೊಸಬಟ್ಟೆ ಸುಡುತ್ತಾರೆ, ಎಷ್ಟೋ ಮಕ್ಕಳಿಗೆ ತಲೆಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಣ್ಣೆ ಇಲ್ಲದೆ ಕುಡಿಯಲು ಹಾಲು ಸಿಗದೆ ನರಳುವಾಗ ಈ ಕೆಲಸ ಮಾಡುವುದು ನೋಡಿದರೆ ಯಾರ ಹೊಟ್ಟೆ ತಾನೆ ಉರಿಯಲಾರದು, ಬಸವಣ್ಣನವರು ಇದನ್ನು ನೋಡಿ ಚೆಂಕಿ ದೇವನೆಂದು ಕರೆಯುತ್ತೀರಿ, ನಿಮ್ಮ ಮನೆಗೆ ಚೆಂಕಿ ಬಿದ್ದಾಗ ಬಚ್ಚಲ ನೀರು, ಬೀದಿಯ ಧೂಳು ಚೆಲ್ಲಿ ದಿರಲ್ಲಾ ಆಗ ಎಲ್ಲಿ ಹೋಯಿತು ನಿಮ್ಮ ದೇವರೆಂದು ಪ್ರಶ್ನಿಸುತ್ತಾರೆ,

ಹೀಗೆ ಸುರಿದು ಸುಡುವ ಅಮಾನುಷ ಶಾಸ್ತ್ರ ಜಡತ್ವ, ರಾಜರು ಯಜ್ಞ ಮಾಡಿದರೆ ಕೊನೆಗೆ ಮಣ್ಣಿನ ಪಾತ್ರೆ ಉಪಯೋಗಿಸುವ ಮಟ್ಟಕ್ಕೆ ಇಳಿಯುತ್ತಿದ್ದರರೆ ಇದೊಂದು ಉನ್ನತ ಮಟ್ಟದ ಶೋಷಣೆ ಎಂದು ಯಜ್ಞಗಳನ್ನು ಅಲ್ಲಗಳೆದರು,

ಹೀಗೆ ಧರ್ಮವನ್ನು ದೇವಾಲಯದಿಂದ ಹೊರಗೆ ತಂದದ್ದು ಮೊದಲನೆಯ ಕೆಲಸವಾದರೆ, ದೇವರು ಮತ್ತು ಭಕ್ತರ ನಡುವೆ ಇರುವ ಪುರೋಹಿತ ವರ್ಗವನ್ನು ಕಿತ್ತೊಗೆದದ್ದು ಎರಡನೆಯ ಕೆಲಸ. ಮೂರನೆಯದಾಗಿ ಯಜ್ಞ, ಯಾಗ, ಹೋಮ್ ಹವನಗಳು ಅರ್ಥವಿಲ್ಲದ್ದೆಂದು ತಿಳಿಸಿ, ಸ್ವತಃ ವ್ಯಕ್ತಿ ತಾನೇ ದೇವರನ್ನು ಪೂಜಿಸಿ, ಪ್ರಾರ್ಥಿಸಿ ದಿವ್ಯ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬಲ್ಲ ದಾರಿಯನ್ನು ತೋರಿಸಿ ಕೊಟ್ಟರು, ಇಹ ಲೋಕದ ಬದುಕಿಗೆ ಒತ್ತು ಕೊಟ್ಟರು. ಪರಲೋಕದ ಕಲ್ಪನೆ ಹೊಡೆದೊಡಿಸಿದರು. ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲವೆಂದರು, ಇಹಲೋಕದ ಬದುಕೇ ಸರಿಪಡಿಸಿಕೊಳ್ಳಲು ತಿಳಿಸಿದರು.

ನಾವು ವಾಸಿಸುವ ಮರ್ತ್ಯಲೋಕವೇ ಕರ್ತಾರನಕಮ್ಮಟ
ಇಲ್ಲಿ ಸಲ್ಲುವರು ಅಲ್ಲಿ ಸಲ್ಲುವರಯ್ಯ. ಎಂದು ಹೇಳಿದರು.

ಇಲ್ಲಿಯ ಬದುಕು ಸುವ್ಯವಸ್ಥಿತವಾಗಿ ನಡೆಸಿರಿ, ಈ ಬದುಕನ್ನು ತಿರಸ್ಕರಿಸಿ, ಕಾಣದೆ ಇರುವ ಲೋಕದ ಬಗ್ಗೆ, ಪೂರ್ವಜನ್ಮದ ಬಗ್ಗೆ ಯೋಜನೆ ಮಾಡುವ ಅವಶ್ಯಕತೆ ಇಲ್ಲವೆಂದು ಸಾರಿದರು,

ಧರ್ಮ ಪರಲೋಲಕದ ಸಾಮಗ್ರಿ ಎಂಬುದನ್ನು ಶರಣರು ಒಪ್ಪಲಿಲ್ಲ. ಇಹ ಲೋಕದಲ್ಲಿ ಚೆನ್ನಾಗಿ ಬದುಕಿದರೆ ಇನ್ನೊಂದು ಲೋಕದಲ್ಲಿಯೂ ಚೆನ್ನಾಗಿ ಬದುಕಬಹುದೆಂದು ಹೇಳಿ ಧರ್ಮದ ಹೆಸರಿನಲ್ಲಿ ಈ ಬದುಕು ತಿರಸ್ಕರಿಸಬಾರದೆಂದು ಎಚ್ಚರಿಕೆ ನೀಡಿದರು, ಎಲ್ಲರ ಬದುಕಿಗೂ–ಧರ್ಮ–ಅಧ್ಯಾತ್ಮ ಅವಶ್ಯವೆಂದು ಸಾರಿ ಧರ್ಮವನ್ನು ಅಧ್ಯಾತ್ಮಿಕ ಮೌಲ್ಯಗಳನ್ನು ಸಾರ್ವತ್ರಿಕಗೊಳಿಸಿದರು. ಕೇವಲ ಕೆಲವೇ ವ್ಯಕ್ತಿಗಳ ಗುತ್ತಿಗೆಯಾಗಿದ್ದ ಧರ್ಮ, ಧರ್ಮದ ಭದ್ರಕೋಟೆಯನ್ನು ಭೇದಿಸಿ ಧಾರ್ಮಿಕ ಪ್ರಜಾಪ್ರಭುತ್ವ ಒದಗಿಸಿ ಕೊಟ್ಟ ಕೀರ್ತಿ ಬಸವಣ್ಣನವರದು, ಹೀಗಾಗಿ ಬಸವಣ್ಣನವರ ನಾಯಕತ್ವದಲ್ಲಿ ಜನ ಸಾಮಾನ್ಯರು ಜಾತಿಯನ್ನು ಕಿತ್ತೆಸೆದು ಅಧ್ಯಾತ್ಮಿಕ ಮಾರ್ಗದಲ್ಲಿ ಮುನ್ನೆಡದರು, ಹೀಗಾಗಿ ಇದೊಂದು ಅಧ್ಯಾತ್ಮಿಕ ಆಂದೋಳನವಾಯಿತು ಧಾರ್ಮಿಕ ಕ್ರಾಂತಿಯಾಯಿತು ಇದರಿಂದಾಗಿ–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರ್ವರಿಗೆ ಸಮಪಾಲು,
ಸರ್ವರಿಗೆ ಸಮ ಬಾಳು

ಎಂಬ ಸಮಾಜ ಪಾದವನ್ನು ಬಸವಣ್ಣನವರು ತೋರಿಸಿಕೊಟ್ಟರೆಂದೇ ಹೇಳಬೇಕು. ವೇದ, ಆಗಮ, ಉಪನಿಷತ್ತುಗಳು, ಸಂಸ್ಕೃತದಲ್ಲಿರುವುದರಿಂದ ಅವು ಜನ ಸಾಮಾನ್ಯರಿಗೆ ಓದಿ ಅರ್ಥಮಾಡಿಕೊಳ್ಳಲು ಕ್ಲಿಷ್ಟವೆನ್ನಿಸಿದ್ದರಿಂದ ಅವುಗಳು ಕೇವಲ ಮೇಲ್ವರ್ಗದವರಿಗೇ ಮೀಸಲಾಗಿರಲೆಂದು ಹೇಳಿ ಜನಸಾಮಾನ್ಯರಿಗಾಗಿ ಜನ ಸಾಮಾನ್ಯರು ಮಾತನಾಡುವ ಅರ್ಥವಾಗುವ ಭಾಷೆಯಲ್ಲಿಯೇ ಅವುಗಳ ಸಕಲ ಸಾರವನ್ನೆಲ್ಲ ಹೀರಿ ವಚನೋಪನಿಷತ್ತು ಎನ್ನಿಸಿಕೊಳ್ಳುವ ವಚನಗಳನ್ನು ರಚಿಸಿದರು. ರಚಿಸುವ ವಿಧಾನ ತೋರಿಸಿಕೊಟ್ಟರು, ಇದರಿಂದಾಗಿ "ಬ್ರಾಹ್ಮಣಿಸಂ" ತನ್ನಿಂದ ತಾನೇ ಸಡಿಲುಗೊಳ್ಳತೊಡಗಿತು, ಇದುವರೆಗೆ ಅವರು ಮಾಡಿದ ಕೆಲಸವೆಂದರೆ ಕೆಳ ವರ್ಗದವರ ಜನತೆಯನ್ನು ತಮ್ಮ ಕಾಲಕೆಳಗೆ ಇಟ್ಟಿದ್ದು, ಮತ್ತು ಅವರ ಅಜ್ಞಾನವೇ ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡಿದ್ದು, ಬಸವಣ್ಣನವರು ತೋರಿಸಿ ಕೊಟ್ಟರು. ಹೀಗಾಗಿ ಕೆಳವರ್ಗದ ಜನತೆ ಎಚ್ಚರಗೊಂಡಿತು, ಕಣ್ಣು ತೆರೆಯಿತು, ತಮಗೆ ಜ್ಞಾನದ ಕಣ್ಣು ಕೊಟ್ಟವ ಬಸವಣ್ಣನೆಂದು ಅವನ ಬೆಳಕಿನ ದಾರಿಯಲ್ಲಿ ಸ್ವತಂತ್ರರಾಗಿ ಅಡ್ಡಾಡಲು ತೊಡಗಿದರು. ಧರ್ಮವನ್ನು, ದೇವರನ್ನು ಕೈಯ್ಯಾರೆ ಪೂಜಿಸಿತೊಡಗಿದರು. ಅನಂತರ ದಲ್ಲಿ ಹಿಂದೂ ಧರ್ಮದ ವರ್ಣ ವಿಭೇದ ನೀತಿಯೇ ಸಮಾಜದ ವಿಷಮತೆಗೆ ಅವ್ಯವಸ್ಥೆಗೆ ಕಾರಣ ಎಂಬುದು ಎಲ್ಲರಿಗೆ ಮನವರಿಕೆಯಾಯಿತು.

ಇನ್ನೊಂದು ಬಹುಮುಖ್ಯವಾದ ವಿಷಯವೆಂದರೆ ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯ ಒದಗಿಸಿ ಕೊಟ್ಟದ್ದು, "ನಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದು ಮನುವಿನ ಕಾಲದಿಂದ ಸ್ತ್ರೀಯರು ನಾಲ್ಕು ಗೋಡೆಯ ಮಧ್ಯಹಲ್ಲಿದ್ದು ನರಳುವುದನ್ನು ತಪ್ಪಿಸಿದರು, ಅನುಭವ ಮಂಟಪದಲ್ಲಿ ಮುಕ್ತವಾಗಿ ಪಾಲ್ಗೊಂಡು ಚರ್ಚೆ ಮಾಡಿದ್ದು, ವಚನ ರಚಿಸಿದ್ದು ಒಂದು ಪವಾಡ ಸದೃಶವಾಗಿದೆ. ಮುಟ್ಟು ಮೈಲಿಗೆಯಾದ ಹೆಂಗಸು ಅಶುದ್ಧಳು, ಅಪವಿತ್ರಳು, ಎಂಬುದನ್ನು ಅಲ್ಲಗಳೆದರು. ಮಾಯೆ ರಾಕ್ಷಸಿ ಎಂಬುದನ್ನು ಖಂಡಿಸಿದರು. ಹೆಣ್ಣು ಸಾಕ್ಷಾತ ಕಪಿಲ ಸಿದ್ಧಮಲ್ಲಿಕಾರ್ಜುನನೆಂದು ಸಿದ್ಧರಾಮೇಶ್ವರರು ಸಾರಿದರು, ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು ಒಳಗೆ ಸುಳಿಯುವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲವೆಂದು ಹೇಳಿ, ಹೆಣ್ಣು ಗಂಡು ಸಮಾನವೆಂಬುದು ಲೋಕಕ್ಕೆ ಸಾರಿದರು. ದೇವನ ಪೂಜಿಸುವುದಕ್ಕೆ ಮುಟ್ಟು, ಮೈಲಿಗೆ ಯಾವ ಅತಂಕವನ್ನೊಡುವುದಿಲ್ಲವೆಂದು ಹೇಳಿದರು,

ಮುಟ್ಟು ಕಂಡವಳನ್ನು ಮುಟ್ಟಲೊಲ್ಲರು ನೋಡು
ಮುಟ್ಟು ತಾ ತಡೆದ ಮೇಲೆ ಹುಟ್ಟಿದ ದೇಹವ
ಮುಟ್ಟುತೀಹರೇಕೆ ? ಸರ್ವಜ್ಞ.

ಎಂದು ಸರ್ವಜ್ಞ ಕವಿ ಪ್ರಶ್ನಿಸುತ್ತಾನೆ. ಅನೇಕ ಸ್ತ್ರೀಯರು ಅನುಭವ ಮಂಟಪದಲ್ಲಿ ಪಾಲ್ಗೊಂಡು ವಚನ ರಚಿಸಿದ್ದಕ್ಕೆ ದಾಖಲೆಗಳಿವೆ. ಇಪ್ಪತ್ತೇಳು ಜನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಶರಣೆಯರು ದೊರೆಯುತ್ತಾರೆ. ಇವರೆಲ್ಲರೂ ವಚನಗಳು ಬರೆದಿದ್ದಾರೆ. ಈ ಸ್ತ್ರೀಯರಿಗೆ 800 ವರ್ಷಗಳ ಹಿಂದೆ ಸ್ವಾತಂತ್ರ್ಯ. ಅದರಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಸ್ವಾತಂತ್ರ್ಯ ಒದಗಿಸಿಕೊಟ್ಟ ಕೀರ್ತಿ ಬಸವಣ್ಣನವರದು. ಹುಟ್ಟು ಕ್ರಾಂತಿಯಾದ ಬಸವಣ್ಣ. ಇಂಥ ಸ್ತ್ರೀಯರಿಗೆ ಆಗುವ ಅನ್ಯಾಯ ಅಸಮಾನತೆಯನ್ನು ಪ್ರತಿಭಟಿಸಿ ನಿಂತ ಮೊದಲನೆಯ ಧೀರ. ಮೇಲು–ಕೀಳು ಆಗಿನ ಸಮಾಜ ಒಪ್ಪಿಕೊಂಡ ಮೌಲ್ಯವಾಗಿತ್ತು, ಆದರೆ ಅದನ್ನು ಕಿತ್ತು ಬಿಸಾಕುವುದೇ ಬಸವಣ್ಣನವರಿಗೆ ಮೌಲ್ಯವಾಗಿ ಕಂಡಿತು. "ಸರ್ವೇಜನಾ: ಸುಖಿನೋ ಭವಂತು" ಎನ್ನುವುದು ಕೇವಲ ಮಂತ್ರದಲ್ಲಿ ಉಳಿಯಗುಡಿಸಲಿಲ್ಲ. ಅದು ಎಲ್ಲರ ನಿಜ ಜೀವನದಲ್ಲಿ ತಂದ ಕಂಡುದನ್ನು ಕಂಡಂತೆ ಹೇಳಿದ. ತನಗಾಗದ್ದು ಖಂಡು ತುಂಡಾಗಿ ಕತ್ತರಿಸಿದ. ಹೇಳಿದಂತೆ ಆಚರಿಸಿ ತೋರಿಸಿದ ನುಡಿ – ನಡೆ ಒಂದಾಗಿ ಮಾಡಿಕೊಂಡ ಹೀಗಾಗಿ ಅವರ ಅಧ್ಯಾತ್ಮ ಸ್ವಾತಂತ್ರ್ಯ ಚಳುವಳಿ ಪರಿಣಾಮಕಾರಿಯಾಗಿ ಮೂಡಿ ಬಂತು,

ಸಾಮಾಜಿಕವಾಗಿ ಧಾರ್ಮಿಕವಾಗಿ ಎಲ್ಲರೂ ಸಮಾನರು. ಸ್ತ್ರೀಯರಿರಲಿ, ಮೇಲ್ಜಾತಿಯವರಿರಲಿ, ಕೆಳವರ್ಗದವರಿರಲಿ ಅದು ಮುಖ್ಯವಲ್ಲ ಎನ್ನುವುದು ಬಸವಣ್ಣ ಸಾಧಿಸಿ ತೋರಿಸಲು ಹೊರಟವ. ದೀನ ದಲಿತರಲ್ಲಿ ಆತ್ಮ ವಿಸ್ವಾಸ ಮೂಡಿಸಿ, ತಾನು ಧರಿಸಿದ ಲಿಂಗವನ್ನೇ ಅವರಿಗೂ ಕೊಟ್ಟು ದೇವರನ್ನು ಅರಿಯುವ ಮಾರ್ಗ ದರ್ಶನ ಮಾಡಿದವ. ಇಷ್ಟಲಿಂಗದ ಮುಖಾಂತರ ಸಾಮಾಜಿಕ ಸಮಾನತೆ, ಅಧ್ಯಾತ್ಮಿಕ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ದೊರಕಿಸಿ ಕೊಟ್ಟವ ಬಸವಣ್ಣ. ಇಂದಿನ ಇಪ್ಪತ್ತನೆಯ ಶತಮಾನದಲ್ಲಿ ನಮಗೆ ಸಾಧಿಸಲಿಕ್ಕೆ ಆಗದೆ ಇರುವಂತಹದ್ದು ಸಾಧಿಸಿ ತೋರಿಸಿದ. ಅವರು ಬರಿ ತಾತ್ವಿಕವಾಗಿ ಸಾಧಿಸಲಿಲ್ಲ. ಪ್ರಾಯೋಗಿಕವಾಗಿಯೂ ಸಾಧಿಸಿದರು. ಉರಿಲಿಂಗಪೆದ್ದಿ ಎಂಬ ಒಬ್ಬ ಪರಿಜನ ಶರಣ ಉರಿಲಿಂಗ ದೇವನಾಗಿ ಒಂದು ಮಠಕ್ಕೆ ಅಧಿಪತಿಯಾದ, ಹರಳಯ್ಯನ ಮಗನಿಗೆ ಮಧುವರಸರು ತಮ್ಮ ಮಗಳನ್ನು ಕೊಟ್ಟು ಬ್ರಾಹ್ಮಣ ಶೂದ್ರರ ನಡುವೆ ರಕ್ತ ಸಂಬಂಧ ಮಾಡಿದ್ದು ಇವು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹವುಗಳಾಗಿವೆ. ಹೀಗೆ ಎಲ್ಲ ರೀತಿಯಿಂದ ಎಲ್ಲರಿಗೂ ಅನುಕೂಲವಾಗುವಂತೆ ಸರ್ವರು ಆತ್ಮ ಜ್ಞಾನಿಗಳಾಗುವಂತೆ ಸಮಗ್ರ ಸ್ವರೂಪದ ಆಧ್ಯಾತ್ಮ ಕ್ರಾಂತಿಯನ್ನೆಬ್ಬಿಸಿದ ಬಸವಣ್ಣ. ಅವನಿಗೆ ಅನೇಕ ಶರಣರು, ಶರಣೆಯರು ಹೆಗಲಿಗೆ ಹೆಗಲು ಕೊಟ್ಟು ದುಡಿದರು, ಅವನ ಕ್ರಾಂತಿ ಯಶಸ್ವಿಯಾಗಲು ಅನೇಕರು ಹಣಗಿದರು, ಡಾ. ಎಚ್, ಶಿವ್ಪೇರುದ್ರ ಸ್ವಾಮಿಯವರ ಮಾತಿನಲ್ಲಿ ಹೇಳುವುದಾದರೆ ಬಸವಣ್ಣ ಧರ್ಮದ ಹೆಸರಿನಲ್ಲಿ ನಡೆಯುವ ಅವಿವೇಕವನ್ನು ಅನ್ಯಾಯಗಳನ್ನು ತಿರಸ್ಕರಿಸಿದನೇ ಹೊರತೂ ಧರ್ಮವನ್ನೇ ನಿರಾಕರಿಸಲಿಲ್ಲ, ತಮ್ಮ ಸತ್ವವನ್ನು ಕಳೆದುಕೊಂಡಿದ್ದ ಮೌಲ್ಯಗಳ ಪುನರ್ ಮೌಲೀಕರಣ ಮಾಡುವದು ಆತನ ಕೆಲಸವಾಗಿತ್ತು. ಅಲ್ಲದೆ ಜೊತೆಯಲ್ಲಿಯೇ ಮೌಲ್ಯಗಳ ಹೆಸರಿನಲ್ಲಿ ತಲೆಯೆತ್ತಿದ ಕೊಳೆಯನ್ನು ತೊಳೆಯುವ ದಿಟ್ಟತನವನ್ನು ಆತ ಕೈಕೊಂಡ. ಹೀಗಾಗಿ ಬಸವಣ್ಣನವರ ಮತ್ತು ಶರಣರ ಅನುಭವ ಮಂಟಪದ ಅಧ್ಯಾತ್ಮ ಸ್ವಾತಂತ್ರ್ಯ ಚಳುವಳಿ ಒಂದು ಸ್ವರೂಪ ಪಡೆದುಕೊಂಡಿತ್ತು ಎಂದು ಹೇಳಬಹುದಾಗಿದೆ. ●

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೧ ಜೀವನ – ಜಿಜ್ಞಾಸೆ :

● ಮುರಗಯ್ಯ ಶಿವಯ್ಯ ಬಿಜಾಸ್ಪೂರ.

ಮಾನವ ಜೀವನ ಅಮುಲ್ಯವಾದದ್ದು. ಅನಂತಕೋಟಿ ಪ್ರಾಣ ಜೀವನದ ನಂತರ ಮನುಷ್ಯ ಜನ್ಮ ಲಭ್ಯವಾಗುತ್ತದೆ, ಇಂತಹ ಮಾನವ ಜನ್ಮವನ್ನು ಕೆಡಿಸಿ ಕೊಳ್ಳಬೇಡಿರೋ ಅಣ್ಣಪ್ಪಗಳಿರಾ ? ಎಂದು ಸಾಧು ಸಂತರು ಹೇಳುವುದನ್ನು ಕೇಳಿದ್ದೇವೆಯೋ ವಿನ: ಈ ಬಗ್ಗೆ ಗಾಢವಾದ ಚಿಂತನೆ ಆಧುನಿಕ ಮಾನವನಿಗೆ ಕಾಡುತ್ತಿಲ್ಲವೆಂಬಂತೆ ಕಂಡುಬರುತ್ತದೆ, ಇದಕ್ಕಿರುವ ಕಾರಣವೆಂದರೆ ಇಂದು ಮನುಷ್ಯ ಸುಖದ ಪುರಿಚಿಕೆಯ ಬೆನ್ನು ಹತ್ತಿ "ನಿಜ ಸುಖದ" ಅರ್ಥವನ್ನು ತಿಳಿಯದವನಾಗಿದ್ದಾನೆ. ಭೌತಿಕ ಪ್ರಪಂಚದ ಆಕರ್ಷಣೆಗಳು ಮಾನವನನ್ನು ಕ್ಷಣ ಕ್ಷಣಕ್ಕೆ ದಾರಿ ತಪ್ಪಿಸುತ್ತಿದೆ "ಕಷ್ಟ ವಿಲ್ಲದೇ ಬದುಕುವದೇ ಸುಖದ ಜೀವನ ಎಂದು ತಿಳಿದಂತ್ತಿದೆ. ಆದಕ್ಕೆಂದೇ ಇಂದು ವಿಧ್ಯಾರ್ಥಿಗಳೇ ಬಿಡದೇ ಪಾಸಾಗಬಯಸುತ್ತಾರೆ. ಯುವಕರು ದುಡಿಯದೇ ದುಡ್ಡುಗಳಿಸಬೇಕೆನ್ನುತ್ತಾರೆ. ವ್ಯಾಪಾರಿಗಳು ಪಾಪ ಮಾರ್ಗದಿಂದ ಹಣ ಸಂಗ್ರಹಿಸಬೇಕೆನ್ನುತ್ತಾರೆ. ವಕೀಲರು ಅಸತ್ಯವನ್ನೆ ಸತ್ಯವೆಂಬಂತೆ ಪ್ರತಿಪಾದಿಸಿ ಹೆಚ್ಚು ಹಣ ಪಡೆಯಬಯಸುತ್ತಾರೆ. ಅದಕ್ಕಾಗಿ ಕೊಲೆಗಾರನಿಗೆ ಶಿಕ್ಷೆಕೊಡಿಸಲು ಹೆಣಗುವ ವಕೀಲನಿಗಿಂತಲೂ, ಕೊಲೆ ಅಪರಾಧದಿಂದ ತನಗೆ ಗೊತ್ತಿದ್ದು ಪಾರು ಮಾಡುವ ವಕೀಲನು ಹೆಚ್ಚು ಸಂಪಾದಿಸುತ್ತಾನೆ. ಅಧಿಕಾರಿಗಳಾಗುವದಕ್ಕೆ ಹಣ ಖರ್ಚು ಮಾಡುವವರು, ಅಧಿಕಾರಿಗಳಾದ ಮೇಲೆ ಮತ್ತೇನು ಮಾಡಲು ಸಾಧ್ಯ ಎಲ್ಲಿಯೂ ಸಲ್ಲದವರು ರಾಜಕೀಯ, ಸೇರಿದಾಗ ಹಲವು ಹೊಸ್ನರಗಳಿಂದ ಹಣಗಳಿಸದೆ ಮತ್ತೇನು ಮಾಡುತ್ತಾರೆ ಹೀಗೆ ಜೀವನವೆಂದರೆ ಇಂದು ಹಣ ಗಳಿಸುವ ಹುನ್ನಾರವಾಗಿದೆ ಬದುಕಿನ ನಿಜವಾದ ಮೌಲ್ಯಗಳನ್ನು ಮೈಗೂಡಿಸುವದಲ್ಲಿ ಶಿಕ್ಷಣ ಪದ್ಧತಿಯು ವಿಫಲವಾದಂತಿದೆ. ನೀತಿಯೇ ಜೀವನದ ಜ್ಯೋತಿ.

ಎಂಬುದು ಇಂದಿನ ಸಮಾಜ ವ್ಯವಸ್ಥೆಯಲ್ಲಿ ಯಾವ ಪ್ರಭಾವವನ್ನು ಬೀರುತ್ತಿಲ್ಲ ಪ್ರಜ್ಞಾಪೂರ್ವಕವಾಗಿ ಜೀವನವನ್ನು ರೂಪಿಸಿಕೊಳ್ಳುವುದು. ಆದರಂತೆ ನಡೆಯುದು, ಇಂದು ಯಾರಿಗೂ ಬೇಡವಾಗಿದೆ. ಕೆಲವು ಜನರಿಗೆ ಜೀವನದ ಬಗ್ಗೆ ಗಂಭೀರವಾದ ಆಲೋಚನೆಯೇ ಇರುವುದಿಲ್ಲ ಯಾಕೆ ಬದುಕಿದ್ದೀರಿ ? ಎಂದರೆ ಇನ್ನು ಸತ್ತಿಲ್ಲವಾದ್ದರಿಂದ ಬದುಕಿದ್ದೇವೆ ಎನ್ನುವವರೂ ಇದ್ದಾರೆ, ಜೀವನವೆಂದರೆ ಹುಟ್ಟು ಸಾವುಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಡುವಿನ ಮಧ್ಯಾಂತರ ಸಮಯವೆಂದು ಭಾವಿಸುವವರು ಇದ್ದಾರೆ, ಈ ಶರೀರವು ಪುರುಷಾರ್ಥಗಳ ಸಾಧನೆಗಿದೆ ಎಂಬುದನ್ನು ತಿಳಿಯದವರು ಈ ಶರೀರವನ್ನು ಗೊಬ್ಬರ ತಯ್ಯಾರಿಸುವ ಕಾರ್ಖಾನೆಯನ್ನಾಗಿ ಮಾಡಿದ್ದಾರೆ.

ಮತ್ತು ಅದಕ್ಕಾಗಿ ಮಧ್ಯಂತರದ ಮನೋರಂಜನೆಯಲ್ಲಿಯೇ ಕಾಲ ಕಳಿಯುತ್ತಾರೆ. ಇನ್ನೂ ಹಲವರು. "ಜೀವನವು ನಿಗೂಢವಾದ ರಹಸ್ಯ– ಸುಮ್ಮನೆ ಬಾಳಿ" ಎಂಬ ವೇದಾಂತವನ್ನು ಹೇಳುತ್ತಾರೆ. ಆದರೆ ತನ್ನ ಹಣೆಬರಹವನ್ನು ತಾ ಬರೆಯುವ ಗಂಡುಗಲಿ, ಇದಕ್ಕೆ ಸಾಕ್ಷಿಯಾಗಲಿ ಜಗದಿ ಕರ್ಣನ ಚರಿತೆ ಎಂಬ ಕವಿ ವಾಣಿಯಾಗಲಿ"

ಎಂಬ ನೆಪೋಲಿಯನ್‌ನ ಉಕ್ತಿಯಾಗಲಿ ಕೊಲುವೆನೆಂಬ ಭಾಷೆ ದೇವನದು ಗೆಲುವೆನೆಂಬ ಭಾಷೆ ಭಕ್ತನದು ಎಂಬ ಶರಣರ ಹೋರಾಟದ ಮಾತುಗಳಲ್ಲಿ ನಮಗೆ ಪ್ರೇರಣೆ ನೀಡುತ್ತವೆ. ಮನಸ್ಸಿದ್ದಲ್ಲಿ ಮಾರ್ಗವಿದೆ. ಈ ನಾಡಿನಲ್ಲಿ ತಮ್ಮ ಜೀವನವನ್ನು ಅಮರರನ್ನಾಗಿ ಮಾಡಿದ ಅನೇಕಾನೇಕ ಮಹಾಪುರುಷರ ಉದಾಹರಣೆಗಳಿವೆ. ನಮ್ಮಲ್ಲಿ ಸಂಕಲ್ಪ ಶಕ್ತಿ ಬೇಕು. ತಕ್ಕ ಜ್ಞಾನ ಸಂಪಾದಿಸಬೇಕು. ಸಕ್ರಿಯೆಲ್ಲಿ ನಮ್ಮನ್ನು ನಾವೆ ತೊಡಗಿಸಿಕೊಳ್ಳಬೇಕು. ಉತ್ತಮ ಜೀವನ ವಿಧಾನಕ್ಕಾಗಿ ಹಂಬಲಿಸುವದಕ್ಕಿಂತ ಉತ್ತಮ ಬಾಳಿನ ಮಟ್ಟಕ್ಕಾಗಿ ಹಂಬಲಿಸಬೇಕು. ಮಹಾತ್ಮಗಾಂಧೀಜಿಯವರ ಜೀವನ ವಿಧಾನ ಸಾದಾ–ಸಾರಳ ಆರೆತ್ತು ಆದರೆ ಅವರ ಜೀವನ ಮಟ್ಟ ಅತ್ಯಂತ ಉನ್ನತ ಮಟ್ಟದ್ದಾಗಿತ್ತು. ಇಂದು ಅವರು ಅಮರರಾದದ್ದು ತಮ್ಮ ಉದಾತ್ತ ಜೀವನ ಮಟ್ಟದಿಂದ ಸಾಧಾ ಜೀವನವನ್ನು ನಡೆಸುತ್ತ ಉಚ್ಚ ವಿಚಾರಧಾರೆಯನ್ನು ಬೆಳೆಸಿಕೊಳ್ಳಬೇಕು, ಬಾಳಿಗೊಂದು ಗುರಿ ಅವಶ್ಯಕ. ಗುರಿ ಇಲ್ಲದ ಬಾಳು ನಿರರ್ಥಕ ನಿಷ್ಪ್ರಯೋಜಕ ಗುರಿಯನ್ನು ಸಾಧಿಸುವ ಛಲ, ಗುರಿ ಸಾಧಿಸುವಲ್ಲಿ ಎದುರಾಗುವ ಕಷ್ಟಗಳನ್ನು ಸವಾಲೆಂದು ಸ್ವೀಕರಿಸಿ ನಡೆಸುವ ನಿರಂತರ ಹೋರಾಟದಿಂದ ಯಶಸ್ಸು ನಮ್ಮದಾಗುತ್ತದೆ, ಎಂಬುದರಲ್ಲಿ ಸಂದೇಹಬೇಡ,

"ಮನಸ್ಸು–ಒಂದು ವಿಶ್ಲೇಷಣೆ"

ಮನಸ್ಸು ಮನುಷ್ಯನಲ್ಲಿರುವ ಬಹುದೊಡ್ಡ ಶಕ್ತಿ. ಮನಸ್ಸಿನ ಶಕ್ತಿಯೇ ಮಾನವನ ಶಕ್ತಿ. ಮನಸ್ಸು ವೈಶಿಷ್ಟ್ಯಪೂರ್ಣವಾದುದಾದರೆ ಚೈತನ್ಯಮಯವಾದ ಜೀವನವು ಹಾಗೆಯೇ ಆಗಿರುವುದು. "ಮನವು ಮಾಡಿದೊಡೊಮ್ಮೆ ಬ್ರಹ್ಮಾಂಡವನ್ನೇ ಜಯಿಸಬಹುದು" ಎಂಬ ಕವಿವಾಣಿಯು ಜೀವನದ ಸಫಲತೆಗೆ ಮನವೇ ಮೂಲ ಎಂಬುದನ್ನು ಹೇಳುತ್ತದೆ. ಬಾಲ್ಯದಿಂದ ಮುಪ್ಪಿನವರೆಗೆ, ಮನಸ್ಸು ನಿರಂತರವಾಗಿ ಮಿಡಿಯುತ್ತಲೆ ಇರುತ್ತದೆ,

"ಹಿಡಿದಗೆ ಹಿಡಕಿಯ ತುಂಬಿ ಬಿಟ್ಟರೆ ಮನೆ ತುಂಬ" ಎನ್ನುವಂತೆ ಮನಸ್ಸು ಬಹಳ ಸಣ್ಣದಾಗಲೂ ಬಲ್ಲದು ವಿಶ್ವವ್ಯಾಪ್ತಿಯಾಗಲೂ ಬಲ್ಲದು. ಮನಸ್ಸು ಚಂಚಲವೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೌದು ಸಾಧಿಸಿದರೆ ನಿಶ್ಚಲವೂ ಹೌದು. ಹೆಡ್ಡಾಗಿಯೂ ಇರಬಹುದು ಚೂರಿಯಷ್ಟು ಚುರುಕು ಆಗಬಹುದು.

ಮನಸ್ಸನ್ನು ಒಳ್ಳೆಯ ಸಂಸ್ಕಾರಗಳಿಂದ, ಶಿಕ್ಷಣದಿಂದ ಹದಗೊಳಿಸುವುದು ಮುಖ್ಯವನೆಲ್ಲವನ್ನು ಸಾಧಿಸಬಲ್ಲ ಮನಸ್ಸು ಎಲ್ಲವನ್ನೂ ಹಾಳು ಮಾಡಬಲ್ಲದು ವಿಶ್ವಾಮಿತ್ರನ ತಪಶ್ಯ ಶಕ್ತಿಯನ್ನು ಕ್ಷಣಾರ್ದಹಲ್ಲಿಯೇ ಹಾಳುಮಾಡಿದ್ದು ಈ ಮನಸ್ಸಲ್ಲವೆ? "ಮನವೆಂಬ ಮರ್ಕಟವ ತಡೆಯಲಾರೆನು ದೇವ ಎನಿತಿದರ ಚಪಲ ಚೇಷ್ಟೆಗಳ ವರ್ಣಿಸಲಿ ಗಿರಿಯ ಗುಹೆಯೊಳು ಕೂತು ತಪವ ಮಾಡುವುದು, ತರುಣಿಯ ಕಂಕುಳೊಳು ಕೈಯಿಕ್ಕಿ ನಗಿಸುವುದು" ಈ ಕವಿತೆಯು ಮನಸ್ಸಿನ ಮಂಗತನವನ್ನು ಸ್ಪಷ್ಟಪಡಿಸುವು ದಿಲ್ಲವೆ. ಅದಕ್ಕಾಗಿಯೇ ಮನಸ್ಸನ್ನು ಯಾವಾಗಲೂ ಕಾಯುತ್ತಿರಬೇಕು. ಅಂದರೆ ಅದು ನಮ್ಮನ್ನು ಕಾಯುತ್ತದೆ. ಸತ್ಸಂಗದ ಮಹತ್ವವನ್ನು ಇಂತಹ ಪ್ರಸಂಗದಲ್ಲಿ ಗಮನಿಸಬಹುದು ಮನಸ್ಸನ್ನು ಸತತವಾಗಿ ಸತ್ಕಾರ್ಯಗಲ್ಲಿಯೇ ತೊಡಗಿಸಬೇಕು. ಅದಕ್ಕೆ ಅದ್ಯಾತ್ಮಿಗಳು ಮನಸ್ಸನ್ನು ಯಾವಾಗಲು ಶ್ರವಣ ಮನನ ನಿಧಿ ಧ್ಯಾನಗಳಲ್ಲಿ ತೊಡಗಿಸಿರುತ್ತಾರೆ. ನಿರಂತರವಾದ ಪ್ರಾರ್ಥನೆ ಹಾಡು ಕಾಯಕ ಇವುಗಳಿಂದ ಮನಸ್ಸು ಗಟ್ಟಿಗೊಳ್ಳುತ್ತದೆ, ನೂಲುವದರ ಮೂಲಕ ಮನಸ್ಸಿನ ಏಕಾಗ್ರತೆಯನ್ನು ಸಾಧಿಸುವದೂ ಒಂದು ಉದ್ದೇಶವಾಗಿತ್ತು ಗಾಂಧೀಜಿಯವರಿಗೆ ಮನಸ್ಸಿನ ಏಕಾಗ್ರತೆಯ ಮೂಲಕ ಮಾತ್ರ ದೈವಿಸಾಕ್ಷಾತ್ಕಾರ ಸಾಧ್ಯ ಎನ್ನುವದು ರಾಮಕೃಷ್ಣ ಪರಮಹಂಸರ ಅನುಭವ ವಾಗಿದೆ. ಜೀವನದಲ್ಲಿ ಉದಾತ್ತವಾದುದನ್ನು ಆದರ್ಶವಾದುದನ್ನು ಕಲಾತ್ಮಕವಾದುದನ್ನು ಸಾಧಿಸುವಲ್ಲಿ ಮನಸ್ಸಿನ ಮೇಲೆ ಹಿಡಿತ ಏಕಾಗ್ರತೆಗಳು ಅಗತ್ಯ. ಆದರೆ ದಿನನಿತ್ಯದಲ್ಲಿ ಬರುವ ಹಲವು ಹತ್ತು ಕ್ಷುಲ್ಲಕ ಸಂಗತಿಗಳ ಬಗ್ಗೆ ಮನಸ್ಸು ಚಂಚಲವಾಗಿರುವದೇ ವಿಹಿತ ಅನಿವಾರ್ಯವಾಗಿ ಸಂಭವಿಸುವ ಸಾವು ನೋವುಗಳ ಬಗ್ಗೆ ಕಷ್ಟ ಕಾರ್ಪಣ್ಯಗಳ ಬಗ್ಗೆ ಜಗಳ ಈರ್ಷೆ ಮತ್ಸರಗಳ ಬಗ್ಗೆ ಬಂದುಗಳಿಗೆ ಮನೊಂಪರೂ ಪುನ: ಬೇರೆ ವಿಷಯಗಳತ್ತ ಮನವನ್ನು ತೊಡಗಿಸಲೇ ಬೇಕಾಗುತ್ತದೆ, ಆತ್ಮೀಯರೊಬ್ಬರ ಸಾವಿನಿಂದ ಮನಸ್ಸು ಖಿನ್ನಗೊಳ್ಳುವುದು ಸ್ವಾಭಾವಿಕ ಆದರೆ ಮನಸ್ಸನ್ನು ಸದಾ ಖಿನ್ನವಾಗಿರಿಸಿ ಕೊಂಡು ಅದೆಷ್ಟು ಕಾಲ ಬಾಳಲು ಸಾಧ್ಯ ಇಲ್ಲಿ ಮನಸ್ಸು ಚಂಚಲವಾಗಿರುವುದ ರಿಂದಲೇ ಸಾವನ್ನು ಕ್ರಮೇಣವಾದರೂ ಮರೆತು ಬೇರೆ ಕಾರ್ಯಗಳತ್ತ ಮನ ಹಾಕು ವುದು ಸಾದ್ಯವಾಗುತ್ತದೆ.

ದೇವರ ಬಗ್ಗೆ ಧರ್ಮದ ಬಗ್ಗೆ ಕೆಲವರಿಗೆ ನಂಬಿಕೆಯಿರಲಿಕ್ಕಿಲ್ಲ. ಅಂಥವರು ಬಹಳಷ್ಟು ಧೈರ್ಯವಂತರು. ಎಲ್ಲವನ್ನು ತಾವೆ ಮಾಡಲು ಶಕ್ತರು ಎಂದು ತಿಳಿದಿರು ತ್ತಾರೆ. ಆದರೆ ಸಹಸ್ರಾರು ಜನರಿಗೆ ದೇವರ ಮೇಲಿನ ನಂಬಿಕೆಯು ಧೈರ್ಯವನ್ನು ಆತ್ಮವಿಶ್ವಾಸವನ್ನು ಕೊಡುತ್ತದೆ. ದೃಡವಾದ ನಂಬುಗೆಯೇ ದೈಹಿಕ ಶಕ್ತಿಯನ್ನು ಅಪಾರವಾಗಿ ಒದಗಿಸುತ್ತದೆ, ದೇವರ ಹೆಸರಿನ ಮೇಲೆ ಅಗ್ಗಿ ತುಳಿಯುವುದು ಯಾವ ಶಕ್ತಿಯಿಂದ ? ದೇವರ ಮೇಲಿನ ಭಕ್ತಿಯಿಂದ ಅವರ ಮನಸ್ಸಿನಲ್ಲಿ ಮೂಡುವ ಶಕ್ತಿಯೇ ಅವರನ್ನು ಹಾಗೆ ನಡೆಸುತ್ತದೆ. ಫರವಂತರೂ ನಾಲಿಗೆಯ ಮೂಲಕ ಚುಚ್ಚಿದ ಶಸ್ತ್ರವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚುಚ್ಚಿತೆಗೆಯುವುದು ಇಂತಹ ಮನಸ್ಥಿತಿಯಿಂದಲೇ ಸಾಧ್ಯ. ಮನುಷ್ಯನಿಗೆ ಬರುವ ಹಲವು ರೋಗ ರುಜುನಿಗಳನ್ನು ಇಂತಹ ಸಂಬುಗೆಯಿಂದಲೇ ವಾಸಿಪಡಿಸಿ ಕೊಳ್ಳುವವರು ಇದ್ದಾರೆ. ದೇವರು ಇವರ ರೋಗ ರುಜುನಿಗಳನ್ನು ವಾಸಿ ಮಾಡುವನೋ ಇಲ್ಲವೊ ಆದರೆ ದೇವರು ಎಂಬ ಭಾವನೆಯಿಂದ ಆತ್ಮ ವಿಶ್ವಾಸದಿಂದ ಖಂಡಿತವಾಗಿ ಯೂ ಕೆಲವು ರೋಗಗಳು ವಾಸಿಯಾಗುತ್ತವೆ. ವೈದ್ಯನಿಂದ ಸಾಧ್ಯವಾಗದಿದ್ದುದು, ವಿಶ್ವಾಸದಿಂದ ಸಾಧ್ಯ, ವೈಧ್ಯನಾದರೂ ಕೂಡಾ ಔಷಧಿಗಿಂತಲೂ ಹೆಚ್ಚಾಗಿ ರೋಗಿಗೆ ವಿಶ್ವಾಸವನ್ನು ಪ್ರೀತಿಯನ್ನು ಧೈರ್ಯವನ್ನು ಕೊಟ್ಟರೆ ರೋಗವು ಬೇಗನೆ ವಾಸಿಯಾವುದು. ಮಾನಸಿಕ ಅಥವಾ ಮನೊದೈಹಿಕ ಬೇನೆಗಳಿಗಂತೂ ಇಂತಹ ಚಿಕಿತ್ಸೆ ಅಗತ್ಯ. ಮನು ಷ್ಯನಿಗೆ ಶಾಂತಿ ಸಮಾಧಾನಗಳು ಮಾಡಲಂತೂ ಪ್ರೀತಿ, ವಿಶ್ವಾಸ. ಆನಂದಗಳು ಅತ್ಯಗತ್ಯ.

ಮನಸ್ಸನ್ನು ಶೂನ್ಯಗೊಳಿಸುವುದು ದುಸ್ಸಾಧ್ಯ ಎಚ್ಚರವಿದ್ದಾಗಲೆಲ್ಲ ಒಂದಿಲ್ಲಾ ಒಂದು ಯೋಜನೆಯಲ್ಲಿ ಮನಸ್ಸು ತೊಡಗಿರುತ್ತದೆ. ಹಗಲು ಗನಸು ಕಾಣುವುದು ತರ್ಕದಲ್ಲಿ ನಿರತವಾಗುವದು ಅಥವಾ ನಡೆದು ಹೋದ ಘಟನೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳುವದು ನಡೆದೇ ಇರುತ್ತದೆ. ಈ ಮೂರು ರೀತಿಯ ಮನಸ್ಸಿನ ಕಾರ್ಯ ಗಳಿಂದ ಪ್ರಯೋಜನವೇನು ಇಲ್ಲ. ಮನಸ್ಸಿನ ಪ್ರಜ್ಞಾ ಪ್ರೇರಿತ ಚಟುವಟಿಕೆಯು ಮಾತ್ರ ಜ್ಞಾನ ಬಂಡಾರವನ್ನು ಹೆಚ್ಚಿಸಬಲ್ಲದು. ಇನ್ನು ಕೆಲವರಲ್ಲಿ ಹಲವು ಸಲ ನಡೆಯುವ ಕ್ರಿಯೆ. ನಡೆದುಹೋದ ಒಂದು ಘಟನೆಯು ಕೆಲವರಲ್ಲಿ ಕೂತೂಹಲವನ್ನು ಕೆರಳಿಸಿ. ಆಳವಾದ ಆಲೋಚನೆಗೆ ಪ್ರೇರೆಪಿಸಿ, ಅದಕ್ಕಿರಡು ಕಾರಣವನ್ನು ಶೋಧಿಸಿ ಕಾರ್ಯಕಾರಣ ಸಂಬಂಧ ನಿರೂಪಿಸಿ ಸಿದ್ದಾಂತವನ್ನೇ ರಚಿಸಬಹುದು. ಇಂತಹ ಮನಸ್ಸಿನ ಕಾರ್ಯಗಳಿಂದಲೆ ಪ್ರೇರೇಪಿಸಲ್ಪಟ್ಟು ಜಗತ್ತಿನ ಜ್ಞಾನಬಂಡಾರಕ್ಕೆ ಹೊಸ ಜ್ಞಾನದ ಕಾಣಿಕೆಯನ್ನು ಕೊಟ್ಟರು,

ಇನ್ನೂ ಹಲವರ ಮನಸ್ಸು ತಮ್ಮ ಸುತ್ತಲೂ ನಡೆಯುವ ಕ್ರಿಯೇ, ಘಟನೆಗಳಿಂದ ಸ್ಪಂದಿಸುತ್ತದೆ. ಬೇಡನ ಬಾಣಕ್ಕೆ ಬಲಿಯಾದ ಕ್ರೌಂಚ ಪಕ್ಷಿಯ ಸಾವಿ ನಿಂದ ಜೊಡಿ ಕ್ರೌಂಚ ಪಡುತ್ತಿರುವ ದುಃಖವನ್ನು ಕಂಡ ವಾಲ್ಮಿಕೀಯ ಮನಸ್ಸಿನಲ್ಲಿ ಶೋಕವು ರಾಮಾಯಣದ ರಚನೆಗೆ ಪ್ರೇರಣೆಯಾಯಿತು. ಶೋಕ ತಪ್ತ ಮನಸ್ಸು ಮಹಾ ಕಾವ್ಯವೊಂದರ ರಚನೆಗೆ ಕಾರಣವಾಯಿತು. ಇಂತಹ ಮನಸುಳ್ಳವರೇ ಕವಿ, ಕಲಾಕಾರ ಸಂಗೀತಗಾರ ಮತ್ತು ವಿಜ್ಞಾನಿಗಳು ಆಗುತ್ತಾರೆ. ಮತ್ತೆ ಹಲವರು ಮನಸ್ಸಿನಲ್ಲಿ ಹುಟ್ಟುವ ಒಲವು ಭಕ್ತಿ, ಪ್ರೇಮ, ಕರುಣೆ, ದಯೇಯಿಂದ ಶ್ರೇಷ್ಠ ಮಾನವರಾಗುತ್ತಾರೆ ಶರಣರಾಗುತ್ತಾರೆ. ●

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೨ ಸುಲಫಲ ಮಠದ
ಮಹಾಂತ ಪ್ರಭುವಿನ ವಚನಗಳು :

● ಶಿವರಾಜ ಪಾಟೀಲ ಮಹಾಂತಪೂರ.

---

(೧) ವೇದ, ಶಾಸ್ತ್ರ, ಆಗಮ, ಪುರಾಣಂಗಳ
ತಾಂ ಓದಿ ಫಲವೇನು ?
ಶಾಂತಿಯಿಲ್ಲದನ್ನಕ್ಕ, ಸೈರಣೆಯಿಲ್ಲದನಕ್ಕ,
ನೀತಿಯಿಲ್ಲದನಕ್ಕ, ಮೃದು ಮಾತುಯಿಲ್ಲದನಕ್ಕ,
ನಿಗರ್ವಿತಾನಿಲ್ಲದನ್ನಕ್ಕ, ಮುಕ್ತಿ ಚಿಂತನೆಯಿಲ್ಲದನಕ್ಕ.
ನಿಜಾತ್ಮ ನೆನಹಿನೊಳು ತಾನಿಲ್ಲದನಕ್ಕ,
ಇಂತೀವೇಳಿಲ್ಲದೆ,
ಪರಸ್ತ್ರೀ, ಪರಧನ, ಪರರಾಸ್ತಿಗೆ, ವ್ಯಸನಗೊಂಡು
ಕುದಿದು ತಾಂ ಕೋಪಿ, ತಾಪಿಯಾಗಿ, ಕಲಹಗೈಯುತ್ತ
ಅಹಂಕಾರದಿಂ ಮೆರೆದೊಡೆ,
ವೇದವ ಅದಿಯರಿದು
ಸಾಸ್ತ್ರ ಶಸ್ತ್ರವಾಗುವುದು
ಆಗಮ, ಪುರಾಣಂಗಳು ನಿಲುಕದೆ ಹೋಗುವುವು ನೋಡಾ
ಸುಲಫಲ ಮಠಾಧೀಶ ಮಹಾಂತ ಪ್ರಭುವೆ.

(೨) ಕಾಶಿ, ರಾಮೇಶ್ವರಕೇಕೆ ಹೋಗುವೆ ?
ಹರಿದ್ವಾರ, ಋಷಿಕೇಶದಲ್ಲೇಕೆ ಮಿಾಯ್ಯುವಿ ?
ನಿನ್ನ ದೇಹವೆಂಬ ದೇವಾಲಯದಲ್ಲಿ
ಅನಂತ ತೀರ್ಥ ಕ್ಷೇತ್ರಂಗಳಿವೆ.
ಪವಿತ್ರ ನದಿಗಳೂ ಹರಿದಿವೆ.
ದಶ ದ್ವಾರಂಗಳಿಂದೊಡಗೂಡಿದ
ನಿನ್ನ ತನುವೇ
ಕಾಶಿ, ರಾಮೇಶ್ವರ, ಮಥುರೆ, ದ್ವಾರಕೆಗಿಂತ
ಅಧಿಕವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತಿ ತನುವಿನೊಳಗೆ ಸಾಕ್ಷಾತ್
ಸುಲಫಲ ಮಠಾಧೀಶ ಮಹಾಂತ ಪ್ರಭುವಿರುಪಾಗ
ಹೊರಗೇಕೆ ಅಲೆಯುವಿ ಮನುಜಾ

(೩) ಕಠಿಣ ಪರಿಶ್ರಮದಿಂ, ವಿದ್ಯೆಯಂ ತಾಂ ಸಂಪಾದಿಸಿದೊಡೆ
ವಿನಯಂ ಪ್ರಾಪ್ತಮಕ್ಕುದು ನೋಡಾ
ವಿನಯದಿಂ ಅರ್ಹತೆ, ಯೋಗ್ಯತೆ, ಸಮ್ಮಿಲಸುವುದು ನೋಡಾ,
ತದರ್ಹತೆ, ಯೋಗ್ಯತೆಯಿಂ, ಸಂಪತ್ತು ಲಭಿಸುವುದು ನೋಡಾ,
ಆ ಸಂಪತ್ತಿನಿಂ, ಧರ್ಮ ಕಾರ್ಯಂಗಳು ಗೈದೊಡೆ, ನಮ್ಮ
ಸುಲಫಲ ಮಠಾಧೀಶ ಮಹಾಂತಪ್ರಭುವಿನಲ್ಲಿ
ಮೋಕ್ಷ ಸುಖ ದೊರೆಕೊಳ್ಳುವುದು ನೋಡಾ

(೪) ವಿದ್ಯೆಯಿಂದಧಿಕವಾಗುವುದು ಈ ಜಗದಲಿ,
ಬುದ್ಧಿಯಿಂದಧಿಕವಾವುದು ಇಹದಲಿ,
ವಿದ್ಯೆಯೇ ಸಂಪತ್ತು ವಿದೇಶದಲಿ ನಿನಗೆ,
ಬುದ್ಧಿಯೇ ಸಂಪತ್ತು ಕಷ್ಟ ಕಾಲದಲಿ ನಿನಗೆ,
ಧರ್ಮ ರಕ್ಷಣೆಯು ಪಡೆದು,
ಪರಿಶುದ್ಧ ನೀತಿ, ನಡತೆಯೊಳು ನೀನಿರೆ,
ಸುಲಫಲ ಮಠಾಧೀಶ ಮಹಾಂತ ಪ್ರಭುವಿನಲ್ಲಿ
ವಿದ್ಯೆ, ಬುದ್ಧಿಯಿಂದ, ಧರ್ಮ ರಕ್ಷಣೆಯಿಂ
ಪರಿಶುದ್ಧ ನಡೆಯಿಂದೊಡಗೂಡಿದ ನಿನ್ನ ಬದುಕೇ
ಅಧಿಕ ಸಂಪತ್ತೆನಿಸಿಕೊಳ್ಳುವದು ನೋಡಾ :

(೫) ಎಮ್ಮ ಆದ್ಯರು, ಹಿರಿಯರು ಗಳಿಸಿದ್ದೆಂದು,
ಹೇಳಿ ತಿನ್ನುವವರು ಹಂದಿಗೆ ಸಮರು,
ಎಮ್ಮ ತಂದೆ ಗಳಿಸಿದ್ದೆಂದು ಹೇಳಿ
ತಿನ್ನುವವರು ಮಂದೆಗೆ ಸಮರು,
ತಂದೆ ಗಳಿಸಿದ್ದು ತಂಗುಳ
ಹಿರಿಯರು ಗಳಿಸಿದ್ದು ಕೊಳೆತ ಮಾಂಸ
ಇದು ಕಾರಣ
ಸ್ವಯಾರ್ಜನೆ
ಸ್ವಯಂ ಭೋಗ
ಸರ್ವಶ್ರೇಷ್ಠವೆಂದ ನಮ್ಮ
ಸುಲಫಲ ಮಠಾಧೀಶ ಮಹಾಂತ ಪ್ರಭು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೬) ಊರ ಮುಂದೆ ಹಳ್ಳ ಹರಿವರೆ
ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದಲ್ಲದೆ
ಮುತ್ತು, ಮಾಣಿಕ, ರತ್ನಗಳ, ಕಾಣಬಹುದೆ ?
ಊರ ದಾರಿಯಲಿ ನಡೆಯುತಿರೆ
ಇಲಿ, ಬೆಕ್ಕು ನಾಯಿಗಳ ಕಾಣಬಹುದಲ್ಲದೆ,
ನರಿ, ನವಿಲುಗಳು ಕಾಣಬಹುದೆ ?
ಎಲ್ಲಿ ನೋಡಿದಡಲ್ಲಿ, ಕಾಗೆ, ಗೂಗೆ, ಗುಬ್ಬಿಗಳ
ಕಾಣಬಹುದಲ್ಲದೆ ಕೋಗಿಲೆ, ಗಿಳಿವಿಂಡಗಳ ಕಾಣಬಹುದೆ ?
ನಾಡಿನಲಿ ಓಡಾಡಿದರೆ, ಡಂಭಕರ ಡೊಂಬರಾಟವ
ಕಾಣಬಹುದಲ್ಲದೆ,
ತನ್ನ ತಾನರಿತ ನಿಜಜ್ಞಾನಿಯು ಕಾಣಬಹುದೆ ?
ಸುಲಫಲ ಮಠಾಧೀಶ ಮಹಾಂತ ಪ್ರಭುವೆ.

(೭) ಹೂವು ಕಲಿಸುವುದು ನಗುವುದನ್ನು,
ದುಂಬಿ ಕಲಿಸುವುದು ಹಾಡುವುದನ್ನು
ಕೋಗಿಲೆ ಕಲಿಸುವುದು ಇಂಪಾಗಿ ಕೂಗುವುದನ್ನು
ಗಿಡ ಬಳ್ಳಿ ಕಲಿಸುವುವು ಹೊಂದಿ ಬಾಳುವುದನ್ನು
ಹಾಲು – ನೀರು ಕಲಿಸುವುದು ಬೆರೆತು ಬಾಳುವುದನ್ನು
ಹೊಗೆ ಕಲಿಸುವುದು ಸದಾ ಮೇಲೇರುವುದನ್ನು
ಜೇನು ಹುಳು ಕಲಿಸುವುದು ಒಗ್ಗಟ್ಟಿನಿಂದ ಬಾಳುವುದನ್ನು
ಜ್ಯೋತಿ ಕಲಿಸುವುದು ಅಂಧಕಾರ ಕಳೆವುದನ್ನು
ಇನಿತೆಲ್ಲ ಕಲಿಸುವುದನ್ನರಿತು
ಸುಲಫಲ ಮಠಾಧೀಶ ಮಹಾಂತ ಪ್ರಭುವಿನಲ್ಲಿ
ತನ್ನ ತಾನರಿತು ಬಾಳುವುದನ್ನು ಕಲಿತು
ಕಲಿಸು ಮನುಜಾ

(೮) ಜಗಳವಾಡಬೇಡ, ಬರಿಮಾತನಾಡಬೇಡ,
ಅಪಕಾರಿಯಾಗಬೇಡ, ಹೆಂಡಕುಡಿಯಬೇಡ,
ದ್ರೋಹ ಬಗೆಯಬೇಡ, ಪರಸ್ತ್ರೀಯ ನೋಡಬೇಡ,
ಅಸತ್ಯದ ಮಾರ್ಗದಲಿ ನಡೆಯಬೇಡ,
ಅನ್ಯಾಯವೆಸಗಬೇಡ, ನೀತಿ ಬಿಟ್ಟು ಹೋಗಬೇಡ,
ಅಹಂಕಾರಿಯಾಗಬೇಡ,
ಇಂತೀ ದಶಸೂತ್ರಗಳು ನಿನ್ನಂತರಂಗದ ಅರಿತು
ಅಳವಡಿಸಿ, ಬಹಿರಂಗದಲಿ ಪ್ರಕಟಿಸಿದೆಯಾದರೆ,
ನಿನ್ನಿಂದಧಿಕ ಮತ್ತೊಬ್ಬರಿಲ್ಲವೆಂದ ನಮ್ಮ
ಸುಲಫಲ ಮಠಾಧೀಶ ಮಹಾಂತ ಪ್ರಭು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೯) ದೇವಾಲಯದಲ್ಲಿ ಶಿವನಿಹನೆಂದು ಪೂಜೆಗೈದರಯ್ಯಾ ಶೈವರು
ದೇವಾಲಯದಲ್ಲಿ ವಿಷ್ಣುವಿಹನೆಂದು ಪೂಜೆಗೈದರಯ್ಯಾ ವೈಷ್ಣವರು
ಬಸದಿಗಳಲ್ಲಿ ಜಿನನಿಹನೆಂದು ಭಾವಿಸಿದರಯ್ಯಾ ಜೈನರು
ವಿಹಾರಗಳಲ್ಲಿ ಬುದ್ಧನಿಹನೆಂದು ಭಾವಿಸಿದರಯ್ಯಾ ಭೌದ್ಧರು
ಚರ್ಚುಗಳಲ್ಲಿ ಕ್ರೈಸ್ತನಿಹನೆಂದು ಪ್ರಾರ್ಥಿಸಿದರಯ್ಯಾ ಕ್ರಿಶ್ಚಿಯನ್ನರು
ಮಸಿದಿಗಳಲ್ಲಿ ಅಲ್ಲಾನಿಹನೆಂದು ಪ್ರಾರ್ಥಿಸಿದರಯ್ಯಾ ಮುಸ್ಲಿಂರೂ,
ಇಂತಿವರೆಲ್ಲ ನಿನ್ನ ಹೊರನೋಡಬೇಕೆನ್ನುವರಲ್ಲದೆ
ತಮ್ಮೊಳಗೆ ತಾವು ಅರಿಯರು,
ಭೌತಿಕರೂಪವಿಲ್ಲವೆಂದು ತಿಳಿಯರು,
ದೇವಾಲಯ, ಬಸದಿ, ಮಸಿದಿ, ಚರ್ಚು, ವಿಹಾರಾದಿಗಳೆಲ್ಲ,
ಅಳಿದರೂ, ನೀನಳಿಯೆ
ಎಂಬುದು ತಿಳಿಸಿಕೊಡಾ
ಸುಲಫಲ ಮಠಾಧೀಶ ಮಹಾಂತ ಪ್ರಭುವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೩ ಪರಮ ಪೂಜ್ಯ ಶ್ರೀ ಷ. ಬ್ರ. ಮಹಾಂತ ಶಿವಾಚಾರ್ಯರನ್ನು ಕುರಿತು :

● ಶ್ರೀ. ಷ. ಬ. ಶಿವಮೂರ್ತಿ ಶಿವಾಚಾರ್ಯರು ಮಾನ್ವಿ.

ಸುಲಫಲ ಮಠದ ಸೂತ್ರಧಾರ ಸುಧೀರ ಸುಪೂರ.
ಬಲು ಛಲದ ಘಟನೀಸು ಮಠಕಾಧಾರ
ಹಿರಿಮನದ ಸಿರಿತನದ ಗುರುತರದ ಗುರುವಾಗಿ
ಸುರಜನರ ಸಿರಿಯಾಗಿ ಅರುಹಿನಾ ಕುರುಹಾಗಿ
ಸರಳತೆಯ ಸಾಕಾರ ದುರುಳರಿಂ ಬಹುದೂರ
ಪರಮ ಸಾತ್ವಿಕ ಸಾರ ಪರಮನ ಪರವತಾರ
ಲೋಕ ಸೌಖ್ಯವ ಬಯಸಿ ಪುರಾಣಪ್ರವಚನ ಸಲಿಸಿ,
ಭಕ್ತಿಯಂ ಕಲಿಸಿ ಮುಕ್ತಿಯಂ ಕರುಣಿಸಿ
ಮನವ ತಿದ್ದುವ ಜನರಗೆಲ್ಲುವ ಚಲುವನೀನು
ಜನುಮ ಕಾಸರ ಮನಕೆ ಬೇಸರರಿಯದ ಭಾನು
ಕಾಯಕದ ಕರ್ಮವನು ಕರ್ತವ್ಯದಲ್ಲಿ ತೋರಿ
ಭಯ ಭಕುತಿಯಿಂ ಭಾವನೆಯ ಬೀರಿಸಾರಿ
ಅನ್ನುವನು ಇಕ್ಕುವನು ನನ್ನಿಯನೆ ನುಡಿಯುವನು
ತನ್ನವರು ಎನ್ನುವನು ತಾಣಕ್ಕೆ ಬಂದವರನು
ನಿಮ್ಮ ಕಾರುಣ್ಯಪಾಶ ಬಿಗಿದಿಟ್ಟ ಸಂಸ್ಕೃತಿ ಸ್ನೇಹ
ಹಮ್ಮನರಿದು ನಿಮ್ಮ ನರ್ಪಿಸುವ ಒಮ್ಮನದಗೇಹ
ಕಾರುಣ್ಯ ಮೂರ್ತಿಯಾಗಿ ಚರಮಧುರ ಕೀರ್ತಿಯಾಗಿ
ಅರಳಿಹಾ ಅನುದಿನದ ಬದುಕಪೂರ್ತಿಯಾಗಿ
ದ್ವಾದಶವರುಷಗಳು ಉರುಳಿದವು ಹರುಷದಲಿ
ಸಾದೃಶವಾಗಿರಲಿ ನಿಮಗೆ ಶತ ಆಯುರುಷದಲಿ
ಓ ಮಹಾಂತ, ಹೃನ್ಮದ ಅಹಂತ
ಓಮ ಶಾಂತ, ಶಿವ ಭ್ರಾಂತ, ನಿಶ್ಚಿಂತ.

ಇತಿ ಶಿವಂ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೪ ಬಸವ ಜ್ಯೋತಿ :

ರಚನೆ :– ಡಾ. ಮಾಣಿಕರಾವ ಧನಶ್ರೀ.

ಜ್ಯೋತಿ ಜಗವ ಬೆಳಗೆ
ಬಸವನ ಜ್ಯೋತಿ ಜಗವ ಬೆಳಗೆ ॥ಪ॥

ಬಾಗೆವಾಡಿಯೊಳು ಜನಿಸಿದ ಜ್ಯೋತಿ
ಮಾತಾಪಿತರನು ತಣಿಸಿದ ಜ್ಯೋತಿ
ಜಾತವೇದಮುನಿ ಗುರುಕುಲ ಜ್ಯೋತಿ
ಕೂಡಲಸಂಗನ ಕರುಣೆಯ ಜ್ಯೋತಿ ೧

ನಾಗಲಾಂಬಿಕೆಯ ಮಮತೆಯ ಜ್ಯೋತಿ
ಮಹಾದೇವಿಯಕ್ಕನ ಅರುಹಿನ ಜ್ಯೋತಿ
ಚನ್ನಬಸವನ ಚಿನ್ಮಯ ಜ್ಯೋತಿ
ಸಿದ್ಧರಾಮನ ಶ್ರದ್ಧೆಯ ಜ್ಯೋತಿ ೨

ಗಂಗಾಂಬಿಕೆಯ ಕಂಗಳ ಜ್ಯೋತಿ
ನೀಲಾಂಬಿಕೆಯ ಮಂಗಳ ಜ್ಯೋತಿ
ಬಲದೇವರಸನ ಒಲವಿನ ಜ್ಯೋತಿ
ಬಿಜ್ಜಳರಾಯನ ಬಲಗೈ ಜ್ಯೋತಿ ೩

ಅಲ್ಲಮದೇವರ ಪ್ರೀತಿಯ ಜ್ಯೋತಿ
ಶರಣ ಶರಣೆಯರ ನೀತಿಯ ಜ್ಯೋತಿ
ಕಲ್ಯಾಣಪುರದ ಕ್ರಾಂತಿಯ ಜ್ಯೋತಿ
ಸಮತೆಯ ಸಾರಿದ ಶಾಂತಿಯ ಜ್ಯೋತಿ ೪

ಕಾಯಕ ಮಹಿಮೆಯ ಕಲಿಸಿದ ಜ್ಯೋತಿ
ಆಯಕೆ ಮಿತಿಯನು ಹಾಕಿದ ಜ್ಯೋತಿ
ಮೂಢರೂಢಿಗಳ ಅಳಿಸಿದ ಜ್ಯೋತಿ
ಕೂಡಲಸಂಗನ ಕೂಡಿದ ಜ್ಯೋತಿ ೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೫ ವಚನಗಳು :

○ ಅನ್ನದಾನಯ್ಯ ಪುರಾಣಿಕ ಬೆಂಗಳೂರು-9.

(೧) ಸಂಘಸಂಸ್ಥೆಗಳಿಂದು ಸ್ವಾರ್ಥಿಗಳ ಸದನಗಳಯ್ಯ
ಶಾಲೆ ಕಾಲೇಜುಗಳಿಂದು ಪುಂಡರ ತಾಣಗಳಯ್ಯ
ಕಾರ್ಖಾನೆಗಳಿಂದು ಉಂಡಾಡಿಗಳ ಕೇಂದ್ರಗಳಯ್ಯ
ಕೋರ್ಟು ಕಛೇರಿಗಳಿಂದು ಲಂಚದ ತವರುಗಳಯ್ಯ
ಶ್ರೀ ಗುರು ಸಿದ್ಧಲಿಂಗೇಶ್ವರಾ ಭಾರತವಿಂದು
ಸಾಕ್ಷಾತ್ ನರಕವಯ್ಯ

(೨) ಸ್ತುತಿ ಸನ್ಮಾನಗಳು ತಮ್ಮ ಬೇಳೆ ಬೆಯುವತನಕ.
ಸೇವೆ ಸಂಕೀರ್ತನೆಗಳು ಅಧಿಕಾರವಿರುವ ತನಕ,
ನಯ ವಿನಯ ನಮನಗಳು ಸಿರಿ ತೀರುವ ತನಕ
ಶೋಷಕರ ವಂಚಕರ ರೀತಿನೀತಿಗಳಯ್ಯ
ಶ್ರೀ ಗುರು ಸಿದ್ಧಲಿಂಗೇಶ್ವರಾ

(೩) ಹಣದ ಹಂಬಲವು ಹುಸಿಯನಾಡಿಸುವುದಯ್ಯ
ಕೊಲೆ ಸುಲಿಗೆ ಹಾದರವ ಮಾಡಿಸುವುದಯ್ಯ.
ಸತಿಸುತ ಮಾತಾ ಪಿತರನಗಲಿಸುವುದನಯ್ಯ
ಪಾಪಗಳ ಕೂಪಕ್ಕೆ ನರರ ನೂಕುವುದಯ್ಯ
ಶ್ರೀ ಗುರು ಸಿದ್ಧಲಿಂಗೇಶ್ವರಾ

(೪) ಹುಸಿದೊಡಲಿಗೆ ಅನ್ನ ನೀಡರು,
ಬರಿಮೈಗೆ ಬಟ್ಟೆ ಹೊದಿಸರು,
ಬಿದ್ದವನ ಮೇಲಕೆತ್ತರು
ದುಃಖಿತನ ಸಂತೈಸರು,
ಬರಿದೆ, ಸಾಧು ಸಂತರೆಂದು ಮೆರೆವರಯ್ಯ
ಶ್ರೀ ಗುರು ಸಿದ್ಧಲಿಂಗೇಶ್ವರಾ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೫) ತಮ್ಮ ಹೆಸರನು ಶಾಶ್ವತವಾಗಿ ಅಳಿಸಲೆಂದು
ಸ್ಥಾವರ ತೊರೆದು ಜಂಗಮವ ಮೆರೆದರಯ್ಯ
ಬಸವಾದಿ ಪ್ರಮಥರು,
ತಮ್ಮ ಹೆಸರನು ಶಾಶ್ವತವಾಗಿ ಉಳಿಸಲೆಂದು
ಜಂಗಮವ ತೊರೆದು ಸ್ಥಾವರವ ನಂಬಿಹರಯ್ಯ
ಇಂದಿನ ಮರುಳ ಮಾನವರು
ಶ್ರೀ ಗುರು ಸಿದ್ಧಲಿಂಗೇಶ್ವರಾ.

(೬) ಇಂದು ನರನ ನಾಡಿಗಳು ತುಂಬಿಹುದು ತಾಮಸ
ಅವನ ರೋಮಗಳಲಿ ನೆಲಸಿಹುದು ಮೋಸ,
ಅವನು ಆಡುವುದು ಒಂದು ಮಾಡುವುದು
ಮತ್ತೊಂದು, ನಡೆ ನುಡಿಗಳಲಿ ಮೇಳವಿಲ್ಲದ
ಮನುಜನೇ ಮಾನ್ಯನಾಗಿಹನಿಂದು
ಶ್ರೀ ಗುರು ಸಿದ್ಧಲಿಂಗೇಶ್ವರಾ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೬ "ಧರ್ಮ ಜ್ಯೋತಿ"

ಶ್ರೀ ಮಹಾಂತ ಶಿವಾಚಾರ್ಯರು

ಲೇಖಕರು : ಶ್ರೀ ಮಹಾದೇವಪ್ಪ ಜಿ. ನಂದ್ಯಾಳ ಸಹ ಶಿಕ್ಷಕರು,
ಮು॥ ಚಿಂಚನಸೂರ, ತಾ॥ ಆಳಂದ, ಜಿ॥ ಗುಲಬರ್ಗಾ.

ಮಾನವನ ಜೀವನದಲ್ಲಿ ಮನುಷ್ಯ ಬಾಳಿ ಬದುಕಬೇಕಾದರೆ ಅವನಿಗೆ ಶಾಂತಿ, ನೆಮ್ಮದಿಗಳು ಬೇಕೆ, ಬೇಕು, ಅಂಥ ಶಾಂತಿ, ನೆಮ್ಮದಿಗಳು ನೆಲೆಸಬೇಕಾದರೆ ಅವನಿಗೆ ಜೀವನದಲ್ಲಿ ಬೇಕಾದುದ್ದು ಅಮೂಲ್ಯವಾದ ವಸ್ತು ಧರ್ಮ. ಧರ್ಮ ಮನುಷ್ಯನ ಜೀವನದಲ್ಲಿ ಅತಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಧರ್ಮದಿಂದಲೇ ಮನುಷ್ಯನಿಗೆ ಶಾಂತಿ, ನೆಮ್ಮದಿ, ಸುಖ ಸಿಗುತ್ತಡೆ ಆದಕ್ಕಾಗಿ "ಧರ್ಮೋ ರಕ್ಷತೋ, ರಕ್ಷತಾಂ", ನಾವು ಧರ್ಮವನ್ನು ರಕ್ಷಿಸಿದರೆ. ಧರ್ಮ ನಮ್ಮನ್ನು ರಕ್ಷಿಸುತ್ತದೆ, ಎಲ್ಲಿ ಧರ್ಮವಿದೆಯೋ, ಅಲ್ಲಿ ಜಯವಿದೆ, ಎಲ್ಲಿ ಸತ್ಯವಿದಯೋ ಅಲ್ಲಿ ಧರ್ಮವಿದೆ. ಎಂಬ ಮಾತು ಅಕ್ಷರಂಶ ಸತ್ಯವಾಗಿದೆ. ಅದಕ್ಕಾಗಿಯೇ ರಾಮಾಯಣ, ಮಹಾಭಾರತಗಳ ಧರ್ಮ ಮಾರ್ಗದಲ್ಲಿ ಪ್ರಸಿದ್ಧಿಯನ್ನು ಪಡೆದಿವೆ ಎಲ್ಲಿ ಧರ್ಮ ಅವನತಿ ಹೊಂದುತ್ತದೆಯೋ ಎಲ್ಲಿ ಧರ್ಮ ಕೀಳು ಮಟ್ಟಕ್ಕೆ ಮುಟ್ಟುತ್ತದೆಯೋ, ಆಗ ಅಲ್ಲಿ ಅಶಾಂತಿ, ದುಃಖ ತಾಂಡವವಾಡುತ್ತದೆ ಅನ್ಯಾಯ, ಅತ್ಯಾಚಾರ, ಭ್ರಷ್ಟಾಚಾರ, ಕೊಲೆ, ಸುಲಿಗೆ, ಕಳ್ಳತನ ಮೋಸ ಮೊದಲಾದ ಕುಕೃತ್ಯಗಳು ತಾಂಡವವಾಡುತ್ತವೆ. ಅಂಥ ಸಮಯದಲ್ಲಿ ಭಗವಂತನು ಸಾಕ್ಷಾತ್ ಮಾನವ ರೂಪದಲ್ಲಿ ಧರೇಗಿಳಿದು, ದುಷ್ಟರನ್ನು ಸಂಹರಿಸಿ, ಶಿಷ್ಟರ ಪರಿಪಾಲಕನಾಗಿ, ಅಲ್ಲಿ ನೆಲಿಸಿ ಶಾಂತಿ ಸುಖ, ನೆಮ್ಮದಿ, ಸಹಬಾಳ್ವೆ, ಸಹಕಾರ, ದಯೆ ಮೂಡುವಂತೆ ಮಾಡುತ್ತಾನೆ ಎಂಬ ಪ್ರತೀತ ನಮ್ಮ ಇತಿಹಾಸ ಸಾರುತ್ತದೆ. ಅಂತಹ ಅನೇಕ ಜನ್ಮಗಳನ್ನು ತಾಳಿ ಜನರ ಜೀವನವನ್ನು ಉದ್ಧಾರ ಮಾಡುತ್ತ ಬಂದ ಅನೇಕ ಉದಾಹರಣೆಗಳು ನಮ್ಮಲ್ಲಿವೆ ಕರ್ನಾಟಕ ಶರಣರ, ಸಂತರ, ಮಹಾತ್ಮರ, ಸತ್ಪುರುಷರ ಬೀಡಾಗಿದೆ. ಅನೇಕ ಸಾರಿ ಮಾನವನ ಏಳ್ಗೆಗಾಗಿ ಹಲವು ರೂಪತಾಳಿ ಮಾನವನನ್ನು ಒಳ್ಳೆಯದಾರಿಗೆ ತರಲು ಸಾಕಷ್ಟು ಶ್ರಮಿಸಿ ಧರ್ಮ ಜ್ಯೋತಿಯನ್ನು ಬೆಳಗಿಸಿ ನಮ್ಮ ಆತ್ಮದಲ್ಲಿ ನೆಲಿಸಿ ನಿತ್ಯ ದಾರಿ ದೀಪವಾಗಿದ್ದಾರೆ,

ಅಂಥ ಅನೇಕ ಶರಣರ, ಮಹಾತ್ಮರ, ಸತ್ಪುರುಷರ ದಾರಿಯಲ್ಲೆ ಈ ಧರೆಗೆ ಇಳಿದು ಬಂದ ಸಾಕ್ಷಾತ್ ದೇವರ ರೂಪದಲ್ಲಿ ಕಾಣಿಸಿ ಕೊಳ್ಳುತ್ತಿರುವ ಕಲಬುರ್ಗಿಯ ಶ್ರೀ ಮಹಾಂತ ಶಿವಾಚಾರ್ಯರು ಒಬ್ಬರಾಗಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರು ಕ್ರಿ. ಶ. 1962 ರಲ್ಲಿ ಕಲಬುರ್ಗಿ ಜಿಲ್ಲೆ, ಅಫಜಲಪೂರ ತಾಲೂಕಿನ ಬಡದಾಳ ಎಂಬ ಗ್ರಾಮದಲ್ಲಿ ಶ್ರೀ ವೇ॥ ಶರಣಯ್ಯ ಸ್ವಾಮಿ ಮತ್ತು ಶ್ರೀಮತಿ ಪಾರ್ವತಿಬಾಯಿ ಎಂಬ ದಂಪತಿಗಳ ಉದರದಿಂದ ಜನ್ಮವೆತ್ತಿದಾಗಲೇ ಅನೇಕ ಜನರ ಚಕಿತಕ್ಕೆ ಒಳಗಾದರು. ಅವರ ತೇಜಸ್ವಿ, ಪಸನ್ಮುಖ ನೋಡಿ ಎಂಥವರಾದರು ಬೆರಗಾಗುತ್ತಿದ್ದರು.

ಬೆಳೆಯುವ ಪೈರು ಮೊಳಕೆಯಲ್ಲಿಯೆ ನೋಡು ಎನ್ನುವಂತೆ ಅವರು ಬಿದಿಗೆಯ ಚಂದ್ರನಂತೆ ಬೆಳೆಯತೊಡಗಿದರು. ತಂದೆ-ತಾಯಿಗಳಿಗೆ ಮಗನ ಆಟ-ಪಾಟಗಳನ್ನು ನೋಡಿ ಎಲ್ಲಿಲ್ಲದ ಉತ್ಸಾಹ, ಸಂತೋಷಗಳಾಗುತ್ತಿದ್ದವು. ಇವರು ಬಾಲ್ಯದಲ್ಲಿ ಹೆಚ್ಚಾಗಿ ಗೆಳೆಯರ ಜೊತೆಯಲ್ಲಿ ಇರುವಾಗ ತಮಗೆ ತಿಳಿದ ಧರ್ಮ, ಪರಮಾತ್ಮನ ವಿಷಯಗಳನ್ನು ತಿಳಿಸುತ್ತಿದ್ದರು. ಯಾವಾಗಲೂ ಬಾಲ್ಯದಲ್ಲಿ ಭಸ್ಮವನ್ನು ಧರಿಸುತ್ತಿದ್ದರು. ಇವರು ಲಿಂಗ ಪೂಜೆಗೆ ಕುಳಿತಾಗ ಕೆಲವೊಮ್ಮೆ ಇವರು ತಮ್ಮನ್ನೇ ತಾವು ಮರೆಯುತ್ತಿದ್ದರು. ಇದನ್ನು ನೋಡಿ ತಂದೆ ಆಗಾಗ ಮನೆಯಲ್ಲಿ ಈ ರೀತಿ ಹೇಳುತ್ತಿದ್ದರು. ಮುಂದೆ ಇವನೊಬ್ಬ ದೊಡ್ಡ ಮಹಾತ್ಮನಾಗುತ್ತಾನೆ ಲೋಕದ ಜನತೆಯ ಉದ್ಧಾರಕ್ಕೆ ಇವನನ್ನು ಧಾರೆಯರೆಯೋಣವೆಂದು ಹೇಳುತ್ತಿದ್ದರು. ತಂದೆಯ ಅಭಿಲಾಷೆಯತೆ ಮಗನನ್ನು ಹುಟ್ಟೂರಿನಲ್ಲೇ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಯಿತು. ಮುಂದೆ ಹೆಚ್ಚಿನ ಶಿಕ್ಷಣಕ್ಕಾಗಿ ಮತ್ತು ಧರ್ಮದ ಮಾರ್ಗದಲ್ಲಿ ನಡೆಯುವಂತಾಗಲು ಇವರನ್ನು ಮಹಾರಾಷ್ಟ್ರ ರಾಜ್ಯದ ಪವಿತ್ರ ಸ್ಥಳವಾದ ಸೋಲಾಪೂರ ರೇವಣಸಿದ್ಧ ಆಶ್ರಮಕ್ಕೆ ಕರೆದುಕೊಂಡು ಹೋದರು. ಅಲ್ಲಿಯೇ ಮಠಾಧ್ಯಕ್ಷರಾದ ಶ್ರೀ ವೀರ ತಪಸ್ವಿ ಷ. ಬ್ರ, ವೀರಭದ್ರ ಶಿವಾಚಾರ್ಯರು ಈ ಬಾಲಕನನ್ನು ಒಮ್ಮೆ ಕಣ್ತುಂಬ ನೋಡಿ ಹರ್ಷಿತರಾಗಿ ತಮ್ಮ ಆಶ್ರಮದಲ್ಲಿ ಇಟ್ಟುಕೊಳ್ಳಲು ಒಪ್ಪಿದರು.

ಅಲ್ಲಿಯ ದಿನನಿತ್ಯ ಕಾರ್ಯಕ್ರಮಗಳಾದ ನಸುಕಿನಲ್ಲಿಯೇ ತಣ್ಣೀರುಸ್ನಾನ, ಸಂಸ್ಕೃತ ವೇದಾಧ್ಯಯನ, ಪ್ರವಚನ, ಕೀರ್ತನ, ರುದ್ರ, ಯೋಗ ಮೊದಲಾದವುಗಳನ್ನು ಕಲಿಸುತ್ತಿದ್ದರು. ಸ್ವಲ್ಪ ದಿವಸಗಳಲ್ಲಿ ಅವನ್ನೆಲ್ಲ ಮೈಗೂಡಿಸಿಕೊಂಡರು. ಗುರುಗಳು ಹೇಳಿದ ವಿಷಯವನ್ನೆಲ್ಲ ಭಯ-ಭಕ್ತಿ, ಶ್ರದ್ಧೆಗಳಿಂದ ಕಲಿತು ಎಲ್ಲದರಲ್ಲಿಯೂ ನಿಪುಣರಾದರು. ಸಂಸ್ಕೃತ ವೇದಾಧ್ಯಯನ ಇವರಿಗೆ ಸುಲಿದ ಬಾಳೆ ಹಣ್ಣಿನಂತಾಯಿತು. ಇದನ್ನೆಲ್ಲ ಕಂಡು ಗುರುಗಳಿಗೆ ಬಹಳ ಸಂತೋಷವಾಗುತ್ತಿತ್ತು, ಮುಂದೆ ಗುರುಗಳು ಅನೇಕ ಧಾರ್ಮಿಕ ಸಭೆಗಳಿಗೆ ಹಾಜರಾಗುತ್ತಿದ್ದಾಗ ಇವರನ್ನು ಸಂಗಡ ಕರೆದೊಯ್ಯುತ್ತಿದ್ದರು. ಅಲ್ಲಿ ಇವರಿಗೆ ಪ್ರವಚನ ಮಾಡಲು ಅವಕಾಶ ಕೊಡಿಸುತ್ತಿದ್ದರು, ಇವರ ವಾಕ್‌ಚಾತುರ್ಯ, ಸಾಹಿತ್ಯ, ಶಬ್ದ ಜೋಡನೆ ಸಂದರ್ಭಕ್ಕೆ ತಕ್ಕಂತೆ ವಚನ, ಹಾಸ್ಯ, ಇವನೆಲ್ಲ ಕಂಡು ಸಭೆಯಲ್ಲಿದ್ದವರಿಗೆಲ್ಲ ದಂಗು ಬಡಿಸುತ್ತಿತ್ತು, ಮತ್ತು ಇವರನ್ನು ಬಾಯ್ತುಂಬ ಹೊಗಳುತ್ತಿದ್ದರು.

ಇವರ ಅಭ್ಯಾಸ ಮುಂದುವರೆಯುತ್ತಿರುವಾಗಲೇ ಪೂಜ್ಯ ಗುರುಗಳು ಇವರನ್ನು ಮಠಕ್ಕೆ ಮಾಡಲು ಜನರ ಉದ್ಧಾರದ ಕೆಲಸಕ್ಕೆ ನೇಮಿಸಲು ಹವಣಿಸತೊಡಗಿದರು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಗ ಅದೇ ಸಮಯಕ್ಕೆ ಶಹಾಬಜಾರದ ಎಲ್ಲ ಪ್ರಮುಖ ಪಂಚರು ಸೋಲ್ಲಾಪೂರಕ್ಕೆ ಹೋಗಿ ತಮ್ಮ ಮಠಕ್ಕೆ ಒಬ್ಬ ಯೋಗ್ಯರಾದ ಮರಿ ಬೇಕಾಗಿದೆ ತಾವು ಯಾರನ್ನ ಕಳಿಸಿ ಕೊಡುತ್ತಿರಿ ಅವರನ್ನು ಮಠಕ್ಕೆ ಮಾಡುತ್ತೇವೆ ಎಂದು ಭಿನ್ನವಿಸಿಕೊಂಡರು, ಆಗ ಅದೇ ಮಠಕ್ಕೆ ಬಂದ ಅನೇಕ ಪೂಜ್ಯ ಮಹಾಸ್ವಾಮಿಗಳು ಆ ಮಠಕ್ಕೆ ಆಸ್ತಿ ಪಾಸ್ತಿ ಏನಿದೆ ಎಂದು ಕೇಳಿದಾಗ, ಪಂಚರು ಏನಿಲ್ಲ ಎಂಬ ಭಾವವನ್ನು ವ್ಯಕ್ತ ಪಡಿಸಿದರು, ಆಗ ವೀರಭದ್ರ ಶಿವಾಚಾರ್ಯರು ಒಂದು ಮಾತನ್ನು ಉಳಿದವರನ್ನು ಕುರಿತು ಈ ರೀತಿ ಹೇಳಿದರು. "ಮಠದಿಂದ ಘಟವಾಗಬಾರದು,- ಘಟದಿಂದ ಮಠ ವಾಗಬೇಕು," ಎಂದು ಹೇಳಿ ಶಹಾಬಜಾರ ಸುಳಫಲ ಮಠಕ್ಕೆ ಇವರನ್ನು ಕಿಡಲು ಒಪ್ಪಿದರು. ಅವರು ಪಂಚರನ್ನು ಕುರಿತು "ಇದು ಸಾಧಾರಣ ಮರಿ ಅಲ್ಲ, ಇದು ಮುಂದೆ ಬೆಳೆದು ಹೆಮ್ಮರವಾಗಿ, ಬೇಡಿದವರಿಗೆ ಬೇಡಿದ ವರವನ್ನು ಕಲ್ಪಿಸುವ ಮರ ವಾಗುತ್ತದೆ ಇದನ್ನು ಜೋಪಾನವಾಗಿ ನಿಮ್ಮ ಮನೆಯ ಮಗನಂತೆ ನೋಡಿ ಎಂದು ಹೇಳಿದರು,

ಮುಂದೆ ಎಲ್ಲರ ಸಮಕ್ಷಮದಲ್ಲಿ ನಿಯಮಿಸಿದಂತೆ ಇವರನ್ನು ಕ್ರಿ.ಶಕೆ ೧೯೦೩ (1903) ದುರ್ಮತಿನಾಮ ಸಂವತ್ಸರ ಆಶ್ವಿನ ಮಾಸ ಶುದ್ಧ ೧೦, ಗುರುವಾರ ದಿನಾಂಕ ೮-೧೦-೧೯೮೧ ಮುಂಜಾನೆ ೯ ಗಂಟೆಗೆ ಶುಭಮುಹೂರ್ತದಲ್ಲಿ ಉತ್ತರಾಧಿ ಕಾರಿಗಳಾದ ಶ್ರೀ ಬಾಲಶಿವಯೋಗಿ ಸಿದ್ದರಾಮ ಇವರನ್ನು ಚರ-ಸ್ಥಿರ ಪಟ್ಟಾಧಿಕಾರವು ಜರುಗಿ ನೂತನ ನಾಮಾಂಕಿತ ಶ್ರೀ ಬಾಲಶಿವಯೋಗಿ ಷ. ಬ್ರ. ಮಹಾಂತ ಶಿವಾ ಚಾರ್ಯರಾಗಿ ಅಧಿಕಾರ ವಹಿಸಿಕೊಂಡರು.

ಅಧಿಕಾರ ವಹಿಸಿಕೊಂಡ ಮೇಲೆ ಮಠವನೆಲ್ಲ ನೋಡಿ, ಅಲ್ಲಿಯ ಭಕ್ತರ ಪ್ರೀತಿ, ವಿಶ್ವಾಸ ಭಯ-ಭಕ್ತಿಗಳನ್ನು ಕಂಡು ಬಹಳ ಸಂತೋಷ ಪಡುತ್ತಿದ್ದರು. ಆದರೆ ಅಲ್ಲಿಗೆ ಆಗಮಿಸುತ್ತಿದ್ದ ಅನೇಕರು ಈ ಮಠದಲ್ಲಿ ಏನಿಲ್ಲ ಎಂಬ ಭಾವನೆಯನ್ನು ವ್ಯಕ್ತ ಪಡಿಸುತ್ತಿದ್ದರು. ಆಗ ಅವರಿಗೆ ಇಡೀ ಕಲಬುರ್ಗಿ ಜನರ ಪ್ರೀತಿ, ವಿಶ್ವಾಸವೇ ನನ್ನ ಆಸ್ತಿ, ಭಕ್ತರ ಆಸ್ತಿಯೇ ನನ್ನ ಆಸ್ತಿ ಎಂದು ಹೇಳುತ್ತಿದ್ದರು.

ಮುಂದೆ ಧರ್ಮದ ಉದ್ಧಾರಕ್ಕಾಗಿ, ವಿಶ್ವಶಾಂತಿಗಾಗಿ ಮಳೆರಾಯನ ಆಗಮನ ಕ್ಕಾಗಿ ಸುಲ್ತಾನಪುರ ಮಠದಲ್ಲಿ ಶ್ರೀ ಶಕೆ 1904 ದುಂದುಭಿನಾಮ ಸಂವತ್ಸರ ಜೇಷ್ಠ ವದ್ಯ ೨ ಮಂಗಳವಾರ ದಿನಾಂಕ 8-6-82 ರಂದು ಅನುಷ್ಠಾನವನ್ನು ಪ್ರಾರಂಭಿಸಿ 21 ದಿವಸ ಅನುಷ್ಠಾನ ಮಾಡಿದರು. ಅವರ ತಪಸ್ಸಿನ ಫಲವಾಗಿ ಮಳೆರಾಯನ ಆಗಮನದಿಂದ ಭಕ್ತರ ಉತ್ಸಾಹಕ್ಕೆ ಮೆರೆಯೇ ಇಲ್ಲದಂತಾಯಿತು, ಮುಂದೆ ಕಲಬುರ್ಗಿಯ ಸುಳಫಲ ಮಠದಲ್ಲಿ ಪ್ರತಿ ವರ್ಷ ಭಾದ್ರಪದ ತಿಂಗಳು "ವೀರ ತಪಸ್ವಿ" ಲಿಂ॥ ಶ್ರೀ ಷ, ಬ್ರ, ಚನ್ನವೀರ ಮಹಾಸ್ವಾಮಿಗಳ ಪುಣ್ಯತಿಥಿ ಅಂಗವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವೈಭವ ಪೂರಿತವಾಗಿ ನಡೆಸಿಕೊಂಡು ಬರುತ್ತಿದ್ದಾರೆ,

ಅಷ್ಟೆ ಅಲ್ಲದೆ ಇಂದಿನ ಈ ವೈಜ್ಞಾನಿಕ ಯುಗದಲ್ಲಿ ಧರ್ಮ ನಶಿಸಿ, ಜನರಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರ್ಮದ ಮೇಲೆ ಭಕ್ತಿ ಇಲ್ಲದಂಥ ಈ ಸಂದರ್ಭದಲ್ಲಿ ಧರ್ಮದ ಪುನರ ಜೀವನಕ್ಕಾಗಿ ದೇಶದಲ್ಲಿ ಶಾಂತಿ, ಸುಭಿಕ್ಷೆ, ನೆಲೆಸುವುದಕ್ಕಾಗಿ ಮಾನವ ಸಮುದಾಯದ ಉದ್ಧಾರ ವಾಗಲೆಂದು ಗುಲಬರ್ಗಾ ಮಹಾನಗರಕ್ಕೆ ದಿನಾಂಕ 10-2-1988 ರಂದು ಜಗದ್ಗುರು ಶ್ರೀ ವೀರಸಿಂಹಾಸನಾಧೀಶ್ವರ ರಂಭಾಪುರಿ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರ ರುದ್ರ ಮುನಿದೇವ ಶಿವಾಚಾರ್ಯರು ರಾಜ ದೇಶಿಕೇಂದ್ರ ಹಾಗೂ ಶ್ರೀ ಉಜ್ಜೈನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಮರುಳಾರಾಧ್ಯ ಶಿವಾಚಾರ್ಯ ಮಹಾ ಸನ್ನಿಧಿಯವರನ್ನು ಬರಮಾಡಿಕೊಂಡು ಇಡೀ ಕಲಬುರ್ಗಿ ಜನತೆಗೆ ದರ್ಶನಾಶಿರ್ವಾದ ಮಾಡಿಸಿ ಜನರನ್ನು ಉದ್ಧಾರಗೊಳಿಸಿದರು. ಅದೇ ರೀತಿಯಾಗಿ ದಿನಾಂಕ 24-11-1988 ರಂದು ಶ್ರೀಶೈಲ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರನ್ನು, ದಿನಾಂಕ 8-9-1990 ರಂದು ಶ್ರೀ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರ ಮಹಾಸ್ವಾಮಿಗಳ ಹಾಗೂ ಜಗದ್ಗುರು ರಂಭಾಪುರಿ ಮಹಾಸನ್ನಿಧಿಯವರನ್ನು, ದಿನಾಂಕ 4-1-1991 ರಂದು ನೂತನವಾಗಿ ಕಟ್ಟಲ್ಪಟ್ಟ ಅಂಗಡಿ ಉದ್ಘಾಟನಾ ಸಮಾರಂಭಕ್ಕೆ ಜಗದ್ಗುರು ೧೦೦೮ ಶ್ರೀ ಶ್ರೀ ಶ್ರೀ ಸಿದ್ದೇಶ್ವರ ಲಿಂಗ ಶಿವಾಚಾರ್ಯ ಹಿಮವತ್ಕೇದಾರ ಮಹಾ ಸನ್ನಿಧಿಯ ವರನ್ನು ದಯಮಾಡಿಸಿಕೊಂಡರು. ಹೀಗೆ ಕಲಬುರ್ಗಿ ಮಹಾನಗರಕ್ಕೆ ಐದು ಮಂದಿ ಪಂಚಾಚಾರ್ಯ ಜಗದ್ಗುರುಗಳನ್ನು ಬರಮಾಡಿಸಿಕೊಂಡು ಇಡೀ ಭಕ್ತ ಸಮುದಾಯಕ್ಕೆ ದರ್ಶನಾಶಿರ್ವಾದಗಳನ್ನು ಮಾಡಿಸಿದ್ದಾರೆ,

ಅಷ್ಟೆ ಅಲ್ಲದೆ ಇಂದು ನಮ್ಮ ಸಮಾಜದಲ್ಲಿ ವಿರಕ್ತರು ಪಂಚಾಚಾರ್ಯರು ಶ್ರೇಷ್ಠ ಎಂಬ ವಾದದಿಂದ ಅನೇಕ ಭೇಧಗಳಿವೆ ಆದರೆ ಪೂಜ್ಯ ಮಹಾಸ್ವಾಮಿಗಳು ಯಾವ ಭೇಧ ಭಾವವಿಲ್ಲದೆ ಎಲ್ಲರೂ ಸಮಾನರು, ಎಲ್ಲ ಧರ್ಮಗಳ ಸಾರ ಒಂದೇ ಎಂಬ ಭಾವನೆ ಗುರುಗಳಲ್ಲದೆ ಅದಕ್ಕಾಗಿ ಅವರು ಯಾವ ಕಾರ್ಯಕ್ರಮವೇ ಇರಲಿ ಒಪ್ಪಿಕೊಂಡು ಹೋಗುತ್ತಾರೆ ಮತ್ತು ತಮ್ಮ ಮಠಕ್ಕೆ ಅವರನ್ನು ಆಹ್ವಾನಿಸುತ್ತಾರೆ, ಈ ಮಠಕ್ಕೆ ಪರಮಪೂಜ್ಯ ಮ, ನಿ, ಪ್ರ, ಷಡಕ್ಷರಿ ಸಿದ್ಧರಾಮ ಶಿವಯೋಗಿಗಳು ಜಿಡಗಾ. ತ್ರಿಮೂರ್ತಿ ಮಹಾರಾಜರು ಗೊಳಸಾರ ಇನ್ನು ಅನೇಕ ಮಹಾಸ್ವಾಮಿಗಳು ಯಾವ ಭೇದವಿಲ್ಲದೆ ಮಹಾಮಠಕ್ಕೆ ಆಗಮಿಸಿದ್ದಾರೆ ದಿನಾಂಕ 19-1-1993 ರಂದು ಮಂಗಳವಾರ ಪೂಜ್ಯ ಜಗದ್ಗುರು ಮ, ನಿ, ಪ್ರ. ಗಂಗಾಧರ ಯೋಗಿ ರಾಜೇಂದ್ರ ಮಹಾಸ್ವಾಮಿಗಳು ಮೂರು ಸಾವಿರ ಮಠ ಹುಬ್ಬಳ್ಳಿ ಇವರನ್ನು ಕರೆಯಿಸಿ ಅವರ ಷಷ್ಠಬ್ದಿ ಸಮಾರಂಭವನ್ನು ಏರ್ಪಡಿಸಿದರು,

ಇವರು ಮಾಡುವ ಸಮಾಜ ಸೇವೆ ಧರ್ಮಕಾರ್ಯವನ್ನು ಕಂಡು ಪಂಚಾಚಾರ್ಯ ಜಗದ್ಗುರುಗಳು ದಿನಾಂಕ 8-2-1990 ರಂದು ರಾಯಚೂರ ಜಿಲ್ಲೆಯ ಗಾರಲದಿನ್ನಿ ಕಾರ್ಯಕ್ರಮಕ್ಕೆ ಇವರನ್ನು ಆಮಂತ್ರಿಸಿ "ಪುರಾಣ ಪ್ರವಚನಾ ಚಾರ್ಯ" ಎಂಬ ಬಿರದನ್ನು ದಯಪಾಲಿಸಿದ್ದಾರೆ. ಅದೇ ರೀತಿ ಬಿಚ್ಚಾಲ್ಲಿ ಕಾರ್ಯ ಕ್ರಮದಲ್ಲಿ ಜಗದ್ಗುರುಗಳು ಇವರಿಗೆ "ಧರ್ಮ ಜ್ಯೋತಿ" ಎಂಬ ಬಿರುದನ್ನು ನೀಡಿ ಸನ್ಮಾನಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಸ್ತ ಹಿಂದೂ ಧರ್ಮದವರಿಗೂ ಉಪಯುಕ್ತವಾದ ಪವಿತ್ರ ದೇವತಾ ಸ್ತೋತ್ರಗಳು.

ಸಂಗ್ರಹಕಾರರು : **ಜಿ.ಡಿ. ಅಣಕಲ.**

ವಿಘ್ನೇಶ್ವರ ಸ್ತೋತ್ರ–ಲಂಬೋದರಂ ಪರಮ ಸುಂದರಮೇಕದಂತಂ ರಕ್ತಾಂತ ದೀರ್ಘನಯನಂ ಪರಮಂ ಪವಿತ್ರಂ! ಉದ್ಯದ್ದಿವಾಕರ ಕರೋಜ್ವಲ ಕಾಂತಿಕಾಂತಂ ವಿಘ್ನೇಶ್ವರಂ ಸಕಲ ವಿಘ್ನಹರಂ ನಮಾಮಿ ॥೧॥

ಈಶ್ವರ ನಮಸ್ಕಾರ ಸ್ತೋತ್ರ– ನಮಸ್ತೇ ನಮಸ್ತೇ ಮಹಾದೇವ ಶಂಭೋ ! ನಮಸ್ತೇ ನಮಸ್ತೇ ಪ್ರಸನ್ನೈಕ ಬಂದೋ ! ನಮಸ್ತೇ ನಮಸ್ತೇ ದಯಾಸಾರ ಸಿಂದೋ ! ನಮಸ್ತೇ ನಮಸ್ತೇ ಮಹೇಶ ॥೨॥

ದೇವಿ (ಪಾರ್ವತಿ) ದರ್ಶನ ಸ್ತೋತ್ರ— ಕೈಲಾಸಾಚಲಕಂದರಾಲಯಕರೀ ಗೌರೀ ಉಮಾಶಂಕರೀ ಕೌಮಾರೀ ನಿಗಮಾಂತಗೋಚರಕರೀ ಓಂಕಾರ ಬೀಜಾಕ್ಷರೀ! ಮೋಕ್ಷದ್ವಾರ ಕವಾಟಪಾಟನಕರೀ ಕಾಶೀಪುರಾಧೀಶ್ವರೀ. ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥೩॥

ನಂದೀಶ್ವರ ಧ್ಯಾನ— ನಂದೀಶ್ವರ ನಮಸ್ತುಭ್ಯಂ ಶಾಂತಾನಂದ ಪ್ರದಾಯಕಮ್ ! ಮಹಾದೇವೇಶ ಸೇವಾರ್ಥಂ ಅನುಜ್ಞಾಂ ದಾತುಮರ್ಹಸಿ ॥೪॥"

(ಶಿವಾಲಯ ಪ್ರವೇಶವಾದೊಡನೆ ಮೊದಲು ನಂದೀಶ್ವರನನ್ನು ಧ್ಯಾನಿಸಿ ಆತನ ಅಪ್ಪಣೆ ಹೊಂದಿ, ತರುವಾಯ ಶಿವನ ದರ್ಶನ ಮಾಡಿಕೊಳ್ಳುವುದುಚಿತ.)

ಈಶ್ವರ ದರ್ಶನ ವಿವರ—"ವೃಷಸ್ಯ ವೃಷಣಂ ದಷ್ಟ್ವಾ ಈಶ್ವರಸ್ಯಾವಲೋಕನಮ್ ! ಶೃಂಗಮಧ್ಯೇ ಶಿವಂ ದೃಷ್ಟ್ವಾ ಕೈಲಾಸಂ ಭವದಿ ಧೃವಮ್,॥" ಎಂಬುಕ್ತಿಯಂತೆ–ಈಶ್ವರ ದರ್ಶನ ಮಾಡಿಕೊಂಡು ಬರುವಾಗ ನಂದೀಶ್ವರನ ಸಿರಸ್ಸು ಮೊದಲಾಗಿ ಪಾದಪರ್ಯಾಂತರ ಕೈಯಿಂದ ಮುಟ್ಟಿ, ತನ್ನ ಬಲಗೈ ಹೆಬ್ಬೆರಳು–ಅದರ ಹತ್ತರದ ಬೆರಳುಗಳ ತುದಿಯನ್ನು ನಂದೀಶ್ವರನ ಕೋಡುಗಳ ಮೇಲಿರಿಸಿ ಆ ಎರಡೂ ಬೆರಳುಗಳ ಮಧ್ಯಮಾರ್ಗವಾಗಿ ಶಿವನ ದರ್ಶನ ಮಾಡಿಕೊಂಡು ಸ್ವಲ್ಪ ಕೂತು, ಪುನಃ ಶಿವದರ್ಶನಮಾಡಿಕೊಳ್ಳುವದು

ಅಂಜನೇಯ ದರ್ಶನ ಸ್ತೋತ್ರ— ಮನೋಜಪಂ ಮಾರುತ ತುಲ್ಯ ವೇಗಂ ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ! ವಾತಾತ್ಮಜಂ ವಾನರಯೂಥ ಮುಖ್ಯಂ ಶ್ರೀರಾಮದೂತಂ ಶರಣಂ ಪ್ರಪದ್ಯೇ ॥೫॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಹರಿ ದರ್ಶನ ಸ್ತೋತ್ರ—ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ! ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ॥ ಕೃಷ್ಣಾಯ ವಾಸುದೇವಾಯ ಹರಯೆ ಪರಮಾತ್ಮನೇ ! ಪ್ರಣತ ಕ್ಲೇಶ ನಾಶಾಯ ಗೋವಿಂದಾಯ ನಮೋ ನಮ: ॥೬॥

ಶ್ರೀ ದತ್ತಾತ್ರೇಯ ಧ್ಯಾನಮ್—ಜಗದುತ್ಪತ್ತಿ ಕರ್ತ್ರೇಚ ಸ್ಥಿತಿ ಸಂಹಾರ ಹೇತವೇ ! ಪಾಪನಾಶ ವಿಮುಕ್ತಾಯ ದತ್ತಾತ್ರೇಯ ನಮೋಸ್ತುತೇ ॥೭॥

ಶ್ರೀ ಸರಸ್ವತಿ ಧ್ಯಾನ—ಯಾ ಕುಂದೇಂದು ತುಷಾರ ಹಾರಧವಳಾ ಯಾ ಶುಭ್ರವಸ್ತ್ರಾನ್ವಿತಾ ಯಾ ವೀಣಾ ವರದಂಡ ಮಂಡಿತಕರಾ ಯಾ ಶ್ವೇತ ಪದ್ಮಾಸನಾ ! ಯಾ ಬ್ರಹ್ಮಾಚ್ಯುತ ಶಂಕರ ಪ್ರಭೃತಿ ಭಿರ್ದೇವೈಸ್ಸದಾ ಪೂಜಿತಾ ಸಾ ಮಾಂಪಾತು ಸರಸ್ವತೀ ಭಗವತೀ ನಿಶ್ಶೇಷ ಜಾಡ್ಯಾಪಹಾ ॥೮॥

ಈ ಹಿಂದೆ ಬರೆದ ದೇವತಾ ಸ್ತೋತ್ರ-ಧ್ಯಾನಗಳನ್ನು ಉಕ್ತ ಪ್ರಸಂಗದಲ್ಲಿ ಪಠಿಸುವದರಿಂದ ಮನೋಬಯಕೆಗಳ ಅನುಕೂಲತೆಯೂ, ಸೌಭಾಗ್ಯ-ಶಾಶ್ವತೈಶ್ವರ್ಯ ಫಲಸಿದ್ಧಿಯೂ, ಪಾಪ ವಿಘ್ನ-ದಾರಿದ್ರ್ಯ ನಾಶವೂ ಉಂಟಾಗುವುದು.

ಓಂ ಶಾಂತಿ ಶಾಂತಿ ಶಾಂತಿ:

ಸಮಾಪ್ತವಾದುದು

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math. Varanasi
Acc. No. ....7299....

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi